

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 15 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 90 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರಿನ ಪಾಸ್‌ಪೋರ್ಟ್ ಸೇವಾ ಕೇಂದ್ರಕ್ಕೆ ಐದು ವರ್ಷ

ಲಕ್ಷಕ್ಕೂ ಅಧಿಕ ಮಂದಿಗೆ ಪಾಸ್‌ಪೋರ್ಟ್ ಭಾಗ್ಯ



ಮೈಸೂರು, ಜು.14(ಜಿಎ)– ಮೈಸೂರಿನಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭವಾಗಿ ಐದು ವರ್ಷವಾಯಿತು. ಇದುವರೆಗೂ ಲಕ್ಷಕ್ಕೂ ಅಧಿಕ ಮಂದಿ ಕೇಂದ್ರದಿಂದ ಪಾಸ್‌ಪೋರ್ಟ್ ಸೇವೆ ಪಡೆದಿದ್ದಾರೆ.

2017ರಲ್ಲಿ ಮೈಸೂರಿನ ಮೇಟಗಳ್ಳಿಯ ಅಂಚೆ ಕಚೇರಿ ಆವರಣದಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರ ಮಹತ್ವಾಕಾಂಕ್ಷೆಯಂತೆ, ವಿದೇಶಾಂಗ ಸಚಿವರಾಗಿದ್ದ ಸುಷ್ಮಾ ಸ್ವರಾಜ್ ಅವರ ಸಹಕಾರದಿಂದ ಆರಂಭವಾದ ಈ ಪಾಸ್‌ಪೋರ್ಟ್ ಸೇವಾ ▶ 7ನೇ ಪುಟಕ್ಕೆ

ಮೈಸೂರಲ್ಲಿ ಪಾಸ್ ಪೋರ್ಟ್ ಸೇವಾ ಕೇಂದ್ರ ಆರಂಭವಾಗಲು ಮುಖ್ಯ ಕಾರಣಕರ್ತರು ಹಿಂದಿನ ಕೇಂದ್ರ ವಿದೇಶಾಂಗ ಸಚಿವರಾಗಿದ್ದ ಸುಷ್ಮಾ ಸ್ವರಾಜ್ ಮತ್ತು ರಾಜ್ಯದವರೇ ಆಗಿದ್ದ ಅನಂತಕುಮಾರ್. ಇಂದಿಗೂ ಅವರನ್ನು ಸ್ಮರಿಸುತ್ತೇನೆ. ಕಳೆದ 5 ವರ್ಷಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಮಂದಿ ಈ ಕೇಂದ್ರದ ಮೂಲಕ ಪಾಸ್‌ಪೋರ್ಟ್ ಪಡೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಕೇಂದ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಉದ್ದೇಶವಿದೆ.



–ಸಂಸದ ಪ್ರತಾಪ್ ಸಿಂಹ

ಕೊಡಗಲ್ಲಿ ಮುಂದುವರೆದ

ಭಾರೀ ಗಾಳಿ ಮಳೆ

ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್‌ಗೆ ಹಾನಿ



- ರಸ್ತೆ ಸಂಚಾರ ಅಸ್ತವ್ಯಸ್ತ
- ಹಲವೆಡೆ ಕಗ್ಗತ್ತಲು
- ಕಾರ್ಯಾಚರಣೆ ಚುರುಕು
- ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್
- ಕಾವೇರಿ, ಲಕ್ಷ್ಮಣ ತೀರ್ಥದಲ್ಲಿ ಪ್ರವಾಹ

ಮಡಿಕೇರಿ,ಜು.14–ಕಳೆದ 24 ಗಂಟೆಗಳಿಂದ ಸುರಿಯುತ್ತಿರುವ ಭಾರೀ ಗಾಳಿ ಮಳೆಗೆ ಕೊಡಗು ಜಿಲ್ಲೆ ತತ್ತರಿಸಿದ್ದು, ಸಾಲು ಸಾಲು ಮರಗಳು ಮತ್ತು ವಿದ್ಯುತ್ ಕಂಬಗಳು ಧರೆಗುರುಳಿವೆ. ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೂ ಹಾನಿಯಾಗಿದ್ದು, ಜಿಲ್ಲೆಯ ಬಹುತೇಕ ಭಾಗದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ▶ 8ನೇ ಪುಟಕ್ಕೆ



ಕೆಆರ್‌ಎಸ್‌ನಿಂದ 85 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಕಾವೇರಿ ತೀರದ ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಸೇರಿ ಪ್ರವಾಸಿ ಸ್ಥಳಗಳು ಬಂದ್



ಶ್ರೀರಂಗಪಟ್ಟಣ, ಜು.14– ಕೊಡಗು ಹಾಗೂ ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್ ಜಲಾಶಯಕ್ಕೆ ಅಧಿಕ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 85 ಸಾವಿರ ಕ್ಯೂಸೆಕ್‌ಗೂ ಹೆಚ್ಚು ನೀರು ಬಿಡುಗಡೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ನದಿ ಪಾತ್ರದ ಪ್ರವಾಸಿ ತಾಣಗಳಲ್ಲಿ 144 ಸೆಕ್ಷನ್ ಜಾರಿಗೊಳಿಸಿ, ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. ತಾಲೂಕಿನ ವ್ಯಾಪ್ತಿಯ ಕಾವೇರಿ ನದಿ ಪಾತ್ರದ ಪ್ರವಾಸಿ ತಾಣಗಳು ಜಲಾವೃತವಾಗಿರುವುದರಿಂದ ಪ್ರವಾಹದ ಭೀತಿ ಉಂಟಾಗಿದೆ. ಪ್ರವಾಸಿಗರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ನದಿ ದಂಡೆಗಳಿಗೆ ಭೇಟಿ ನೀಡುತ್ತಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಮುಂದಿನ ಆದೇಶದವರೆಗೆ ಎಲ್ಲಾ ಪ್ರವಾಸಿ ತಾಣಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿ ತಹಸೀಲ್ದಾರ್ ಶ್ವೇತಾ ಆದೇಶ ಹೊರಡಿಸಿದ್ದಾರೆ.

ವೆಲ್ಲೆಸ್ಲಿ ಸೇತುವೆ ಬಂದ್: ಜಲಾಶಯದಿಂದ ನದಿಗೆ ಯಾವುದೇ ಸಂದರ್ಭದಲ್ಲಿಯೂ 1.5 ಲಕ್ಷ ಕ್ಯೂಸೆಕ್‌ಗೂ ಹೆಚ್ಚು ನೀರು ಬಿಡುಗಡೆ ಮಾಡುವ ಸಾಧ್ಯತೆ ಇರುವುದರಿಂದ ▶ 7ನೇ ಪುಟಕ್ಕೆ

'ವ್ಯಕ್ತಿ ವೈಭವ' ಚುನಾವಣೆ ಪರಿಪಾಠ ಅಂತ್ಯಕ್ಕೆ ಗಂಭೀರ ಚಿಂತನೆ

ಪಕ್ಷ ಸಿದ್ಧಾಂತ, ಹಿಂದುತ್ವವೇ ಬಿಜೆಪಿ ಚುನಾವಣಾ ಅಸ್ತ್ರ

ಬೆಂಗಳೂರು, ಜು.14(ಕೆಎಂಶಿ)– ಪಕ್ಷದ ಸಿದ್ಧಾಂತ ಹಾಗೂ ಹಿಂದುತ್ವದ ಆಧಾರದ ಮೇಲೆ ಮುಂಬರುವ ವಿಧಾನಸಭಾ ಚುನಾವಣೆಯನ್ನು ಎದುರಿಸುವ ಸಂಬಂಧ ಆರ್‌ಎಸ್‌ಎಸ್ ನಾಳೆ(ಜು.15)ಯಿಂದ ರಾಜ್ಯ ಬಿಜೆಪಿ ಮುಖಂಡರಿಗೆ ಬೈಠಕ್ ನಡೆಸುತ್ತಿದೆ.



- ಇಂದಿನಿಂದ ಎರಡು ದಿನ ಆರ್‌ಎಸ್‌ಎಸ್ ಬೈಠಕ್; ಮುಖ್ಯಮಂತ್ರಿ ಬೊಮ್ಮಾಯಿಯಾದಿಯಾಗಿ ಎಲ್ಲಾ ಸಚಿವರು, ಶಾಸಕರು, ಪ್ರಮುಖ 50 ನಾಯಕರಿಗೆ 'ರಾಜಕೀಯ ತಂತ್ರ' ಪಾಠ
- ದೇವನಹಳ್ಳಿ ಬಳಿ ನಾಗ್ಪುರದ ಆರ್‌ಎಸ್‌ಎಸ್ ನಾಯಕರ ನೇತೃತ್ವದಲ್ಲಿ ನಡೆಯಲಿರುವ ಮಹತ್ವದ ಸಭೆ

ವ್ಯಕ್ತಿ ವೈಭವದ ಆಧಾರದ ಮೇಲೆ ಚುನಾವಣೆ ನಡೆಸುವುದನ್ನು ಬಿಟ್ಟು ಸಿದ್ಧಾಂತ, ಹಿಂದುತ್ವವನ್ನೇ ಮುಂದಿಟ್ಟುಕೊಂಡು ಯಾವ ರೀತಿ ಚುನಾವಣೆ ನಡೆಸಬೇಕು, ಚುನಾವಣೆಗೂ ಮುನ್ನ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬುದನ್ನು ಸಂಘ ಪರಿವಾರದವರು ರಾಜ್ಯದ ನಾಯಕರಿಗೆ ಪಾಠ ಮಾಡಲಿದ್ದಾರೆ.

ದೇವನಹಳ್ಳಿಯ ಹೊರಭಾಗದಲ್ಲಿ ಸಂಘ ಪರಿವಾರದ ನಾಯಕರು ನಡೆಸುತ್ತಿರುವ ಸಭೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದ ಎಲ್ಲಾ ಸಚಿವರು, ಪಕ್ಷದ ಶಾಸಕರು ಹಾಗೂ ಪ್ರಮುಖ 50 ಮುಖಂಡರಿಗೆ ಆಹ್ವಾನ ನೀಡಲಾಗಿದೆ. ಎರಡು ದಿನಗಳ ಕಾಲ ನಾಲ್ಕು ಗೋಡೆಗಳ ಮಧ್ಯೆ ಗೌಪ್ಯವಾಗಿ ಸಭೆ ನಡೆಯಲಿದ್ದು, ಇದರ ನೇತೃತ್ವವನ್ನು ನಾಗ್ಪುರದಿಂದ ಬಂದಿರುವ ಆರ್‌ಎಸ್‌ಎಸ್‌ನ ಮುಖಂಡರು ವಹಿಸಲಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸ್ಥಿತಿಗತಿಯ ಬಗ್ಗೆ ರಾಷ್ಟ್ರಮಟ್ಟದ ಜರ್ವೀಸ್, ನೇಷನ್ ವಿಥ್ ನಮೋ ಹಾಗೂ ಲೀಡ್‌ಟೆಕ್ ಸಂಸ್ಥೆಗಳು ಚುನಾವಣಾ ಸಮೀಕ್ಷೆ ನಡೆಸಿ, ಪ್ರಾಥಮಿಕ ವರದಿ ನೀಡಿವೆ.

ಈ ಪ್ರಾಥಮಿಕ ವರದಿಯನ್ನಾಧರಿಸಿ, ಸಂಘ ಪರಿವಾರದ ಕಾರ್ಯಕರ್ತರು ಇಡೀ ರಾಜ್ಯಾದ್ಯಂತ ಜನರ ಬಳಿಗೆ ತೆರಳಿ ತಮ್ಮದೇ ಆದ ಅಭಿಪ್ರಾಯವನ್ನು ಮತದಾರರಿಂದ ಸಂಗ್ರಹಿಸಿ, ವರದಿ ನೀಡಿದ್ದಾರೆ. ▶ 8ನೇ ಪುಟಕ್ಕೆ

ಮೈಸೂರಲ್ಲಿ ಕೊಲೆ ಅಪರಾಧಿ ಹತ್ಯೆಗೆ ಸಂಚು: ರೌಡಿಶೀಟರ್‌ಗಳು ಸೇರಿ ಮೂವರ ಬಂಧನ

- ಬೇಟೆಗೆ ಕಾದು ಕುಳಿತ್ತಿದ್ದವರು ಮಂಡಿ ಪೊಲೀಸರ ಬಲೆಗೆ ಬಿದ್ದರು
- ಕಾರಿನಲ್ಲಿ ಲಾಂಗು, ಮಚ್ಚು ಇನ್ನಿತರೆ ಮಾರಕಾಸ್ತ್ರದೊಂದಿಗೆ ಕಾದಿದ್ದರು

ಮೈಸೂರು, ಜು.14– ಕೊಲೆ ಅಪರಾಧಿಯೋರ್ವನ ಹತ್ಯೆಗೆ ಸಂಚು ರೂಪಿಸಿದ್ದ ಮೂವರನ್ನು ಮೈಸೂರಿನ ಮಂಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಕನಕಗಿರಿ ನಿವಾಸಿಗಳಾದ ಅವಿನಾಶ್ ಅಲಿಯಾಸ್ ಅವಿ ಅಲಿಯಾಸ್ ಸೊಪ್ಪು (27), ಆನಂದ ಅಲಿಯಾಸ್ ಗೌಡ (22) ಮತ್ತು ಮಂಡಿ ಮೊಹಲ್ಲಾದ ಮಹಮ್ಮದ್ ಜುನೈದ್ (20) ಬಂಧಿತರಾಗಿದ್ದು, ಮಂಡಿಮೊಹಲ್ಲಾದ ದಿಲೀಪ್ ಎಂಬಾತ ಪರಾರಿಯಾಗಿದ್ದಾನೆ. ಇವರು ಕೊಲೆ ಪ್ರಕರಣದ ▶ 7ನೇ ಪುಟಕ್ಕೆ

ಕೆಆರ್‌ಎಸ್ ಬೃಂದಾವನ ಬೋಟಿಂಗ್ ಪಾಯಿಂಟ್ ಬಳಿ ಮೊಸಳೆಗಳ ಹಾವಳಿ

ಶ್ರೀರಂಗಪಟ್ಟಣ, ಜು.14– ವಿಶ್ವ ವಿಖ್ಯಾತ ಕೆ.ಆರ್.ಸಾಗರದ ಬೃಂದಾವನದ ಬೋಟಿಂಗ್ ಪಾಯಿಂಟ್ ಬಳಿ ಮೊಸಳೆ ಹಾವಳಿ ಆತಂಕ ಮೂಡಿಸಿದೆ. ಗುರುವಾರ ಸಂಜೆ ಮೊಸಳೆ ಕಾಣಿಸಿಕೊಂಡು ಪ್ರವಾಸಿಗರು ನಡುಗಿ ಹೋಗಿದ್ದಾರೆ. ಸಂಜೆ 6 ಗಂಟೆ ವೇಳೆಗೆ ಬೃಂದಾವನದ ಬೋಟಿಂಗ್



ಪಾಯಿಂಟ್ ಬಳಿ ಮೊಸಳೆ ಕಾಣಿಸಿಕೊಂಡಿದ್ದು, ತಕ್ಷಣವೇ ಕಾವೇರಿ ನೀರಾವರಿ ನಿಗಮದ ಸಿಬ್ಬಂದಿ ಮೊಸಳೆಗಳ ಚಲನವಲನವನ್ನು ವಿಡಿಯೋ ಮಾಡಿ, ಮೇಲಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಅಧಿಕಾರಿಗಳು ಪರಿಶೀಲಿಸಿ ಆರ್‌ಎಫ್‌ಓ ಹಾಗೂ ಡಿಎಫ್‌ಓಗೆ ದೂರವಾಣಿ ಕರೆ ಮಾಡಿ, ಮೊಸಳೆ ಸೆರೆ ಹಿಡಿಯುವ ಸಂಬಂಧ ಚರ್ಚೆ ನಡೆಸಿದ್ದಾರೆ. ಮೊಸಳೆ ನೀರಿನಲ್ಲಿದ್ದಾಗ ಅದನ್ನು ಹಿಡಿಯಲು ಸಾಧ್ಯವಿಲ್ಲ. ಹಾಗಾಗಿ, ಅವು ನೀರಿನಿಂದ ▶ 7ನೇ ಪುಟಕ್ಕೆ

'ಪರ್ವ' ಸಮಾರೋಪ ಪ್ರದರ್ಶನ; ಇದು ಅಂತ್ಯವಲ್ಲ, ಆರಂಭ!

ಮೈಸೂರು,ಜು.14(ಪಿಎಂ)–ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರ 'ಪರ್ವ' ಕಾದಂಬರಿಯ ರಂಗ ಪ್ರಯೋಗದ ಸಮಾರೋಪ ಪ್ರದರ್ಶನ ಗುರುವಾರ ನಡೆಯಿತು. ಮೈಸೂರು ರಂಗಾಯಣದ ಮಹಾರಂಗ ಪ್ರಯೋಗ ಇದಾಗಿದ್ದು, ರಂಗಾಯಣದ ಭೂಮಿಗೀತ ಸಭಾಂಗಣದಲ್ಲಿ ನಡೆದ ಈ 40ನೇ ಅಂತಿಮ ಪ್ರದರ್ಶನಕ್ಕೂ ಮುನ್ನ ಇದೇ ವೇದಿಕೆಯಲ್ಲಿ ಸರಸ್ವತಿ ಸಮ್ಮಾನ್ ಪುರಸ್ಕೃತರೂ ಆದ ಡಾ. ಎಸ್.ಎಲ್.ಭೈರಪ್ಪ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಎಸ್.ಎಲ್.ಭೈರಪ್ಪ ನವರು, ಇದು ಕೊನೆ ಪ್ರದರ್ಶನ ಎಂದು ನನಗೆ ಅನ್ನಿಸುತ್ತಿಲ್ಲ. ಮತ್ತೆ ಪ್ರದರ್ಶನ ಮಾಡಬೇಕೆಂಬ ಬೇಡಿಕೆ ಬರಲಿದೆ. ಹಾಗಾಗಿ ಮೈಸೂರು ರಂಗಾಯಣ ಮತ್ತೆ ಪ್ರದರ್ಶನ ಆರಂಭಿಸಬೇಕಾಗುತ್ತದೆ ಎಂದರು. ಮಾತು ಮುಂದುವರೆಸಿದ ▶ 8ನೇ ಪುಟಕ್ಕೆ

ಇದೇ ಕೊನೆ ಪ್ರದರ್ಶನ ಎಂದೆನಿಗೆ ಅನಿಸದು; ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅಭಿಮತ





ರಂಗಾಯಣದ ಭೂಮಿಗೀತದಲ್ಲಿ ಗುರುವಾರ ನಡೆದ 'ಪರ್ವ' ಸಮಾರೋಪ ಪ್ರದರ್ಶನದ ಒಂದು ದೃಶ್ಯ (ಬಲಚಿತ್ರ). ನಾಟಕ ವೀಕ್ಷಿಸುತ್ತಿರುವ ಡಾ.ಎಸ್.ಎಲ್.ಭೈರಪ್ಪ, ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ರಂಗಾಯಣ ಮಾಜಿ ನಿರ್ದೇಶಕ ಬಿ.ವಿ.ರಾಜಾರಾಂ, ಎಸ್.ಎಲ್.ಭೈರಪ್ಪನವರ ಪತ್ನಿ ಸರಸ್ವತಿ, ಪುತ್ರ ಡಾ.ವಿದ್ಯಾಸಾಗರ್ ಮತ್ತಿತರರನ್ನು ಕಾಣಬಹುದು.

> “ನಿನ್ನೆ 'ಪರ್ವ' ಮೂಲವಾದ 'ಮಹಾಭಾರತ' ನಿರ್ಮಾಣ ಮಾಡಿದ ವೇದ ವ್ಯಾಸರ ಜನ್ಮದಿನ. ಅಂದರೆ ವ್ಯಾಸ ಪೂರ್ಣಿಮೆ. ಆ ದಿನವೇ ಭೈರಪ್ಪನವರು ಹುಟ್ಟಿದ್ದು. ಆ ವ್ಯಾಸರು ಮತ್ತು ಈ ವ್ಯಾಸರು (ಭೈರಪ್ಪ) ಒಂದೇ ದಿನ ಹುಟ್ಟಿದ್ದು, 5 ಸಾವಿರ ವರ್ಷಗಳ ಅಂತರ ಅಷ್ಟೆ ಎಂಬುದು ನಮ್ಮ ಕನ್ನಡಿಗರಿಗೆ ಒಂದು ಹೆಮ್ಮೆ
>
> -ಶತಾವಧಾನಿ ಡಾ.ಆರ್.ಗಣೇಶ್ ವಿದ್ವಾಂಸರು.

'ಪರ್ವ' ಮಹಾ ರಂಗಪ್ರಯೋಗ ಭಾರತೀಯ ರಂಗಭೂಮಿಯ ಮೈಲಿಗಲ್ಲು

ರಂಗತಜ್ಞರ ಅಭಿಮತ; ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ

ಮೈಸೂರು,ಜು.14(ಪಿಎಂ)– ಕನ್ನಡ ರಂಗಭೂಮಿಯಲ್ಲಿ ನಡೆದ 'ಪರ್ವ' ಮಹಾ ರಂಗಪ್ರಯೋಗವು ಭಾರತೀಯ ರಂಗಭೂಮಿಯಲ್ಲೇ ಒಂದು ಮೈಲಿಗಲ್ಲು ಎಂದು ಅನೇಕ ಹಿರಿಯ ರಂಗತಜ್ಞರು ಅಭಿಪ್ರಾಯಪಟ್ಟಿದ್ದಾರೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ಪರ್ವ ಸಮಾರೋಪ ಪ್ರದರ್ಶನಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ರಂಗಾಯಣ ನಿರ್ದೇಶಕನಾದ ಆರಂಭದಲ್ಲೇ ಮಹತ್ವದ ರಂಗಪ್ರಯೋಗ ಸೃಷ್ಟಿಸಬೇಕೆಂಬ ಹಂಬಲದಲ್ಲಿ ವಿಶ್ವದ ಸರ್ವಶ್ರೇಷ್ಠ ಕಾದಂಬರಿಕಾರರಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲಬಲ್ಲ ಡಾ.ಎಸ್.ಎಲ್. ಭೈರಪ್ಪನವರ ಕಾದಂಬರಿ 'ಪರ್ವ' ಆಯ್ಕೆ ಮಾಡಿಕೊಂಡೆ. ಇದೊಂದು 600 ಪುಟಗಳ ಮಹಾಭಾರತದ ಕಥೆಯ ಅದ್ಭುತ ಕಾದಂಬರಿ ಎಂದರು. ಭೈರಪ್ಪನವರ ಅನುಮತಿ ಪಡೆದು ಮೊದಲ ಹೆಜ್ಜೆಯಾಗಿ ತಾಂತ್ರಿಕ ವರ್ಗ ಮತ್ತು ಕಲಾವಿದರು ಸೇರಿದಂತೆ 35 ಜನರನ್ನು ಆಯ್ಕೆ ಮಾಡಿಕೊಂಡು ಈ ಮಹಾ ರಂಗಪ್ರಯೋಗದ ಸಾಹಸಕ್ಕೆ ಹೆಜ್ಜೆ ಇಟ್ಟೆವು. ಅದೊಂದು ದಿನ ಅಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಅರವಿಂದ ಲಿಂಬಾವಳಿಯವರು ಪರ್ವ ನಾಟಕಕ್ಕೆ 50 ಲಕ್ಷ ರೂ. ಅನುದಾನ ಬಿಡುಗಡೆ ಮಾಡುವುದಾಗಿ ಘೋಷಣೆ ಮಾಡಿದಾಗಲೇ ನಮಗೆ ಆನೆ ಬಲ ಬಂದಿತು. 2021ರ ಮಾ.12, 13 ಮತ್ತು 14ರಂದು ಪರ್ವದ ಮೊದಲ 3 ಪ್ರದರ್ಶನಗಳು ಯಶಸ್ವಿಯಾದವು. ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬಜೆಟ್ ಮಂಡನೆಯಲ್ಲಿ ಪರ್ವ ರಂಗ ಪಯಣಕ್ಕೆ ಘೋಷಣೆ ಮಾಡಿದ್ದ 1 ಕೋಟಿ ರೂ. ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನೀಲ್‌ಕುಮಾರ್ ಬಿಡುಗಡೆ ಮಾಡಿದರು. ನಮ್ಮ ರಾಜ್ಯ ಮತ್ತು ಹೊರರಾಜ್ಯಗಳ ಪರ್ವ ಪಯಣ ಯಶಸ್ವಿಯಾಗಿ ನಡೆದು, ಇಂದು 40ನೇ ಪ್ರದರ್ಶನದ ಸಮಾರೋಪದಲ್ಲಿದ್ದೇವೆ. ಪರ್ವ ನಾಟಕ ಸರ್ಕಾರದ ಗಮನ ಸೆಳೆಯುತ್ತದೆ, ಬಜೆಟ್ ಮಂಡನೆಯಲ್ಲಿ ಪ್ರಸ್ತಾಪವಾಗುತ್ತದೆ ಮತ್ತು ವಿಧಾನಸಭೆ, ಪರಿಷತ್ತಿನಲ್ಲಿ ಚುಕ್ಕಿ ಪ್ರಶ್ನೆಗಳ ಮೂಲಕ ಚರ್ಚೆಯಾಗುತ್ತದೆ ಎಂದರೆ, ಇದೊಂದು ಸಾಧನೆಯೇ ಸರಿ ಎಂದರು.



ಮೈಸೂರು ರಂಗಾಯಣದ ಭೂಮಿಗೀತದಲ್ಲಿ ಪರ್ವ ಸಮಾರೋಪ ಪ್ರದರ್ಶನಕ್ಕೂ ಮುನ್ನ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ (ಎಡದಿಂದ 4ನೇಯವರು) ಮತ್ತು ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ (ಎಡದಿಂದ 2ನೇಯವರು) ಸನ್ಮಾನಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣದ ಉಪನಿರ್ದೇಶಕಿ ನಿರ್ಮಲ ಮಠಪತಿ ಅವರು ಚಿತ್ರದಲ್ಲಿದ್ದಾರೆ.

ಇಂದು ಮೂರನೇ ಆಷಾಢ ಶುಕ್ರವಾರ

ಚಾಮುಂಡೇಶ್ವರಿ ದರ್ಶನಕ್ಕೆ ಹರಿದು ಬರಲಿದೆ ಭಕ್ತಸಾಗರ



ಮೈಸೂರು, ಜು.14(ಎಸ್‌ಬಿಡಿ)– ಮೈಸೂರಿನ ಅದಿದೇವತೆ ಶ್ರೀ ಚಾಮುಂಡೇಶ್ವರಿ ಸನ್ನಿಧಾನದಲ್ಲಿ ಮೂರನೇ ಆಷಾಢ ಶುಕ್ರವಾರದ ವಿಶೇಷ ಪೂಜೆಗೆ ಚಾಮುಂಡಿಬೆಟ್ಟ ಅಣಿಯಾಗಿದ್ದು, ಸಹಸ್ರಾರು ಭಕ್ತರು ದೇವಿ ದರ್ಶನಕ್ಕೆ ಆಗಮಿಸುವ ನಿರೀಕ್ಷೆ ಇದೆ. ದೇವಾಲಯದಲ್ಲಿ ಮುಂಜಾವಿನಲ್ಲೇ ಪೂಜಾ ಕೈಂಕರ್ಯಗಳು ಆರಂಭವಾಗಲಿದ್ದು, ಬೆಳಗ್ಗೆ 5.30ರಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶ ಸಿಗಲಿದೆ. ಮೊದಲೆರಡು ವಾರ ಚಾಮುಂಡಿ ಬೆಟ್ಟಕ್ಕೆ ಗಣ್ಯರ ವಾಹನಗಳಿಗೆ ನೀಡಲಾಗಿದ್ದ ಪಾಸ್ ವ್ಯವಸ್ಥೆಯನ್ನು ಈಗ ರದ್ದು ಪಡಿಸಲಾಗಿದ್ದು, ದೇವಾಲಯಕ್ಕೆ ಸಂಬಂಧಪಟ್ಟವರು, ಬೆಟ್ಟದ ನಿವಾಸಿಗಳು, ಕಾರ್ಯನಿಮಿತ್ತ ತೆರಳುವ ಅಧಿಕಾರಿಗಳ ವಾಹನಕ್ಕೆ ಮಾತ್ರ ಅವಕಾಶ ನೀಡಲಾಗುವುದು. ಲಲಿತಮಹಲ್ ಹೋಟೆಲ್ ಬಳಿಯ ಮೈದಾನದಿಂದ ಎಂದಿನಂತೆ ಉಚಿತ ಬಸ್ ಸೇವೆ ಇರಲಿದ್ದು, ಬಸ್ ಮೂಲಕ ಹಾಗೂ ಮೆಟ್ಟಿಲು ಮಾರ್ಗದಿಂದ ಭಕ್ತರು ಬೆಟ್ಟಕ್ಕೆ ತೆರಳಿ, ಸರತಿ ಮೂಲಕ ದರ್ಶನ ಪಡೆಯಬಹುದು. ಭಕ್ತರ ವತಿಯಿಂದ ಪ್ರಸಾದ ವ್ಯವಸ್ಥೆಯನ್ನೂ ಮಾಡಲಾಗುವುದು. ಈ ಬಾರಿ ಪಾಸ್ ವ್ಯವಸ್ಥೆಗೆ ಬ್ರೇಕ್ ಬಿದ್ದಿರುವ ಕಾರಣ ವಾಹನ ಸಂಚಾರದ ಕಿರಿಕಿರಿಯಿಲ್ಲದೆ ತಾಯಿಯ ದರ್ಶನ ಪಡೆದು ಬಸ್‌ನಲ್ಲಿ ವಾಪಸ್ಸಾಗಬಹುದು.

ಜು.20ಕ್ಕೆ ವರ್ಧಂತಿ: ತಾಯಿ ಚಾಮುಂಡೇಶ್ವರಿ ಜನ್ಮದಿನ ಅರ್ಥಾತ್ ವರ್ಧಂತ್ಯೋತ್ಸವ ಜು.20ರಂದು ಜರುಗಲಿದ್ದು ಅಂದು ಹಾಗೂ ಕಡೇ ಶುಕ್ರವಾರ(ಜು.22) ಭಾರೀ ಸಂಖ್ಯೆಯ ಭಕ್ತರು ಆಗಮಿಸುವ ನಿರೀಕ್ಷೆ ಇದೆ.

ಬಿ.ಎನ್.ನಂದಿನಿ ಮೈಸೂರು ಎಎಸ್ಪಿ



ಮೈಸೂರು,ಜು.14(ಆರ್‌ಕೆ)–ಮೈಸೂರು ಜಿಲ್ಲಾ ಅಡಿಷನಲ್ ಎಸ್ಪಿಯಾಗಿ ಬಿ.ಎನ್. ನಂದಿನಿ ಅಧಿಕಾರ ವಹಿಸಿಕೊಂಡರು.

ಮೈಸೂರು ಜಿಲ್ಲಾ ಎಎಸ್ಪಿಯಾಗಿದ್ದ ಆರ್.ಶಿವಕುಮಾರ್ ರಾಯಚೂರು ಜಿಲ್ಲೆಗೆ ವರ್ಗಾವಣೆಯಾಗಿದ್ದು, ಅವರು ಇಂದು ನಂದಿನಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ನಂದಿನಿ ಹಾಸನ ಜಿಲ್ಲಾ ಅಡಿಷನಲ್ ಎಸ್ಪಿಯಾಗಿದ್ದರು. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ಬಾರದಂತೆ ಹಾಗೂ ಅಪರಾಧ ತಡೆ, ಪತ್ತೆ ನಿಟ್ಟಿನಲ್ಲಿ ಪರಿಣಾಮಕಾರಿ ಯಾಗಿ ಕರ್ತವ್ಯ ನಿರ್ವಹಿಸುವುದಾಗಿ ನೂತನ ಎಎಸ್ಪಿ ನಂದಿನಿ ತಿಳಿಸಿದ್ದಾರೆ.

ಅಜ್ಞಾತ ಸ್ಥಳದಿಂದಲೇ ರಾಜೀನಾಮೆ ನೀಡಿದ ಗೋಟಬಯ ರಾಜಪಕ್ಸ



ಕೋಲಂಬೊ, ಜು.14– ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟು ಮತ್ತು ರಾಜಕೀಯ ಅಸ್ಥಿರತೆ ನಡುವೆ ಅಧ್ಯಕ್ಷ ಗೋಟಬಯ ರಾಜಪಕ್ಸ ಕೊನೆಗೂ ರಾಜೀನಾಮೆ ನೀಡಿದ್ದಾರೆ. ಗೋತಬಯ ಅವರ ರಾಜೀನಾಮೆಗೆ ಆಗ್ರಹಿಸಿ ನಾಗರಿಕರು ದಂಗೆಯೇಳುವ ಮೂಲಕ ರಾಷ್ಟ್ರಪತಿ ಭವನಕ್ಕೆ ಮುತ್ತಿಗೆ ಹಾಕಿದ್ದರು. ಈ ಬೆನ್ನಲ್ಲೇ ರಾಷ್ಟ್ರಪತಿ ಭವನದಿಂದ ತಲೆಮರೆಸಿಕೊಂಡಿದ್ದ ಗೋಟಬಯ ಕೊನೆಗೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ರಾಜೀನಾಮೆ ನೀಡಿ ಎಂದರೆ ಕುಟುಂಬ ಸಹಿತ ಮಾಲ್ಡೀವ್ಸ್ ಹೋಗಿದ್ದ ಗೋತಬಯ ಬಳಿಕ ಸಿಂಗಾಪುರಕ್ಕೆ ಪ್ರಯಾಣ ಬೆಳೆಸಿದ್ದು, ಆ ಬಳಿಕವೇ ರಾಜೀನಾಮೆ ನೀಡಲಿದ್ದಾರೆ ಎನ್ನಲಾಗಿತ್ತು. ಸದ್ಯ ಸಿಂಗಾಪುರಕ್ಕೆ ತಲುಪಿರುವ ಖಚಿತ ಮಾಹಿತಿ ಇಲ್ಲ. ಅಜ್ಞಾತ ಸ್ಥಳದಿಂದಲೇ ಈ ಮೇಲ್ ಮೂಲಕವೇ ಸ್ಪೀಕರ್‌ಗೆ ರಾಜೀನಾಮೆ ಪತ್ರ ರವಾನಿಸಿದ್ದಾರೆ.

ಇಂದಿನಿಂದ ಯೋಗ, ಧ್ಯಾನ ಸಮ್ಮೇಳನ

ಮೈಸೂರು, ಜು.14(ಆರ್‌ಕೆಬಿ)– ಆನಂದಮಾರ್ಗ ಪ್ರಚಾರಕ ಸಂಘದ ವತಿಯಿಂದ ಜು.15ರಿಂದ ಮೂರು ದಿನ ಯೋಗ ಮತ್ತು ಧ್ಯಾನ ಸಮ್ಮೇಳನ ಆಯೋಜಿಸಲಾಗಿದೆ ಎಂದು ಆಚಾರ್ಯ ಪ್ರಿಯತೋಷಾನಂದ ಅವಧೂತರು ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಸರಸ್ವತಿಪುರಂ ಕಾಮಾಕ್ಷಿ ಆಸ್ಪತ್ರೆ ರಸ್ತೆಯ ಆನಂದ ಮಾರ್ಗ ಆಶ್ರಮದಲ್ಲಿ ಯೋಗ ಮತ್ತು ಧ್ಯಾನ ಸಮ್ಮೇಳನ ನಡೆಯಲಿದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಂದು ಅದ್ಭುತಗಳನ್ನು ಸೃಷ್ಟಿಸಿದೆ. ಆದರೆ ನಿರುಪಯುಕ್ತ ಸ್ವಾರ್ಥಪರ ಬಂಡವಾಳಶಾಹಿಗಳು, ಭೌತವಸ್ತು ಕೇಂದ್ರಿತ ಕಮ್ಯುನಿಸ್ಟರು, ವಿಚಾರಕ್ಕೆ ಎಡೆಗೊಡದ ಮತಗಳು, ಸಮಾಜದಲ್ಲಿ ಸಿರಿವಂತರು ಮತ್ತು ಬಡವರ ನಡುವೆ ದೊಡ್ಡ ಕಂದಕ ಸೃಷ್ಟಿಸಿದ್ದಾರೆ. ಹೀಗಾಗಿ ಅನಿರೀಕ್ಷಿತ ನಿರುದ್ಯೋಗ, ಬೆಲೆ ಏರಿಕೆ, ಯುದ್ಧ ಇತ್ಯಾದಿಗಳು ತಾಂಡವವಾಡುತ್ತಿವೆ. ಹೀಗಾಗಿ ದೈವ ಕೇಂದ್ರಿತ ತತ್ತ್ವದೊಂದಿಗೆ ವೈಯಕ್ತಿಕ ಸದೃಶವಾದ ಯೋಗ, ಧ್ಯಾನ ಕೇಂದ್ರಿತ ಕ್ರಮಕ್ಕೆ ಆನಂದ ಮಾರ್ಗ ಗಮನ ನೀಡಿದೆ. ಈ ರೀತಿಯಲ್ಲಿ ವಿಕೇಂದ್ರಿತ ಆರ್ಥಿಕ ನೀತಿ ಕುರಿತಂತೆ ಸತ್ಯದ ತಿಳಿವಳಿಕೆ, ಯೋಗ ವಿಜ್ಞಾನ, ಮೊದಲಾದ ಸಾಮಾಜಿಕ ಆರ್ಥಿಕತೆ ಪಡೆಯುವ ವಿಧಾನ ಕುರಿತಂತೆ ಈ ಕಾರ್ಯಕ್ರಮ ಗಮನ ನೀಡಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಚಾರ್ಯ ಸುರೇಶ್ವರಾನಂದ ಅವಧೂತ್, ಮಹೇಶ್, ಚತುರ್ ಉಪಸ್ಥಿತರಿದ್ದರು.

ಸಾಧಕ ವೈದ್ಯರು, ಪತ್ರಕರ್ತರಿಗೆ ಸನ್ಮಾನ



ಮೈಸೂರು, ಜು.14(ಆರ್‌ಕೆಬಿ)–ವೈದ್ಯರ ದಿನಾಚರಣೆ ಹಾಗೂ ಪತ್ರಕರ್ತರ ದಿನಾಚರಣೆ ಅಂಗವಾಗಿ ಸ್ನೇಹ ಸಿಂಚನ ಟ್ರಸ್ಟ್ ವತಿಯಿಂದ ಗುರುವಾರ ಮೈಸೂರು ಪತ್ರಕರ್ತರ ಭವನದಲ್ಲಿ ವೈದ್ಯಕೀಯ ಮತ್ತು ಪತ್ರಿಕಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವೈದ್ಯರು ಮತ್ತು ಪತ್ರಕರ್ತರನ್ನು ಸನ್ಮಾನಿಸಲಾಯಿತು.

ವೈದ್ಯಕೀಯ ಕ್ಷೇತ್ರದ ಡಾ.ಎಚ್.ಬಿ.ರಾಜಶೇಖರ್ ಹಾಗೂ ಡಾ.ಸಿ.ಎಸ್.ಶರತ್ ಕುಮಾರ್ ಮತ್ತು ಪತ್ರಿಕಾ ಕ್ಷೇತ್ರದಲ್ಲಿನ ಸೇವೆಗಾಗಿ ಪತ್ರಕರ್ತರಾದ ಎಸ್.ಟಿ.ರವಿಕುಮಾರ್ ಹಾಗೂ ಅನುರಾಗ್ ಬಸವರಾಜ್ ಅವರನ್ನು ಸನ್ಮಾನಿಸಿದರು. ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಕೋವಿಡ್ ವೇಳೆ ವೈದ್ಯರು ಹಾಗೂ ಪತ್ರಕರ್ತರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದದ್ದು ಎಂದು ಶ್ಲಾಘಿಸಿದರು. ಟ್ರಸ್ಟ್ ಅಧ್ಯಕ್ಷೆ ಮ.ನ.ಲತಾ ಮೋಹನ್, ಚಿಂತಕ ಕೆ.ರಘುರಾಂ ವಾಜಪೇಯಿ, ಡಾ.ವಿಜಯ ಚೆಲುವರಾಜ್, ಡಾ.ಲತಾ ರಾಜಶೇಖರ್ ಉಪಸ್ಥಿತರಿದ್ದರು.

ಪಂಜಾಬಿ ಖ್ಯಾತ ಗಾಯಕ ದಲೇರ್ ಮೆಹಂದಿಗೆ 2 ವರ್ಷ ಜೈಲು ಶಿಕ್ಷೆ



ಪಾಟಿಯಾಲ, ಜು.14–ಬಾಲಿವುಡ್‌ನ ಖ್ಯಾತ ಗಾಯಕ ದಲೇರ್ ಮೆಹಂದಿಗೆ ಮಾನವ ಕಳ್ಳಸಾಗಣೆ ಸಂಬಂಧಿಸಿದ ಪ್ರಕರಣಕ್ಕೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿ ಕೋರ್ಟ್ ಆದೇಶಿಸಿದೆ. 2003ರ ಪ್ರಕರಣಕ್ಕೆ ಸಂಬಂಧಿಸಿದ ಶಿಕ್ಷೆ ಇದಾಗಿದ್ದು, ಪಟಿಯಾಲ ನ್ಯಾಯಾಲಯವು ಶಿಕ್ಷೆಗೆ ಆದೇಶಿಸಿದೆ.

ಮಾನವ ಕಳ್ಳಸಾಗಾಣಿಕೆ ಪ್ರಕರಣದಲ್ಲಿ ದಲೇರ್ ಮೆಹಂದಿ ದೋಷಿಯೆಂದು ಸಾಬೀತಾಗುತ್ತಿದ್ದಂತೆಯೇ ದಲೇರಿ ಭಾವುಕರಾಗಿದ್ದರು. 2003ರಲ್ಲಿ ದಲೇರ್ ಮೆಹಂದಿ ಮತ್ತು ಆತನ ಸಹೋದರ ಶಂಶೇರ್ ಸಿಂಗ್ ವಿರುದ್ಧ ಒಟ್ಟು 31 ಪ್ರಕರಣಗಳು ದಾಖಲಾಗಿದ್ದವು. ಇವರಿಗೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸಲಾಗಿತ್ತು. ಈ ಶಿಕ್ಷೆಯ ವಿರುದ್ಧ ಅವರು ಮೇಲ್ಮನವಿ ಸಲ್ಲಿಸಿದ್ದರು. ಪಟಿಯಾಲ ಜಿಲ್ಲಾ ನ್ಯಾಯಾಲಯವು ಅದನ್ನು ವಜಾಗೊಳಿಸಿದೆ. 19 ವರ್ಷಗಳ ಹಿಂದೆ ದಲೇರ್ ಮತ್ತು ಸಹೋದರ ಜನರನ್ನು ಅಕ್ರಮ ವಾಗಿ ವಿದೇಶಕ್ಕೆ ಕಳುಹಿಸಲು ಹಣ ತಗೆದುಕೊಂಡಿದ್ದಾರೆ ಎಂದು ಆರೋ ಪಿಸಲಾಗಿತ್ತು. ಮಾನವ ಕಳ್ಳಸಾಗಣೆ ಮತ್ತು ಪಿತೂರಿಗಾಗಿ ಅವರ ಮೇಲೆ ಆರೋಪ ಹೊರಿಸಲಾಗಿತ್ತು.

ಸಂಸದ ಪ್ರತಾಪ್‌ಸಿಂಹರಿಂದ ವಿಶೇಷಚೇತನ ಮಕ್ಕಳಿಗೆ ಸಮವಸ್ತ್ರ ವಿತರಣೆ



ಮೈಸೂರು, ಜು.14(ಆರ್‌ಕೆಬಿ)– ಮೈಸೂರಿನ ಚಾಮುಂಡಿಪುರಂ ಅರುಣೋದಯ ವಿಶೇಷ ಮಕ್ಕಳ ಶಾಲೆಯ ವಿಶೇಷ ಚೇತನ ಮಕ್ಕಳಿಗೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಗುರುವಾರ ಸಮವಸ್ತ್ರಗಳನ್ನು ವಿತರಿಸಿದರು.

ಮೈಸೂರು ಮಹಾನಗರಪಾಲಿಕೆ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ನಡೆಸುತ್ತಿರುವ ಈ ವಿಶೇಷ ಮಕ್ಕಳ ಶಾಲೆಗೆ ಬೆಂಗಳೂರಿನ ವೈದ್ಯ ದಂಪತಿ ಡಾ.ಪ್ರದೀಪ್ ಮತ್ತು ಡಾ.ಪೂಜಾ ಪ್ರದೀಪ್, ತಮ್ಮ ಪುತ್ರಿ ಆರಾಧ್ಯಳ ಮೊದಲ ವರ್ಷದ ಹುಟ್ಟು ಹಬ್ಬದ ಸಂದರ್ಭದಲ್ಲಿ ಸಮವಸ್ತ್ರಗಳ ಕೊಡುಗೆ ನೀಡಿದ್ದರು. ಅದನ್ನು ಸಂಸದ ಪ್ರತಾಪ್‌ಸಿಂಹ ಮಕ್ಕಳಿಗೆ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಅಂಗ ವಿಕಲರನ್ನು ವಿಕಲಾಂಗರು ಎಂದು ಕರೆಯ ಬೇಕು ಎಂದು ಶಬ್ದ ಬ್ರಹ್ಮ ವೆಂಕಟಸುಬ್ಬಯ್ಯರ ಸಲಹೆಯಂತೆ ವಿಶೇಷಚೇತನರು ಎನ್ನಲಾಯಿತು. ನಂತರ ಪ್ರಧಾನಿ ನರೇಂದ್ರ ಮೋದಿ ಅವರು ದೇವರ ಮಕ್ಕಳಾದ ಇವರನ್ನು ದಿವ್ಯಾಂಗರು ಎಂದು ಕರೆದರು. ಮೋದಿಯವರಿಗೆ ಇಂತಹ ಮಕ್ಕಳ ಬಗ್ಗೆ ಎಲ್ಲಿಲ್ಲದ ಪ್ರೀತಿ ಎಂದರು.

ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಬಿಜೆಪಿ ಸರ್ಕಾರ ವಿಕಲಚೇತನರಿಗೆ ವಿಶೇಷ ನೆರವು ನೀಡುತ್ತಿದೆ. ಮುಡಾ ವತಿಯಿಂದ ಸಂಘ ಸಂಸ್ಥೆಗಳಿಗೆ ಇನ್ನಿತರರಿಗೆ ಸಿಎ ನಿವೇಶನಗಳನ್ನು ನೀಡಲಾಗುತ್ತದೆ. ಅದೇ ರೀತಿ ವಿಶೇಷ ಚೇತನ ಶಾಲೆಗಳನ್ನು ನಡೆಸುವವರಿಗೆ ಸಿಎ ನಿವೇಶನ ಏಕೆ ನೀಡಬಾರದು ಎಂದು ಚಿಂತಿಸಿ, ಅರ್ಜಿಗಳನ್ನು ಆಹ್ವಾನಿಸಿದಾಗ ಮೈಸೂರು ಒಂದರಲ್ಲೇ 18 ಅರ್ಜಿಗಳು ಬಂದವು. ಹೀಗಾಗಿ ತಾಂತ್ರಿಕ ಸಲಹಾ ಸಮಿತಿಯ ಸಲಹೆ ಪಡೆದು ಯಾರಿಗೆ ಸಿಎ ನಿವೇಶನ ನೀಡಬೇಕು ಎಂಬ ಪಟ್ಟಿ ಮಾಡಿ ವಿತರಿಸಲಾಗುವುದು ಎಂದು ಹೇಳಿದರು.

ಅರುಣೋದಯ ವಿಶೇಷ ಮಕ್ಕಳ ಶಾಲೆಯ ಸಂಸ್ಥಾಪಕ, ನಗರಪಾಲಿಕೆ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ಮಾತನಾಡಿ, ಈ ಶಾಲೆಯಲ್ಲಿ ಬುದ್ಧಿಮಾಂದ್ಯ ಹಾಗೂ ವಿಕಲಚೇತನ ಮಕ್ಕಳಿಗೆ ಪ್ರತ್ಯೇಕವಾಗಿ ಆರೈಕೆ ಮಾಡಲಾಗುತ್ತಿದ್ದು, ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಅವರಿಗೆ ವಿಶೇಷ ತರಬೇತಿಯನ್ನೂ ನೀಡಲಾಗುತ್ತಿದೆ. ಇಲ್ಲಿರುವ ಮಕ್ಕಳಲ್ಲಿ ಶೇ.50ರಷ್ಟು ಮಕ್ಕಳು ಕಂಪ್ಯೂಟರ್ ಕಲಿತಿದ್ದಾರೆ. ಅವರಲ್ಲಿರುವ ಪ್ರತಿಭೆಯನ್ನು ಹೊರತರುವುದು ನಮ್ಮ ಉದ್ದೇಶವಾಗಿದೆ ಎಂದರು.

ವಿಶೇಷಚೇತನ ಮಕ್ಕಳನ್ನು ನೋಡಿಕೊಳ್ಳುವುದು ಪೋಷಕರಿಗೆ ಬಹಳ ದೊಡ್ಡ ಹೊರೆಯಾಗಿದೆ. ಹಾಗಾಗಿ ಅಂತಹ ಮಕ್ಕಳಿಗಾಗಿ ಮೈಸೂರಿನಲ್ಲಿ ವಿಶೇಷ ಚೇತನರಿಗಾಗಿ ಹಾಸ್ಟೆಲ್ ತೆರೆಯಲು ಗಮನ ಹರಿಸುವಂತೆ ಅವರು ಸಂಸದರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ರಂಗನಾಥ್. ಸಂದೀಪ್ ಇನ್ನಿತರರು ಉಪಸ್ಥಿತರಿದ್ದರು.

ಸರ್ವರ್ ಸಮಸ್ಯೆ: ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳ ಭೌತಿಕವಾಗಿಯೇ ಸಲ್ಲಿಸಲು ಸೂಚನೆ

ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ನಗರ ಯೋಜನಾ ಇಲಾಖೆ ಸೂಚನೆ

ಮೈಸೂರು, ಜು.14(ಆರ್‌ಕೆ)–ಸರ್ವರ್ ಹಾಗೂ ಇನ್ನಿತರೆ ತಾಂತ್ರಿಕ ಸಮಸ್ಯೆಗಳಿಂದಾಗಿ ಸಂಬಂಧಿಸಿದ ತಂತ್ರಾಂಶವು ಕಾರ್ಯ ನಿರ್ವಹಿಸದೇ ಇರುವುದರಿಂದ ಭೂ ಉಪಯೋಗ ಬದಲಾವಣೆ ಕೋರಿ ಬರುವ ಅರ್ಜಿಗಳನ್ನು ಪರಿಶೀಲಿಸಿ ಭೌತಿಕವಾಗಿಯೇ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಸೂಚನೆ ನೀಡಿದೆ.

ಈ ಕುರಿತು ಇಂದು ಸುತ್ತೋಲೆ ಹೊರಡಿಸಿರುವ ಇಲಾಖೆ ನಿರ್ದೇಶಕರು, ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಈವರೆಗೆ LBPAS (NIRMAN-2)ನ ಮೂಲಕ ಸಲ್ಲಿಸಲಾಗುತ್ತಿತ್ತು. ಆದರೆ ಆನ್‌ಲೈನ್ ತಂತ್ರಾಂಶವು ಕಾರ್ಯ ಸ್ಥಗಿತಗೊಳಿಸಿರುವುದರಿಂದ ಭೂ ಉಪಯೋಗ ಬದಲಾವಣೆ, ಸಕಾಲ ಯೋಜನೆಯೊಂದಿಗೆ ಜೋಡಣೆಯಾಗಿರುವ ಕಾರಣ ಕಾಲ ಮಿತಿಯೊಳಗಾಗಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸಿದ್ದಾರೆ. ಈಗಾಗಲೇ LBPAS (ನಿರ್ಮಾಣ್–2) ತಂತ್ರಾಂಶದಲ್ಲಿ ಸಲ್ಲಿಕೆಯಾಗಿರುವ ಭೂ ಉಪಯೋಗ ಬದಲಾವಣೆ ಅರ್ಜಿಗಳು ಹಾಗೂ ಹೊಸದಾಗಿ ಬರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ದಾಖಲೆ ದೃಢೀಕರಣದೊಂದಿಗೆ ಭೌತಿಕವಾಗಿಯೇ ಕಳುಹಿಸುವಂತೆಯೂ ನಿರ್ದೇಶಕರು ಸೂಚಿಸಿದ್ದಾರೆ.

ಎದುರಾಳಿಯ ಬಲವಾದ ಪಂಚ್: ಮೈಸೂರಿನ ಕಿಕ್ ಬಾಕ್ಸರ್ ಕುಸಿದು ಬಿದ್ದು ಸಾವು



ಮೈಸೂರು, ಜು.14(ಆರ್‌ಕೆ)–ಎದುರಾಳಿಯ ಬಲವಾದ ಪಂಚ್‌ನಿಂದ ಕುಸಿದು ಬಿದ್ದು ಮೈಸೂರಿನ ಕಿಕ್ ಬಾಕ್ಸರ್ ಸಾವನ್ನಪ್ಪಿದ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಮೈಸೂರಿನ ಸುಣ್ಣದಕೇರಿಯ ಹುಲ್ಲಿನ ಬೀದಿ ನಿವಾಸಿ ಕಿಕ್ ಬಾಕ್ಸಿಂಗ್ ತರಬೇತುದಾರ ಸುರೇಶ್ ಅವರ ಮಗ ನಿಖಿಲ್ (24) ಸಾವನ್ನಪ್ಪಿದ ಯುವ ಕಿಕ್ ಬಾಕ್ಸರ್. ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲು ಶನಿವಾರ ಸಂಜೆ ಮೈಸೂರಿನಿಂದ ತೆರಳಿದ್ದ ನಿಖಿಲ್, ಸ್ಪರ್ಧೆ ಅಂಕಣದಲ್ಲಿ ಎದುರಾಳಿಯು ಬಲವಾಗಿ ಮುಖಕ್ಕೆ ಪಂಚ್ ಮಾಡಿದಾಗ ಕುಸಿದು ಬಿದ್ದಿದ್ದಾನೆ. ಕೂಡಲೇ ಆತನನ್ನು ನಾಗರಬಾವಿ ಬಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಿಖಿಲ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಮಂಗಳವಾರ ಮಧ್ಯರಾತ್ರಿ ಕೊನೆಯುಸಿರೆಳೆದಿದ್ದಾನೆ ಎಂದು ಅವರ ತಂದೆ ಸುರೇಶ್ ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆ ನಂತರ ಬುಧವಾರ ದೇಹವನ್ನು ಮೈಸೂರಿಗೆ ತಂದು, ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ತಿಳಿಸಿದ್ದಾರೆ.

ಕಿಕ್ ಬಾಕ್ಸಿಂಗ್ ಪಂದ್ಯಾವಳಿ ಆಯೋಜಕರು ಸ್ಥಳದಲ್ಲಿ ಆಂಬುಲೆನ್ಸ್, ಆಕ್ಸಿಜನ್ ಸೌಕರ್ಯ ಹಾಗೂ ಸುರಕ್ಷತಾ ವ್ಯವಸ್ಥೆ ಮಾಡಿರಲಿಲ್ಲ. ಘಟನೆ ನಂತರ ನಿಖಿಲ್‌ನನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲು ಸಾಧ್ಯವಾಗದ ಕಾರಣ ಆತ ಸಾವನ್ನಪ್ಪಿದ್ದು, ಅದಕ್ಕೆ ಆಯೋಜಕರ ನಿರ್ಲಕ್ಷ್ಯತೆಯೇ ಕಾರಣ ಎಂದು ಸುರೇಶ್ ಗಂಭೀರ ಆರೋಪ ಮಾಡಿದ್ದಾರೆ.

ಪ್ರಥಮ ಚಿಕಿತ್ಸೆ ಸಲಕರಣೆ, ಆರೋಗ್ಯ ಸಿಬ್ಬಂದಿ, ಆಕ್ಸಿಜನ್ ಸೌಲಭ್ಯ, ಆಂಬುಲೆನ್ಸ್ ಸೌಲಭ್ಯ ಒದಗಿಸದೇ ಆಯೋಜಕರು ನಿರ್ಲಕ್ಷ್ಯ ವಹಿಸಿದ್ದುದು ತಮ್ಮ ಮಗನ ಸಾವಿಗೆ ಕಾರಣ ಎಂದು ಸುರೇಶ್ ನೀಡಿದ ದೂರಿನನ್ವಯ ಜ್ಞಾನಭಾರತಿ ಠಾಣೆ ಪೊಲೀಸರು ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ಆಯೋಜಿಸಿದ್ದ ಸಂಸ್ಥೆ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾಳೆ ಬಂಟರ ಸಂಘದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ

'ಚಕ್ರವ್ಯೂಹ– ಶ್ರೀನಿವಾಸ ಕಲ್ಯಾಣ' ಯಕ್ಷಗಾನ ಬಯಲಾಟ



ಮೈಸೂರು, ಜು.14(ಆರ್‌ಕೆಬಿ)– ಮೈಸೂರು ಬಂಟರ ಸಂಘದಿಂದ ಜು.16ರಂದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಬಂಟ ಸಾಧಕರಿಗೆ ಸನ್ಮಾನ ಮತ್ತು ಯಕ್ಷಗಾನ ಬಯಲಾಟವನ್ನು ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಟಿ.ಪ್ರಭಾಕರ ಶೆಟ್ಟಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 16ರಂದು ಮಧ್ಯಾಹ್ನ 12.30ಕ್ಕೆ ವಿಜಯನಗರ 3ನೇ ಹಂತದಲ್ಲಿರುವ ಆಶಾ ಪ್ರಕಾಶ್ ಶೆಟ್ಟಿ ಬಂಟ್ಸ್ ಕನ್ವೆನ್ಷನ್ ಹಾಲ್‌ನಲ್ಲಿ ಬಂಟರ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಮಂಡ್ಯ ಸಾಹಿತಿ ಹಾಗೂ ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಡಾ.ಶ್ರೀನಿವಾಸ ಶೆಟ್ಟಿ, ಮಂಡ್ಯ ಉದ್ಯಮಿ ಡಾ.ಜಗನ್ನಾಥ್ ಎಸ್.ಶೆಟ್ಟಿ, ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಕೆ.ಗೋಪಾಲಶೆಟ್ಟಿ, ಮಂಗಳೂರಿನ ಯಕ್ಷ ಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್‌ನ ಸಂಸ್ಥಾಪಕ, ಯಕ್ಷಗಾನ ಭಾಗವತ ಪಟ್ಲ ಸತೀಶ್ ಶೆಟ್ಟಿ ಅವರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಬಂಟರ ಸಂಘದ ಅಧ್ಯಕ್ಷ ಟಿ.ಪ್ರಭಾಕರ ಶೆಟ್ಟಿ ಅಧ್ಯಕ್ಷತೆ ವಹಿಸುವರು. ಎಂಆರ್‌ಜಿ ಸಮೂಹ ಸಂಸ್ಥೆಯ ಚೇರ್ಮನ್ ಕೆ.ಪ್ರಕಾಶ್ ಶೆಟ್ಟಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಚಿವ ಬಿ. ರಮಾನಾಥ ರೈ, ಮಾಜಿ ಶಾಸಕ ವಾಸು ಭಾಗವಹಿಸುವರು ಎಂದು ತಿಳಿಸಿದರು.

ಸಂಜೆ 4.30 ಗಂಟೆಗೆ ಪ್ರಸಿದ್ಧ ತೆಂಕುತಿಟ್ಟಿನ ಯಕ್ಷಗಾನ ಕಲಾವಿದರಾದ ಪಟ್ಲ ಸತೀಶ್ ಶೆಟ್ಟಿ ಮತ್ತು ತಂಡದವರಿಗೆ 'ಚಕ್ರವ್ಯೂಹ– ಶ್ರೀನಿವಾಸ ಕಲ್ಯಾಣ' ಯಕ್ಷಗಾನ ಬಯಲಾಟ ಏರ್ಪಡಿಸಿದೆ. ಇದಕ್ಕೆ ಉಚಿತ ಪ್ರವೇಶವಿದ್ದು, ಯಕ್ಷಗಾನ ಪ್ರೇಮಿಗಳು ಭಾಗವಹಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಕೆ.ಗಣೇಶ್ ನಾರಾಯಣ ಹೆಗ್ಡೆ, ವಿ.ಪಿ.ಹೆಗ್ಡೆ, ಸುರೇಶ್ ಆಳ್ವಾ, ಪಿ.ತುಕಾರಾಂ ರೈ ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿ ಹತ್ಯೆಗೆ ಸಂಚು

ನಿವೃತ್ತ ಪೊಲೀಸ್ ಅಧಿಕಾರಿ ಸೇರಿ ಇಬ್ಬರ ಬಂಧನ





ಪಾಟ್ನಾ, ಜು.14– ಉಗ್ರಗಾಮಿ ಸಂಘಟನೆ ಜೊತೆ ನಂಟು ಹೊಂದಿರುವ ಆರೋಪದಡಿ ಜಾರ್ಖಂಡ್‌ನ ನಿವೃತ್ತ ಪೊಲೀಸ್ ಅಧಿಕಾರಿ ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ.

ಈ ಮೂಲಕ ಬಿಹಾರ ಪೊಲೀಸರು ಭಾರತ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಸಂಭಾವ್ಯ ಭಯೋತ್ಪಾದಕ ಘಟಕ ಬೇಧಿಸಿದ್ದಾರೆ. ಬುಧವಾರ ತಡರಾತ್ರಿ ಪಾಟ್ನಾದ ಫುಲ್ವಾರಿ ಷರೀಫ್ ಪ್ರದೇಶದಲ್ಲಿ ಇಬ್ಬರನ್ನು ಬಂಧಿಸಲಾಗಿದೆ. ಬಂಧಿತರನ್ನು ಜಾರ್ಖಂಡ್‌ನ ನಿವೃತ್ತ ಪೊಲೀಸ್ ಅಧಿಕಾರಿ ಮೊಹಮ್ಮದ್ ಜಲಾವುದ್ದೀನ್ ಮತ್ತು ಅಥರ್ ಪರ್ವೇಜ್ ಎಂದು ಗುರುತಿಸಲಾಗಿದೆ. ಅವರು ಉಗ್ರ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದಾರೆ. ಜಲಾವುದ್ದೀನ್ ಈ ಹಿಂದೆ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ)ದೊಂದಿಗೆ ಸಂಬಂಧ ಹೊಂದಿದ್ದರು ಎಂದು ಫುಲ್ವಾರಿ ಷರೀಫ್ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ(ಎಎಸ್‌ಪಿ) ಮನೀಶ್ ಕುಮಾರ್ ಹೇಳಿದ್ದಾರೆ.

ಪೊಲೀಸರ ಪ್ರಕಾರ, ಮಾಡ್ಯೂಲ್ 2047ರ ವೇಳೆಗೆ ಭಾರತವನ್ನು ಇಸ್ಲಾಮಿಕ್ ರಾಷ್ಟ್ರವನ್ನಾಗಿ ಮಾಡಲು ಉಗ್ರ ಸಂಘಟನೆ ಯೋಜಿಸುತ್ತಿದೆ. ಜುಲೈ 12ರಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸುವ ಸಂಚು ಕೂಡ ಇತ್ತು. ಬಂಧಿತರು ಸ್ಥಳೀಯರಿಗೆ ಕತ್ತಿ ಮತ್ತು ಚಾಕುಗಳನ್ನು ಹೇಗೆ ಬಳಸಬೇಕೆಂದು ಕಲಿಸುತ್ತಿದ್ದರು ಮತ್ತು ಕೋಮುಗಲಭೆಗೆ ಪ್ರಚೋದನೆ ನೀಡುತ್ತಿದ್ದರು. ಇತರ ರಾಜ್ಯಗಳ ಜನರು ಪಾಟ್ನಾದಲ್ಲಿ ಅವರನ್ನು ಭೇಟಿ ಮಾಡುತ್ತಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ. ಭೇಟಿಮಾಡಲು ಬರುವವರು ಹೋಟೆಲ್ ನಲ್ಲಿ ತಂಗುವ ವೇಳೆ ಹೆಸರನ್ನು ಬದಲಾಯಿಸುತ್ತಿದ್ದರು ಎಂದು ತಿಳಿದುಬಂದಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.07.2022 ಶುಕ್ರವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ : ಶ್ರವಣ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಬೆಳಗ್ಗೆ 7.30ಕ್ಕೆ ಶ್ರೀಚಕ್ರ ಪೂಜೆ, ಮಹಾಗಣಪತಿ ಪೂಜೆ, ಯೋಗ ವಾಸಿಷ್ಠ ಪ್ರವಚನ, ಸಂಜೆ 6ಕ್ಕೆ ಶ್ರೀ ಗುರುಗೀತಾ ಪಾರಾಯಣ, ಸಂಜೆ 7ಕ್ಕೆ ಚಾತುರ್ಮಾಸ್ಯ ಪ್ರವಚನ ಪ್ರಾರಂಭ, ಶ್ರೀ ವಿಶಾಲಾಕ್ಷೀ ಅಮ್ಮನವರಿಗೆ ವಿಶೇಷ ಅರ್ಚನೆ, ಸಂಪೂರ್ಣ ಋಗ್ವೇದ ಪುಷ್ಪಮಾಲಾ ಪಾರಾಯಣ ಪ್ರಾರಂಭ, ಸ್ಥಳ: ವಿಶ್ವ ಪ್ರಾರ್ಥನಾ ಮಂದಿರ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಆಷಾಢ ಶುಕ್ರವಾರದ ವಿಶೇಷ ಅಲಂಕಾರ, ಪೂಜೆ, ವರ್ಣ ಅಲಂಕಾರ, ಬೆಳಗ್ಗೆ 8ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿತರಣೆ, ಸಂಜೆ 5ಕ್ಕೆ ಪ್ರಸಾದ ವಿತರಣೆ, ಸ್ಥಳ: ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ಶೃಂಗೇರಿ :** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವಗಳು, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ–ನಂತರ ಅಭಿಷೇಕ, 8.30ಕ್ಕೆ ಶ್ರೀ ದುರ್ಗಾ ಹೋಮ, 11.30ಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಶ್ರೀ ದುರ್ಗಾ ಪರಮೇಶ್ವರಿ ಅಲಂಕಾರ (ಸಿಂಹವಾಹಿನಿ), ರೂಪನಗುಡಿ ರತ್ನ ಮತ್ತು ವೃಂದದವರಿಂದ ವಯೋಲಿನ್ ವಾದನ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ.

■ **ಮೈಸೂರು ವಿಶ್ವವಿದ್ಯಾನಿಲಯ, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗ :** ಅಂತಾರಾಷ್ಟ್ರೀಯ ಯುವ ಕೌಶಲ್ಯ ಅಭಿವೃದ್ಧಿ ದಿನದ ಅಂಗವಾಗಿ ಎಜಿ ಅಂಡ್ ಪಿ ಕಂಪನಿ ವತಿಯಿಂದ ಸೂಕ್ಷ್ಮ ದರ್ಶಕಗಳ ವಿತರಣಾ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಎಜೆ ಅಂಡ್ ಪಿ ಕಂಪನಿ ಮುಖ್ಯ ಆಪರೇಟಿಂಗ್ ಆಫೀಸರ್ ಚಿರಾದೀಪ್ ದತ್ತ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಡಾ. ಚೈತ್ರಾ ನಾರಾಯಣ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, 6.50 ರೈತರಿಗೆ ಸಲಹೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಟಿ.ಎಂ. ತ್ಯಾಗರಾಜನ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್. ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಅನಿತಾ ಆನಂದ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00 ಗಾನರ ಸೋತ್ತುಂಗ ಶ್ರೀ ಶ್ಯಾಮಕೃಷ್ಣ, ನಿರೂಪಣಾ ಸಾಹಿತ್ಯ–ಪ್ರೊ.ಆರ್.ವಿಶ್ವೇಶ್ವರನ್, ಪರಿಕಲ್ಪನೆ–ಗೀತಾ ರಮಾನಂದ್, 4.30 ವೃತ್ತಿ ಮಾರ್ಗದರ್ಶನ– ತೋಟಗಾರಿಕಾ ವಿಜ್ಞಾನ ಕುರಿತು ಡಾ. ವಿಷ್ಣುವರ್ಧನ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಲಾಭದಾಯಕ ತೋಟಗಾರಿಕೆ ಕೃಷಿ ಕ್ರಮಗಳು ಕುರಿತು ಎಂ.ಪಿ.ನರಸಿಂಹೇಗೌಡ ಅವರೊಡನೆ ಸಂದರ್ಶನ, 7.45 ಈಸಿ ಇಂಗ್ಲೀಷ್– ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, ನಿರ್ಮಾಣ– ಎಸ್.ಲಕ್ಷ್ಮೀನಾರಾಯಣ, 9.00 ಕನ್ನಡ ಭಾರತಿ, 10.30 ಸವಿನೆನಪು

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ: 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮಾಜಿ ಅಧ್ಯಕ್ಷ ಕೆ.ಎನ್. ಸುಬ್ಬರಾವ್ ಅವರಿಗೆ ಶ್ರದ್ಧಾಂಜಲಿ ಸಭೆ, ಸ್ಥಳ: ಎಸ್.ಪಿ. ಭಟ್ ಹಾಲ್, ಸಂಜೆ 4ಕ್ಕೆ.

■ **ಗಾನಭಾರತೀ :** ಸಂಗೀತ ವಿದ್ವಾನ್ ಪದ್ಮಚರಣರ 20ನೇ ಪುಣ್ಯಸ್ಮರಣೆ, ವಿದ್ವಾನ್ ಎಸ್.ಶಂಕರ್ ಅವರ ಶಂಕರಾಭರಣಂ ತಂಡದವರಿಂದ ನಾದ ನೃತ್ಯ ನಮನ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ ಮೈಸೂರು :** ಸ್ವಾಮಿ ಅಪರಾಜಿತನಂದ ಅವರಿಂದ ಇಂಗ್ಲಿಷ್‌ನಲ್ಲಿ ಗೀತಾ ಜ್ಞಾನ ಯಜ್ಞ, ಪುರುಷೋತ್ತಮ ಯೋಗ (ಭಗವದ್ಗೀತೆಯ 15 ಚಾಪ್ಟರ್) ಕುರಿತು ಉಪನ್ಯಾಸ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಂಗ ಸಂಭ್ರಮ–2022, ಬೆಂಗಳೂರಿನ ಶ್ರೀ ಶಾರದ ಕಲಾನಿಕೇತನ ಕಲಾವಿದರಿಂದ ಟಿ.ಪಿ. ಕೈಲಾಸಂ ವಿರಚಿತ ಹೋಂ ರೂಲ್ ನಗೆ ನಾಟಕ ಪ್ರದರ್ಶನ, ನಿರ್ದೇಶನ : ಕೆ. ಪ್ರದೀಪ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

■ **ಶ್ರೀ ನೃತ್ಯನಿಕೇತನ ಭರತನಾಟ್ಯ ಮತ್ತು ಕೂಚುಪುಡಿ ನಾಟ್ಯಶಾಲೆ :** ಗುರುಪೂರ್ಣಿಮಾ ಅಂಗವಾಗಿ ಗುರುನಮನ ನೃತ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಕನ್ನಡ ಚಲನಚಿತ್ರ ನಟಿ ಕು. ಅಮೃತಾ ಅಯ್ಯಂಗಾರ್, ಸನ್ಮಾನಿತರು : ಶ್ರೀ ಶಾರದ ನೃತ್ಯ ಕಲಾಶಾಲೆ ಸಂಸ್ಥಾಪಕ ವಿದ್ವಾನ್ ಮಹೇಶ್, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಸಂಜೆ 6.30ಕ್ಕೆ.

ಮೈಸೂರು ಜಿಲ್ಲೆಯಲ್ಲಿ 320 ಡೆಂಗ್ಯೂ ಪ್ರಕರಣ ವರದಿ

ನಗರದಲ್ಲೇ 220 ಮಂದಿಯಲ್ಲಿ ಜಾಡ್ಯ

- ಆರು ತಿಂಗಳಲ್ಲಿ ಈ ಪ್ರಮಾಣದ ವರದಿ
- ಮುಂಜಾಗ್ರತೆ ವಹಿಸಲು ಡಿಹೆಚ್‌ಓ ಸಲಹೆ

ಮೈಸೂರು, ಜು.14(ಆರ್‌ಕೆಬಿ)– ಮೈಸೂರು ಜಿಲ್ಲೆಯಲ್ಲಿ ಮಳೆ ಜಾಸ್ತಿಯಾಗಿ, ಸೊಳ್ಳೆಗಳ ಹಾವಳಿ ವ್ಯಾಪಕವಾಗಿದೆ. ಇವುಗಳಿಂದ ಬರುವ ಸಾಂಕ್ರಾಮಿಕ ರೋಗಿಗಳ ಬಗ್ಗೆ ಎಚ್ಚರಿಕೆ ವಹಿಸುವಂತೆ ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಸಲಹೆ ನೀಡಿದ್ದಾರೆ.


ಡಾ.ಪ್ರಸಾದ್

ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಳೆದ ಆರು ತಿಂಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟಾರೆ 320, ಅದರಲ್ಲಿ ಮೈಸೂರು ನಗರದಲ್ಲೇ 220 ಪ್ರಕರಣಗಳು, ಮೈಸೂರು ತಾಲೂಕಿನಲ್ಲಿ 25, ಪಿರಿಯಾಪಟ್ಟಣದಲ್ಲಿ 28 ಪ್ರಕರಣಗಳು ವರದಿಯಾಗಿವೆ. ಉಳಿದ ತಾಲೂಕುಗಳಲ್ಲಿ 4–5 ಪ್ರಕರಣಗಳು ಕಂಡು ಬಂದಿದ್ದು, ಜನರು ಸೊಳ್ಳೆಗಳಿಂದ ಎಚ್ಚರಿಕೆ ವಹಿಸಬೇಕು, ಆತಂಕಪಡುವ ಅಗತ್ಯವಿಲ್ಲ ಎಂದರು.

ಸೊಳ್ಳೆಗಳು ಶುದ್ಧ ನೀರಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಎಚ್ಚರಿಕೆ ವಹಿಸಿದರೆ ಶೇ.90 ರಿಂದ 95ರಷ್ಟು ಡೆಂಗ್ಯೂ ರೋಗದಿಂದ ಪಾರಾಗಬಹುದು. ಮನೆ ಒಳಗಿರುವ ನೀರಿನ ತೊಟ್ಟಿಗಳನ್ನು ಮುಚ್ಚಬೇಕು. ಟಾರ್ಚ್ ಬಿಟ್ಟು ನೋಡಿದರೆ ಅಲ್ಲಿಯೂ ಸೊಳ್ಳೆಗಳ ಮರಿಗಳನ್ನು ಪತ್ತೆ ಹಚ್ಚಬಹುದು. ಯಾವುದೇ ಜ್ವರ ಕಾಣಿಸಿಕೊಂಡರೂ ತಕ್ಷಣ ಚಿಕಿತ್ಸೆ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಮೈಸೂರು ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣದಲ್ಲಿದ್ದು, ಮುನ್ನೆಚ್ಚರಿಕೆ ವಹಿಸಿ, ಆದರೆ ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ಪಿಎಸ್‌ಐ ನೇಮಕಾತಿ ಹಗರಣ

ಭಾಗಿಯಾದ ಅಧಿಕಾರಿಗಳ ಮಂಪರು ಪರೀಕ್ಷೆಗೆ ಆಗ್ರಹ

ಬೆಂಗಳೂರು,ಜು.14(ಕೆಎಂಶಿ)–ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕೆಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.



ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಈ ನೇಮಕಾತಿ ಅಕ್ರಮದಲ್ಲಿ ಅನೇಕ ಸಚಿವರು, ಅವರ ಆಪ್ತರು ಶಾಮೀಲಾಗಿರುವ ಸಂದೇಹಗಳಿವೆ. ಈ ಬಗ್ಗೆ ಸ್ಪಷ್ಟ ಮಾಹಿತಿ ಹೊರಬೀಳಬೇಕು. ನೇಮಕಾತಿ ವಿಭಾಗದ ಎಡಿಜಿಪಿಯಾಗಿದ್ದ ಅಮೃತ್‌ಪೌಲ್ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ ಯಾರೆಲ್ಲ ಇದರ ಹಿಂದೆ ಇದ್ದಾರೆ ಎಂಬುದು ಬಹಿರಂಗಗೊಳ್ಳುತ್ತದೆ. ಅಮೃತ್‌ಪೌಲ್ ಬರೆದ ಡೈರಿಯ ಬಗ್ಗೆಯು ಸಮಗ್ರ ತನಿಖೆ ನಡೆಯಬೇಕು. ಯಾವುದೇ ಕಾರಣಕ್ಕೂ ಈ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು ಎಂದಿದ್ದಾರೆ.

ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ಸಂವಾದ

ಮೈಸೂರು,ಜು.14–ಮೈಸೂರಿನ ವಿಜಯನಗರ 2ನೇ ಹಂತದ ಕೃಷಿಕ್ ಸರ್ವೋದಯ ಫೌಂಡೇಷನ್, ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಜು.16(ಶನಿವಾರ) ಸಂಜೆ 4 ಗಂಟೆಗೆ ಉಚಿತ ಸಂವಾದ ಏರ್ಪಡಿಸಲಾಗಿದೆ. ಇದರಲ್ಲಿ ಇದೇ ಸಂಸ್ಥೆಯಲ್ಲಿ ತರಬೇತಿ ಪಡೆದು ತೇರ್ಗಡೆ ಹೊಂದಿದ ಶ್ರೀಮತಿ ರಶ್ಮಿ(ಐಆರ್‌ಎಸ್), ಅರ್ಜುನ್ ಒಡೆಯರ್ (ಕೆಎಎಸ್), ರಫೀಕ್ ಪಾಷ (ಕೆಎಎಸ್) ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಳ್ಳಲಿದ್ದಾರೆ. ಮಾಹಿತಿಗಾಗಿ ಸಂಪರ್ಕಿಸಿ ದೂರವಾಣಿ: 0821–23015641, ಮೊ.ಸಂ. 9945752592, 9591406461 (ಡಾ. ಗೋವಿಂದರಾಜು)

ಶೇ.5 ಜಿಎಸ್‌ಟಿ ವಿರೋಧಿಸಿ ಇಂದು ಎಪಿಎಂಸಿ ದಿನಸಿ ವಹಿವಾಟು ಬಂದ್

ಮೈಸೂರು, ಜು. 14(ಆರ್‌ಕೆ)–ಬ್ರಾಂಡೆಡ್ ಆಹಾರ ಪದಾರ್ಥಗಳ ಮೇಲೆ ಶೇ.5ರಷ್ಟು ಜಿಎಸ್‌ಟಿ ವಿಧಿಸಿರುವುದನ್ನು ಖಂಡಿಸಿ, ನಾಳೆ (ಜು.15) ಮೈಸೂರಿನ ಬಂಡೀಪಾಳ್ಯ ಎಪಿಎಂಸಿ ಮಾರುಕಟ್ಟೆಯ ದಿನಸಿ ವಹಿವಾಟು ಬಂದ್ ಮಾಡಲು ವರ್ತಕರು ನಿರ್ಧರಿಸಿದ್ದಾರೆ. ಆಲ್ ಇಂಡಿಯಾ ಟ್ರೇಡ್ ಯೂನಿಯನ್ (AITU) ಬಂದ್‌ಗೆ ಕರೆ ನೀಡಿದ್ದು, ಅದರಂತೆ ಬಂಡೀಪಾಳ್ಯ ಎಪಿಎಂಸಿಯ 'ಎ' ಮತ್ತು 'ಬಿ' ಬ್ಲಾಕಿನ ಎಲ್ಲಾ 800 ದಿನಸಿ ಅಂಗಡಿಗಳು ಹಾಗೂ ಹಳೇ ಸಂತೆಪೇಟೆಯ 50ಕ್ಕೂ ಹೆಚ್ಚು ವರ್ತಕರು ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿ, ಪ್ರತಿಭಟನೆ ಮಾಡಲಿದ್ದಾರೆ. ಆದರೆ ಎಪಿಎಂಸಿ ಪ್ರಾಂಗಣದ ತರಕಾರಿ ವ್ಯಾಪಾರ ಎಂದಿನಂತೆ ನಡೆಯಲಿದೆ ಎಂದು ವರ್ತಕರ ಸಂಘದ ಉಪಾಧ್ಯಕ್ಷರೂ ಆದ ಎಪಿಎಂಸಿ ಸದಸ್ಯ ಎಸ್.ಪ್ರಕಾಶ್ ತಿಳಿಸಿದ್ದಾರೆ.

ಐವರು ಹಸು ಕಳ್ಳರ ಬಂಧನ

ಗೂಡ್ಸ್ ವಾಹನದೊಂದಿಗೆ ಹಸು ವಶಕ್ಕೆ

ಮೈಸೂರು, ಜು.14– ಐವರು ಹಸು ಕಳ್ಳರನ್ನು ಬಂಧಿಸಿರುವ ಸರಸ್ವತಿಪುರಂ ಠಾಣೆಯ ಪೊಲೀಸರು ಒಂದು ಹಸುವನ್ನು ವಶಪಡಿಸಿಕೊಂಡಿದ್ದಾರೆ.

ಕನಕಪುರ ತಾಲೂಕು ಹೂಕುಂಡ ಗ್ರಾಮದ ಪ್ರಶಾಂತ್(28), ಮೈಸೂರಿನ ಕೆಜಿ ಕೊಪ್ಪಲಿನ ಅಕ್ಷಯ್‌ಕುಮಾರ್(26), ದರ್ಶನ್(19), ಜನತಾನಗರದ ಶಿವು(21) ಮತ್ತು ನಾಗಮಂಗಲ ತಾಲೂಕು ಕಸುವನಹಳ್ಳಿಯ ಕೆ.ಎನ್.ಶಿವು (20) ಬಂಧಿತರಾಗಿದ್ದು, ಇವರು ಬೊಲೆರೋ ಗೂಡ್ಸ್ ವಾಹನದಲ್ಲಿ ಹಸುವೊಂದನ್ನು ಸಾಗಿಸುತ್ತಿದ್ದ ವೇಳೆ ಬೋಗಾದಿ ಚೆಕ್‌ಪೋಸ್ಟ್ ಬಳಿ ಸಾರ್ವಜನಿಕರು ಇವರನ್ನು ಅಡ್ಡಗಟ್ಟಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ತೆರಳಿದ ಪೊಲೀಸರು ಈ ಐವರನ್ನೂ ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸಿದಾಗ ಇವರು ಮೈಸೂರಿನ ರಾಜರಾಜೇಶ್ವರಿನಗರದ ರಿಂಗ್ ರಸ್ತೆ ಬಳಿ ಹಸುವನ್ನು ಕಳವು ಮಾಡಿಕೊಂಡು ವಾಹನದಲ್ಲಿ ಸಾಗಿಸುತ್ತಿರುವುದು ಗೊತ್ತಾಗಿದೆ. ಈ ಹಿನ್ನೆಲೆ ಐವರನ್ನೂ ಬಂಧಿಸಿ, ಹಸು ಮತ್ತು ಗೂಡ್ಸ್ ವಾಹನ ವಶಪಡಿಸಿಕೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಜು.17ರಂದು ವಿಚಾರ ಸಂಕಿರಣ

ಮೈಸೂರು, ಜು.14(ಆರ್‌ಕೆ)–ರೋಟರಿ ಕ್ಲಬ್ ಆಫ್ ಮೈಸೂರ್ (ವಲಯ 7 ಮತ್ತು 8) ಸಂಸ್ಥೆಯು ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಜುಲೈ 17ರಂದು ಉದ್ಯಮಶೀಲತಾ ವಿಚಾರ ಸಂಕಿರಣ ಏರ್ಪಡಿಸಿದೆ. ಅಂದು ಬೆಳಗ್ಗೆ 9.30 ರಿಂದ ಸಂಜೆ 5 ಗಂಟೆವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಹೊಸದಾಗಿ ಉದ್ಯಮ ಆರಂಭಿಸ ಬಯಸುವ ಯುವಕರಿಗೆ ಸರ್ಕಾರದಿಂದ ಎಂಎಸ್‌ಎಂಇ, ಸ್ಟಾರ್ಟ್ ಅಪ್ ಯೋಜನೆಗಳು, ಬ್ಯಾಂಕ್ ಹಾಗೂ ವಿವಿಧ ಹಣಕಾಸು ಸಂಸ್ಥೆಗಳಿಂದ ಹಣಕಾಸು ಹಾಗೂ ಇತರ ಸೌಲಭ್ಯಗಳು, ಅಗತ್ಯ ಮಾಹಿತಿಯನ್ನು ಒದಗಿಸಲಾಗುವುದು. ನೋಂದಣಿಗಾಗಿ ಮೊಹಮ್ಮದ್ ಯಾಸರ್ 7975636049 ಅವರನ್ನು ಸಂಪರ್ಕಿಸಬಹುದು.


ನಾಗವಾಲ ಗ್ರಾಮದಲ್ಲಿ ಉದ್ಯಾನವನ ಕಾಮಗಾರಿಗೆ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಬಸವನಾಯ್ಕ, ಕೆ.ಮಹೇಶ್, ಪಿಡಿಓ ಡಾ.ಶೋಭಾರಾಣಿ, ಗ್ರಾಪಂ ಸದಸ್ಯ ಮಂಜು, ಸಂತೋಷ್, ಚಿಕ್ಕಣ್ಣ, ಅಂಗಡಿ ಸದಾಶಿವ, ಗ್ರಾಪಂ ಕಾರ್ಯದರ್ಶಿ ಯಶವಂತ್, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಡೈರಿ ಕುಮಾರ್ ಉಪಸ್ಥಿತರಿದ್ದರು.

ಸೋಲಿನ ಭೀತಿ: ತಾಪಂ, ಜಿಪಂ ಚುನಾವಣೆಗೆ ಹಿಂದೇಟು

ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಆರೋಪ

ಮೈಸೂರು, ಜು.14(ಎಂಟಿವೈ)– ಬಿಜೆಪಿ ಸರ್ಕಾರದ ದುರಾಡಳಿತ, ಭ್ರಷ್ಟಾಚಾರದಿಂದಾಗಿ ರಾಜ್ಯದಲ್ಲಿ ಜನರು ಆಕ್ರೋಶಗೊಂಡಿರುವುದರಿಂದ ಸೋಲಿನ ಭೀತಿಯಿಂದಾಗಿ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ನಡೆಸಲು ಮುಂದಾಗುತ್ತಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ನಡೆದ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಗಳ ಸಮಿತಿ ವತಿಯಿಂದ ಆಯೋಜಿಸಿದ್ದ ಪಂಚಾಯತ್ ರಾಜ್ ಸಮ್ಮೇಳನ ಹಾಗೂ ವಿವಿಧ ವಿಧಾನಸಭಾ ಕ್ಷೇತ್ರಗಳ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಕಾರ್ಯಕ್ರಮವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಬಿಜೆಪಿ ತನ್ನ ಅಧಿಕಾರಾವಧಿಯಲ್ಲಿ ಅಭಿವೃದ್ಧಿಯನ್ನು ಕಡೆಗಣಿಸಿದ್ದರಿಂದ ಎಲ್ಲೆಡೆ ಟೀಕೆಗೆ ಗುರಿಯಾಗುತ್ತಿದೆ. ಇತ್ತೀಚೆಗೆ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಕಂಡು ಬಿಜೆಪಿಗೆ ಆತಂಕವುಂಟಾಗಿದೆ. ಮೇಲ್ಮನೆ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಗಿಂತ ಕಾಂಗ್ರೆಸ್‌ಗೆ ಶೇ.6–7ರಷ್ಟು ಹೆಚ್ಚಿನ ಮತ ಲಭಿಸಿದೆ. ಈ ಹಿನ್ನೆಲೆಯಲ್ಲಿ ಜಿ.ಪಂ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆದರೇ ಸೋಲುತ್ತೇವೆ ಎನ್ನುವ ಭಯದಿಂದ ಚುನಾವಣೆಯನ್ನು ಮುಂದೂಡುತ್ತಿದ್ದಾರೆ ಎಂದು ಕಿಡಿಕಾರಿದರು.


ಕುಡಿಯುವ ನೀರು, ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚುರುಕು ಮುಟ್ಟುತ್ತದೆ. ಗ್ರಾಮೀಣ ಪ್ರದೇಶಗಳಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಜಿಪಂ ಮಟ್ಟದಲ್ಲಿ ವಿವಿಧ ಯೋಜನೆಗಳು ಅನುಷ್ಠಾನಗೊಳ್ಳಲಿವೆ. ಕಳೆದ ಒಂದೂವರೆ ವರ್ಷದಿಂದ ಜಿಪಂ, ತಾಪಂನಲ್ಲಿ ಜನಪ್ರತಿನಿಧಿಗಳು ಇಲ್ಲದೇ ಇರುವುದರಿಂದ ಸಾರ್ವಜನಿಕರು ಎಲ್ಲದಕ್ಕೂ ಶಾಸಕರ ಬಳಿ ಬರಬೇಕಾದ ಪರಿಸ್ಥಿತಿ ಬಂದಿದೆ ಎಂದು ಟೀಕಿಸಿದರು.

ದಿ.ರಾಜೀವ್‌ಗಾಂಧಿ ಅವರು ಪ್ರಧಾನಮಂತ್ರಿಯಾಗಿದ್ದಾಗ ಸ್ಥಳೀಯ ಜನರಿಗೆ ಅಧಿಕಾರವನ್ನು ನೀಡಿದರೆ ಸುಸ್ಥಿರ ಅಭಿವೃದ್ಧಿ ಸಾಧ್ಯ ಎಂಬ ಮುಂದಾಲೋಚನೆಯಿಂದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಅಲ್ಲದೇ ಕಾಂಗ್ರೆಸ್ ಅಧಿಕಾರದಲ್ಲಿದ್ದ ವೇಳೆ ಹೆಚ್ಚಿನ ಅನುದಾನ ನೀಡುವ ಮೂಲಕ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲಾಗುತ್ತಿತ್ತು. ಆದರೆ ಇದೀಗ ಬಿಜೆಪಿ ಸರ್ಕಾರ ಸ್ಥಳೀಯ ಸಂಸ್ಥೆಗಳನ್ನು ಕಡೆಗಣಿಸುತ್ತಿದೆ ಎಂದು ಆರೋಪಿಸಿದರು.

ಪ್ರತಿ ಜಿಲ್ಲೆಯಲ್ಲೂ 75 ಕಿ.ಮೀ. ಪಾದಯಾತ್ರೆ: ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷವಾದ ಹಿನ್ನೆಲೆಯಲ್ಲಿ ಎಐಸಿಸಿ ವತಿಯಿಂದ ವಿವಿಧ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ 75 ಕಿಲೋಮೀಟರ್ ಪಾದಯಾತ್ರೆ ನಡೆಸಲು ನಿರ್ಧರಿಸಲಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ ಸುಮಾರು 80 ಕಿ.ಮೀ. ಬರುವುದರಿಂದ ಒಂದೇ ಸಲ 5 ದಿನಗಳ ಕಾಲ ಪಾದಯಾತ್ರೆ ಮಾಡಲಾಗುತ್ತದೆ. ಮೈಸೂರು ನಗರವನ್ನು ಹೊರತುಪಡಿಸಿ ಗ್ರಾಮಾಂತರದ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ ವಿಸ್ತಾರವಾಗಿರುವುದರಿಂದ ಯಾವ ರೀತಿ ಕಾರ್ಯಕ್ರಮ ಆಯೋಜಿಸಬೇಕು ಎನ್ನುವುದನ್ನು ತೀರ್ಮಾನಿಸಬೇಕಾಗಿದೆ ಎಂದರು.

ಸ್ವಾತಂತ್ರ್ಯದ ಸಂಭ್ರಮಕ್ಕಾಗಿ ಪಾದಯಾತ್ರೆ: ಆ.15ರಂದು ಬೆಂಗಳೂರಿನಲ್ಲಿ ಸುಮಾರು 1 ಲಕ್ಷ ಕಾರ್ಯಕರ್ತರಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ ಸರ್ಕಾರದ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ಜರುಗುವುದರಿಂದ ಮಧ್ಯಾಹ್ನ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಒಂದು ಲಕ್ಷಕ್ಕೂ ಅಧಿಕ ಮಂದಿ ಪಕ್ಷದ ಕಾರ್ಯಕರ್ತರು ತ್ರಿವರ್ಣ ಧ್ವಜ ಹಿಡಿದುಕೊಂಡು ಪಾದಯಾತ್ರೆ ಆರಂಭಿಸಲಿದ್ದಾರೆ. ಜಯನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮುಕ್ತಾಯವಾಗುತ್ತದೆ. ಅಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿದೆ. ಇದರಲ್ಲಿ ಭಾಗವಹಿಸುವವರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿದರು. ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಹೆಗ್ಡೆ, ರಾಜೀವ್‌ಗಾಂಧಿ ಪಂಚಾಯತ್ ರಾಜ್ ರಾಜ್ಯ ಸಮಿತಿ ಅಧ್ಯಕ್ಷ ಸಿ.ನಾರಾಯಣ ಸ್ವಾಮಿ, ಸಲಹಾ ಸಮಿತಿ ಸದಸ್ಯ ಘೋರ್ಪಡೆ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕೆಪಿಸಿಸಿ ಕಾರ್ಯದರ್ಶಿ ನಾಗವಾಲ ನರೇಂದ್ರ, ಮುಖಂಡರಾದ ಜಿ.ವಿ.ಸೀತಾರಾಮ್, ಹೆಡತಲೆ ಮಂಜುನಾಥ್, ವೆಂಕಟರಾಮು, ಬಸವಣ್ಣ ಉಮಾಶಂಕರ್ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಆಯೋಜಿಸಿದ್ದ ಪಂಚಾಯತ್ ರಾಜ್ ಸಮ್ಮೇಳನ ಹಾಗೂ ವಿವಿಧ ವಿಧಾನಸಭಾ ಕ್ಷೇತ್ರಗಳ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಕಾರ್ಯಕ್ರಮವನ್ನು ನಗಾರಿ ಬಾರಿಸುವ ಮೂಲಕ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಉದ್ಘಾಟಿಸಿದರು.

ಪಂಚಾಯತ್ ರಾಜ್ ಜಿಲ್ಲಾ ಸಮಿತಿಗೆ ನೇಮಕ

ರಾಜೀವ್‌ಗಾಂಧಿ ಪಂಚಾಯತ್ ರಾಜ್ ಜಿಲ್ಲಾ ಸಮಿತಿಗೆ ಅಧ್ಯಕ್ಷರಾಗಿ ಬಿ.ಮಲ್ಲೇಶ್ ನೇಮಕಗೊಂಡರು. ಅಂತೆಯೇ ವಿ.ಸಿ.ಶ್ರೀನಿವಾಸಮೂರ್ತಿ (ಜಿಲ್ಲಾ ಉಪಾಧ್ಯಕ್ಷ), ಡಿ.ಎಂ.ರಾಜು(ಜಿಲ್ಲಾ ಕಾರ್ಯದರ್ಶಿ) ನಿಯೋಜನೆಗೊಂಡರು. ವಿಧಾನಸಭಾವಾರು ಅಧ್ಯಕ್ಷರನ್ನಾಗಿ ಶ್ರೀನಿವಾಸ್(ಹೆಚ್.ಡಿ.ಕೋಟೆ), ಸುರೇಶ್(ಹುಣಸೂರು), ಶಿವಕುಮಾರ್ (ಚಾಮುಂಡೇಶ್ವರಿ), ವಾಸಿಂ ಪಾಷಾ(ಕೆ.ಆರ್.ನಗರ), ನವೀನ್ ಕುಮಾರ್ (ನಂಜನಗೂಡು), ಉಮೇಶ್(ವರುಣಾ), ಸುರೇಶ್ (ಇಲವಾಲ ಬ್ಲಾಕ್) ನೇಮಕಗೊಂಡರು.

ಕೃಷಿ ಬೆಳವಣಿಗೆಯಿಂದ ದೇಶದ ಆರ್ಥಿಕತೆ ಸದೃಢ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ಲೇಷಣೆ



ಬೆಂಗಳೂರು,ಜು.14(ಕೆಎಂಶಿ)–ಕೃಷಿ ವಲಯ ಬೆಳವಣಿಗೆಯಾದಷ್ಟು ರಾಜ್ಯ ಮತ್ತು ರಾಷ್ಟ್ರದ ಆರ್ಥಿಕತೆ ಸದೃಢವಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ದೇಶದ ಆರ್ಥಿಕತೆಗೆ ಪ್ರಮುಖ ಚಾಲನಾ ಶಕ್ತಿ ಕೃಷಿ. ಕೃಷಿ ವಲಯ ದೇಶದ ಆರ್ಥಿಕತೆಯಲ್ಲಿ ಇಂಜಿನ್‌ಗೆ ಇಂಧನದಂತೆ ಕೆಲಸ ಮಾಡುತ್ತಿದೆ ಎಂದು ವಿಶ್ಲೇಷಿಸಿದರು.

ನಗರದಲ್ಲಿ ನಡೆದ ಎಲ್ಲ ರಾಜ್ಯಗಳ ಕೃಷಿ ಮತ್ತು ತೋಟಗಾರಿಕಾ ಸಚಿವರ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೃಷಿ ವಲಯ ಬೆಳವಣಿಗೆಯಾದಷ್ಟು ಆರ್ಥಿಕತೆ ಸದೃಢವಾಗುತ್ತದೆ. ಹಾಗಾಗಿ ಆರ್ಥಿಕತೆಯ ಇಂಜಿನ್‌ಗೆ ಕೃಷಿ ಚಾಲನಾ ಶಕ್ತಿ ಎಂದರು.

ದೇಶದಲ್ಲಿ ಶೇ.1ರಷ್ಟು ಕೃಷಿ ಕ್ಷೇತ್ರದ ಬೆಳವಣಿಗೆಯಾದರೆ ಶೇ.4ರಷ್ಟು ಉತ್ಪಾದಕ ವಲಯ, ಶೇ.10ರಷ್ಟು ಸೇವಾವಲಯದ ಬೆಳವಣಿಗೆಯಾಗುತ್ತದೆ. ಹಾಗಾಗಿ, ಕೃಷಿಯೇ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದೆ ಎಂದರು.

ದೇಶದಲ್ಲಿ ಐಟಿ–ಬಿಟಿ ವಲಯ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಶಕ್ತಿ ನೀಡುತ್ತಿದ್ದರೂ ಮೂಲ ಚಾಲನಾ ಶಕ್ತಿ ಕೃಷಿಯಾಗಿರುತ್ತದೆ. ದೇಶದ ಸಂಸ್ಕೃತಿ ಒಗ್ಗೂಡಿಸುವ, ಐಕ್ಯತೆಯನ್ನು ಬಲಗೊಳಿಸುವ ಶಕ್ತಿ ಕೃಷಿಗೆ ಇದೆ ಎಂದರು.

ಸ್ವಾತಂತ್ರ್ಯ ನಂತರ ನಾವು ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿ ಆಹಾರ ಭದ್ರತೆಯನ್ನು ಹೊಂದಲು ಸಾಧ್ಯವಾಗಿದೆ. ಇದಕ್ಕೆ ರೈತರು, ಕೃಷಿ ವಿಜ್ಞಾನಿಗಳು ಕಾರಣ ಎಂದರು.

ಕೃಷಿಯಲ್ಲಿ ಪ್ರಗತಿ ಸಾಧಿಸಿದ್ದರೂ ರೈತರ ಸ್ಥಿತಿಗತಿಯಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಸಬಲರನ್ನಾಗಿಸುವ ಅಗತ್ಯವಿದ್ದು, ಪ್ರಧಾನಿ ಮೋದಿ ಅವರು ರೈತ ಪರ ನೀತಿಗಳನ್ನು ಜಾರಿ ಮಾಡಿದ್ದಾರೆ. ಕಳೆದ 7–8 ವರ್ಷಗಳಲ್ಲಿ ರೈತರ ಕಲ್ಯಾಣಕ್ಕೆ ಹಲವು ಯೋಜನೆಗಳು ಜಾರಿಯಾಗಿವೆ. ರೈತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇಡೀ ದೇಶದಲ್ಲೇ ಮಾದರಿ ಎಂಬಂತೆ ವಿದ್ಯಾನಿಧಿ ಯೋಜನೆಯನ್ನು ಜಾರಿಗೊಳಿಸಿ ರೈತರ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆ ಜಾರಿಗೆ ತಂದಿದ್ದೇವೆ ಎಂದರು. ಹಾಲು ಉತ್ಪಾದಕರಿಗೆ ನೆರವಾಗುವ ನಿಟ್ಟಿನಲ್ಲಿ ಕ್ಷೀರ ಬ್ಯಾಂಕ್ ಅನ್ನು ರಾಜ್ಯದಲ್ಲಿ ಆರಂಭಿಸಲಾಗುತ್ತಿದೆ. ಕ್ಷೀರ ಬ್ಯಾಂಕ್ ಮೂಲಕ ಹಾಲು ಉತ್ಪಾದಕರಿಗೆ ಅಗತ್ಯವಾದ ಸಾಲ ಮತ್ತಿತರ ನೆರವನ್ನು ಒದಗಿಸಲಾಗುವುದು ಎಂದು ಬೊಮ್ಮಾಯಿ ಹೇಳಿದರು.

> "ರಾಜ್ಯ ಸರ್ಕಾರ ಸಹ ರೈತರ ಸಬಲೀಕರಣಕ್ಕೆ ಹಲವು ಯೋಜನೆಗಳನ್ನು ಜಾರಿ ಮಾಡಿದೆ. ಸರ್ಕಾರದ ರೈತಪರ ಯೋಜನೆಗಳಿಂದ ಕೃಷಿ ಕ್ಷೇತ್ರ ಬೆಳವಣಿಗೆ ಹೊಂದಿದೆ. ರೈತರಿಗಾಗಿ ಕೇಂದ್ರ ಸರ್ಕಾರ ಜಾರಿ ಮಾಡಿರುವ 'ಕೃಷಿ ಸಮ್ಮಾನ್' ಯೋಜನೆಗೆ ರಾಜ್ಯ ಸರ್ಕಾರವೂ ಕೈಜೋಡಿಸಿ ಕೇಂದ್ರದ 6 ಸಾವಿರ ರೂ.ಗಳ ಜತೆಗೆ ರಾಜ್ಯ ಸರ್ಕಾರ 4 ಸಾವಿರ ರೂ.ಗಳನ್ನು ರೈತರಿಗೆ ನೀಡುವ ಮೂಲಕ ರೈತಪರ ಬದ್ಧತೆಯನ್ನು ತೋರಿದೆ.
> –ಬಸವರಾಜ ಬೊಮ್ಮಾಯಿ


ಮೈಸೂರಿನ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಯೋಜನೆಯನ್ನು ರದ್ದು ಮಾಡಿದ ಹಿನ್ನೆಲೆಯಲ್ಲಿ ಯೋಜನೆ ವಿರುದ್ಧ ಧ್ವನಿಯೆತ್ತಿದ್ದ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರನ್ನು ಪ್ರಗತಿಪರ ಪರಿಸರವಾದಿಗಳು ಗುರುವಾರ ಅಭಿನಂದಿಸಿದರು. ಈ ವೇಳೆ ಮುಖಂಡರಾದ ಸಿ.ಬಸವೇಗೌಡ, ಕಾಳಚನ್ನೇಗೌಡ, ಕಾಳೇಗೌಡ ನಾಗವಾರ, ಪರಶುರಾಮೇಗೌಡ, ರಾಮೇಗೌಡ, ಕೆ.ಜಿ.ಗುರುಸ್ವಾಮಿ, ಅಂಜನ ಮಲ್ಲೇಶ್, ಲೀಲಾ ಶಿವಕುಮಾರ್, ಲೀಲಾ ವೆಂಕಟೇಶ್, ಕೃಷ್ಣಪ್ಪ ಚಿತ್ರದಲ್ಲಿದ್ದಾರೆ.

ಬ್ಯಾಂಕ್‌ನಲ್ಲೇ 6 ಲಕ್ಷ ರೂ. ಕಳವು: ಆರೋಪಿ ಬಂಧನ

ಮೈಸೂರು, ಜು.14(ಎಂಕೆ)– ಬ್ಯಾಂಕ್‌ನಲ್ಲಿ ನೋಟುಗಳನ್ನು ವಿಂಗಡಿಸಿ, ಬಂಡಲ್ ಮಾಡುತ್ತಲೇ ಲಕ್ಷಾಂತರ ರೂ. ಎಗರಿಸಿದ್ದ ಆಸಾಮಿಯನ್ನು ಲಷ್ಕರ್ ಠಾಣೆ ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹುಣಸೂರು ತಾಲೂಕಿನ ಹರವೆ ಗ್ರಾಮದ ನಿವಾಸಿ ಕೆ.ಕೆ.ನಾಗೇಂದ್ರ(37) ಬಂಧಿತ ಆರೋಪಿ. ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಬಾಡಿಗೆ ಮನೆ ಪಡೆದು ವಾಸವಿದ್ದ ಈತ ಬ್ಯಾಂಕ್‌ಗೆ ಬರುವ ನೋಟುಗಳನ್ನು ಎಟಿಎಂ ಹಾಗೂ ಆರ್‌ಬಿಐಗೆ ಕಳುಹಿಸಿ ಕೊಡುವ ಹಳೇ ನೋಟು(ಮರು ಬಳಕೆಗೆ ಯೋಗ್ಯವಲ್ಲದ ಸಾಯಿಲ್ಡ್ ನೋಟುಗಳು) ಗಳನ್ನು ವಿಂಗಡಿಸಿ, ಬಂಡಲ್ ಕಟ್ಟುವ ವೇಳೆ ಸುಮಾರು 6 ಲಕ್ಷ ರೂ. ಎಗರಿಸಿ ಸಿಕ್ಕಿಬಿದ್ದಿದ್ದಾನೆ.

ಎಟಿಎಂಗಳಿಗೆ ತುಂಬಲು ಯೋಗ್ಯವಾದ ನೋಟುಗಳನ್ನು 100 ನೋಟುಗಳ ಕಟ್ಟುಗಳನ್ನಾಗಿ ಹಾಗೂ ಯೋಗ್ಯವಲ್ಲದ ನೋಟುಗಳನ್ನು ನಿಯಮಾನುಸಾರ ಆರ್‌ಬಿಐಗೆ ಕಳುಹಿಸಲು 1000 ನೋಟುಗಳ ಕಟ್ಟುಗಳನ್ನಾಗಿ ಮಾಡಲು ಹಾಗೂ ಶ್ರಿಂಕ್ ಯಾಪ್(ನೋಟಿನ ಕಟ್ಟುಗಳಿಗೆ ಪ್ಲಾಸ್ಟಿಕ್ ಕವರ್ ಸುತ್ತುವುದು) ಮಾಡುವುದಕ್ಕೆ ಎಸ್‌ಬಿಐ ಸರ್ಕಾರಿ ವ್ಯವಹಾರಗಳ ಶಾಖೆ ಹಾಗೂ ಬೆಂಗಳೂರಿನ ಮೆರ್ಸ್‌ಜಿಸೆಕ್ ಅಂಡ್ ದೆವ್ರಿಂಟ್ ಇಂಡಿಯಾ ಪ್ರೈವೆಟ್ ಲಿಮಿಟೆಡ್(ಏಜೆನ್ಸಿ) ನಡುವೆ ಒಪ್ಪಂದವಾಗಿದೆ. ಅದರಂತೆ ಏಜೆನ್ಸಿ ನೌಕರನಾಗಿದ್ದ ನಾಗೇಂದ್ರ ಬ್ಯಾಂಕ್‌ನಲ್ಲಿ ನೋಟುಗಳನ್ನು ವಿಂಗಡಿಸಿ, ಬಂಡಲ್ ಮಾಡುವ ವೇಳೆ ಹಣದ ಕಟ್ಟುಗಳನ್ನು ಎಗರಿಸಿದ್ದಾನೆ.

ವಿವರ: ಕಳೆದ ಮಾ.28ರಂದು ಬ್ಯಾಂಕ್‌ನಿಂದ ಆರ್‌ಬಿಐಗೆ ಕಳುಹಿಸಿದ್ದ ಸಾಯಿಲ್ಡ್ ನೋಟಿನ ಕಟ್ಟುಗಳಲ್ಲಿ 2 ಸಾವಿರ ರೂ., ಮುಖಬೆಲೆಯ 200 ನೋಟು(4 ಲಕ್ಷ ರೂ.) ಕಡಿಮೆ ಇರುವುದು ಕಂಡುಬಂದ ಹಿನ್ನೆಲೆಯಲ್ಲಿ ಮೇ.31ರಂದು ಮೆರ್ಸ್‌ಜಿಸೆಕ್ ಅಂಡ್ ದೆವ್ರಿಂಟ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಯವರು ವಿಂಗಡಿಸಿ, ಬಂಡಲ್ ಮಾಡಿದ ಎಲ್ಲಾ ನೋಟಿನ ಕಟ್ಟುಗಳನ್ನು ಮರು ಪರಿಶೀಲನೆ ಮಾಡಿದಾಗಲೂ 2 ಸಾವಿರ ರೂ. ಮುಖಬೆಲೆಯ 35 ನೋಟುಗಳು, 500 ರೂ. ಮುಖಬೆಲೆಯ 258 ನೋಟುಗಳು ಹಾಗೂ ನೂರು ರೂ. ಮುಖ ಬೆಲೆಯ 21 ನೋಟು ಸೇರಿ 2,01,100 ರೂ. ಒಳಗೊಂಡಂತೆ ಒಟ್ಟು 6,01,100 ರೂ. ಕಡಿಮೆಯಾಗಿರುವುದು ಕಂಡುಬಂದಿದೆ.

ಈ ಸಂಬಂಧ ಬ್ಯಾಂಕ್‌ನ ನೋಟು ವಿಂಗಡಿಸುವ ಕೊಠಡಿಯ ಸಿಸಿಟಿವಿ ಚೆಕ್ ಮಾಡಿದಾಗ ಮೆರ್ಸ್‌ಜಿಸೆಕ್ ಅಂಡ್ ದೆವ್ರಿಂಟ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿ ಹಣ ವಿಂಗಡಿಸಿ, ಬಂಡಲ್ ಕಟ್ಟಲು ನೇಮಕ ಮಾಡಿದ್ದ ನಾಗೇಂದ್ರ ನೋಟುಗಳನ್ನು ವಿಂಗಡಿಸಿ, ಬಂಡಲ್ ಮಾಡುವ ವೇಳೆಯೇ ನೋಟಿನ ಕಟ್ಟುಗಳನ್ನು ಜೇಬಿಗೆ ಹಾಕಿಕೊಳ್ಳುತ್ತಿರುವ ದೃಶ್ಯಗಳು ಸೆರೆಯಾಗಿವೆ. ಸಿಸಿಟಿವಿ ದೃಶ್ಯಾವಳಿ ಸಮೇತ ಎಸ್‌ಬಿಐ ಬ್ಯಾಂಕ್ ಸರ್ಕಾರಿ ವ್ಯವಹಾರಗಳ ಶಾಖೆಯ ವ್ಯವಸ್ಥಾಪಕರು ನೀಡಿದ ದೂರು ದಾಖಲಿಸಿಕೊಂಡ ಲಷ್ಕರ್ ಠಾಣೆ ಪೊಲೀಸರು ಆರೋಪಿ ಕೆ.ಕೆ.ನಾಗೇಂದ್ರನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : (ತಮ್ಮ ಹೊಸ ಕಾರಿನಲ್ಲಿ ಸುತ್ತಾಡಿ ಮನೆಗೆ ಹಿಂತಿರುಗುವಾಗ) "ಸೆಕೆ ಆಗ್ತಿದೆ. ಕಾರಿನ ಕಿಟಕಿಗಳನ್ನು ತೆಗೆದು ಬಿಡೋಣವೇ?"

ಹೆಂಡತಿ : "ಬೇಡ, ಬೇಡ. ಕಿಟಕಿ ತೆಗೆದಿದ್ದರೆ ಅಕ್ಕ ಪಕ್ಕದ ಮನೆಯವರು ನಮ್ಮ ಕಾರಿಗೆ ಎ.ಸಿ. ಇಲ್ಲ ಅಂದ್ಕೊತಾರೆ!"

ಮೈಸೂರು ಮಿತ್ರ

ಶುಕ್ರವಾರ, 15 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಲೋಕವನ್ನೇ ಬೆಳಗುವ ಸೂರ್ಯ ತನ್ನ ಸಾಮರ್ಥ್ಯಕ್ಕಾಗಿ ಹೆಮ್ಮೆ ಪಡುವುದಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಧೈರ್ಯವಿದ್ದವನಿಗೆ ದೈವ ಸಹಾಯ

ನಿಮ್ಮ ಪತ್ರಗಳು

ಭಾರತದ ಮುಂದಿನ ರಾಷ್ಟ್ರಪತಿ ಆಯ್ಕೆ

ಮಾನ್ಯರೆ,

ನಾರಾಯಣನ ರಾಣಿ ಚಾಲುಕ್ಯ ವಿಕ್ರಮನಿಂದ ಬಿರುದಾಂಕಿತ ದಾನ ಚಿಂತಾಮಣಿ ಅತ್ತಿಮಬ್ಬೆಯ ಅಪರಾವತಾರಿ (ನನ್ನಕ್ಕಯ್ಯ) ಶ್ರೀಮತಿ ಸುಧಾಮೂರ್ತಿಯವರ ಬಗ್ಗೆ ಮಿಸ್ಟರ್. ಕೆ.ಬಿ.ಜಿ ಅವರು ಬರೆದಿದ್ದ ಲೇಖನವನ್ನು ಓದಿದೆ. ರಾಷ್ಟ್ರದ ಅತ್ಯಂತ ಪ್ರತಿಷ್ಠೆಯ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಬಹುದಾದ ನಾಲ್ಕೈದು ಹೆಸರುಗಳನ್ನು ಸೂಚಿಸಿ ಆಸಕ್ತ ಜನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು, ಆ ನಾಲ್ಕೈದು ಜನರಲ್ಲಿ ಒಬ್ಬರು ಸುಧಾಮೂರ್ತಿ.

ಮಿಸ್ಟರ್ ಕೆ.ಬಿ.ಜಿ. ತಮ್ಮ ಸಂಪಾದಕೀಯದಲ್ಲಿ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಲು ಶ್ರೀಮತಿ. ಸುಧಾಮೂರ್ತಿಯವರು ಅತ್ಯಂತ ಸೂಕ್ತ ವ್ಯಕ್ತಿ ಎಂಬ ಅವರ ಲೇಖನವನ್ನು ಮೆಚ್ಚಿದೆ. ನನ್ನ ನಿಕಟವರ್ತಿ ಕೆಲವು ವಿಚಾರವಂತರ ಮುಂದೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೆ. ರಾಷ್ಟ್ರಪತಿ ಚುನಾವಣೆಗೆ ಉಮೇದುವಾರಿಕೆ ಅರ್ಜಿ ಸಲ್ಲಿಸಲು ಅಂತಿಮ ದಿನಕ್ಕೆ (29–06–22) ಮುನ್ನವೇ ನಾನು ಹಾಗೆ ಹೇಳಿದ್ದೆ. ರಾಷ್ಟ್ರದ ಸರ್ವಜನರು ಸರ್ವ ಸಮ್ಮತಿಯಿಂದ ಆಯ್ಕೆ ಮಾಡಿದಾಗ ಮಾತ್ರ (ಚುನಾಯಿಸಿದಾಗ ಅಲ್ಲ). ಶ್ರೀಮತಿ ಸುಧಾಮೂರ್ತಿಯವರು ಅದಕ್ಕೆ ಸಮ್ಮತಿಸುತ್ತಾರೆ. ಇಲ್ಲವಾದಲ್ಲಿ ಇಲ್ಲ. ಮೈಸೂರಿನ ಹೆಬ್ಬಾಳದ ಒಂದು ರಸ್ತೆಗೆ ಅವರ ಹೆಸರನ್ನು ಇಟ್ಟ ದಿನ ಆ ಶುಭ್ರ ವಸ್ತ್ರಧಾರಿಣಿಯನ್ನು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ನೋಡಿದೆ. ಶೃಂಗೇರಿ ಶಾರದಾಂಬೆಯ ದರುಶನವಾದಂತಾಗಿ ಮನದಲ್ಲೆ ಕೈ ಮುಗಿದೆ.

ಶ್ರೀಮತಿ ಸುಧಾಮೂರ್ತಿಯವರ ನೈಜ ವ್ಯಕ್ತಿತ್ವವನ್ನು ಅರಿಯಲು **(To read in between two Lines)** ಅವರ ಶ್ರೇಷ್ಠ ಕಾದಂಬರಿ "ಮಹಾಶ್ವೇತೆ" ಮತ್ತು ಪ್ರಬಂಧ ಸಂಕಲನ "ಸಾಮಾನ್ಯರಲ್ಲಿ ಅಸಮಾನ್ಯರು" ಓದಿದಲ್ಲಿ ಅಧಿಕಾರಕ್ಕಾಗಿ ಎಂದೂ ಹಲುಬಿದವರಲ್ಲ ಶ್ರೀಮತಿ. ಸುಧಾಮೂರ್ತಿ, ಹೊಗಳಿಕೆಗೆ ಎಂದೂ ನಲಿದವರಲ್ಲ ಶ್ರೀಮತಿ. ಸುಧಾಮೂರ್ತಿ ಎಂಬ ಸತ್ಯ ನಿಚ್ಚಳವಾಗಿ ಗೋಚರಿಸುತ್ತದೆ. ಹಾಗಾಗಿ ರಾಷ್ಟ್ರಪತಿ ಹುದ್ದೆಗೆ ಆಯ್ಕೆಯ ವಿಧಾನದ ಬದಲು ಚುನಾವಣೆಯ ಪ್ರಕ್ರಿಯೆ (Politicise) ಆದಾಗ ಶ್ರೀಮತಿ ಸುಧಾಮೂರ್ತಿ ಮೌನವಾಗಿ ಉಳಿದು ಬಿಟ್ಟರು.

ಉತ್ತರ ಪ್ರದೇಶದ ಓರ್ವ ಶಾಸಕನ ಒಂದು ಮತಕ್ಕೆ 208 ಪಾಯಿಂಟುಗಳು ನಿಗದಿಯಾಗಿರುವುದರಿಂದ ಶ್ರೀಮತಿ ದ್ರೌಪದಿ ಮುರ್ಮು ಭಾರತದ ಮುಂದಿನ ರಾಷ್ಟ್ರಪತಿ ಆಗುವರೆಂದು ಆಶಿಸೋಣ. **–ಎಸ್.ಪುಟ್ಟಣ್ಣ, ಕೊಳ್ಳೇಗಾಲ.**

ಶ್ರೀಲಂಕಾ ಸ್ಥಿತಿ, ಎಚ್ಚರಿಕೆ ಗಂಟೆ

ಮಾನ್ಯರೆ,

ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ದ್ವೀಪ ರಾಷ್ಟ್ರ ಶ್ರೀಲಂಕಾ ಹೊತ್ತಿ ಉರಿಯುವ ಸ್ಥಿತಿಗೆ ತಲುಪಿದೆ. ಬೊಕ್ಕಸ ಬರಿದಾಗಿದೆ. ದೇಶದ ಆಡಳಿತದ ಚುಕ್ಕಾಣಿ ಹಿಡಿದ ಸ್ವತಃ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಪರಾರಿಯಾಗಿ ಅಜ್ಞಾತ ಸ್ಥಳದಲ್ಲಿ ಅವಿತುಕೊಳ್ಳುವಂತಹ ಸ್ಥಿತಿ ನಿಜಕ್ಕೂ ಆ ದೇಶದ ಮಟ್ಟಿಗೆ ಆತಂಕಕಾರಿ. ಇತ್ತ ಆಹಾರ, ಇಂಧನ, ಅಗತ್ಯ ವಸ್ತುಗಳಿಗೆ ಪರಿತಪಿಸುತ್ತಿರುವ ಪ್ರಜೆಗಳು ಬೀದಿಗಿಳಿದು ನಾಯಕರ ಮನೆಗಳಿಗೆ ಬೆಂಕಿ ಹಚ್ಚುವ ಕೃತ್ಯಕ್ಕೆ ಇಳಿದಿದ್ದಾರೆ. ಇದನ್ನು ಗಮನಿಸಿದರೆ ಅಲ್ಲಿಯ ಜನರ ಪರಿಸ್ಥಿತಿ ಹೇಗಿರಬಹುದು ಎಂಬುದು ಊಹಿಸಲೂ ಅಸಾಧ್ಯ.

ಇದು ನಮ್ಮ ದೇಶಕ್ಕೂ ಎಚ್ಚರಿಕೆಯ ಗಂಟೆಯಾಗಿದೆ. ಮಿತಿಮೀರಿದ ಭ್ರಷ್ಟಾಚಾರ, ನಮ್ಮನ್ನು ಆಳುವವರು, ಅಧಿಕಾರ ಶಾಹಿಯ ಸರ್ಕಾರದ ಹಣವನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಳ್ಳೆ ಹೊಡೆಯಬೇಕೆಂಬ ಮನಃಸ್ಥಿತಿಗೆ ತಲುಪಿರುವುದು ಆರ್ಥಿಕ ಶಿಸ್ತು ಮರೆತು ಕೇವಲ ಪಕ್ಷಗಳ ಜನಪ್ರಿಯತೆಗಾಗಿ ಬೊಕ್ಕಸದ ಹಣವನ್ನು ಅನುತ್ಪಾದಕ ಯೋಜನೆಗಳಿಗೆ ತೊಡಗಿಸುವುದು, ದುಡಿದು ತಿನ್ನುವ ಮನೋಭಾವ ಕಡಿಮೆಯಾಗಿ ಸರ್ಕಾರದ ಸೌಲಭ್ಯಕ್ಕೆ ಕೈಯೊಡ್ಡಿ ನಿಲ್ಲುವ ಸ್ಥಿತಿಗೆ ಜನ ತಲುಪಿರುವುದು ದೇಶದ ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಶ್ರೀಲಂಕಾದ ಸ್ಥಿತಿ ಎಲ್ಲಾ ದೇಶಗಳಿಗೂ ಎಚ್ಚರಿಕೆಯ ಗಂಟೆ. **–ಎಸ್.ಶುಭ, ಮಹಾರಾಜ ಕಾಲೇಜು, ಮೈಸೂರು**

ಚಾಮುಂಡಿಬೆಟ್ಟದಲ್ಲಿ ಮತ್ತೆ ಭೂ ಕುಸಿತದ ಆತಂಕ!

ಮಾನ್ಯರೆ,

ಮತ್ತೆ ಮಳೆಗಾಲ ಶುರುವಾಗಿದೆ. ಆದರೆ, ಕಳೆದ ಎಂಟು ತಿಂಗಳ ಹಿಂದೆ ಚಾಮುಂಡಿ ಬೆಟ್ಟದ ನಂದಿ ಮಾರ್ಗದಲ್ಲಿ ಭೂ ಕುಸಿತ ಉಂಟಾಗಿದ್ದ ರಸ್ತೆ ದುರಸ್ತಿ ಆಗಿಲ್ಲ. ಇದರಿಂದ ಈ ಬಾರಿ ಮಳೆಗಾಲದಲ್ಲಿ ಮತ್ತಷ್ಟು ಭೂ ಕುಸಿತ ಉಂಟಾಗುವ ಆತಂಕ ಎದುರಾಗಿದೆ. ಭೂಮಿ ಕುಸಿತ ಉಂಟಾಗಿದ್ದ ಜಾಗದಲ್ಲಿ ಹೆಚ್ಚು ಮಳೆ ಸುರಿದರೆ ಭೂಮಿ ತೇವಾಂಶ ಮತ್ತೆ ಹೆಚ್ಚಾಗುತ್ತದೆ. ಈ ವೇಳೆ ಜೆಸಿಬಿ ಹಾಗೂ ಇತರ ಉಪಕರಣಗಳನ್ನು ಬಳಸಲು ಸಾಧ್ಯವಾಗುವುದಿಲ್ಲ. ಮಳೆ ಸಂಪೂರ್ಣವಾಗಿ ನಿಂತು ಭೂಮಿ ಗಟ್ಟಿಯಾದ ನಂತರವಷ್ಟೆ ಕಾಮಗಾರಿ ಆರಂಭಿಸಬೇಕಾಗುತ್ತದೆ. ಆದರೆ, ಈ ಬಾರಿ ಒಂದು ತಿಂಗಳು ಮುಂಚಿತವಾಗಿ ಬೇಸಿಗೆ ಶುರುವಾಗಿರುವ ಹಿನ್ನೆಲೆಯಲ್ಲಿ ಮಳೆಗಾಲವೂ ಬೇಗ ಆರಂಭವಾಗಬಹುದು ಎಂದು ಅಂದಾಜಿಸಲಾಗಿತ್ತು. ಹೀಗಾದರೆ ಕಾಮಗಾರಿ ನಡೆಸುವುದಾದರೂ ಹೇಗೆ? ಮತ್ತೊಮ್ಮೆ ಭೂ ಕುಸಿತ ಉಂಟಾದರೆ ಏನು ಮಾಡುವುದು? ಎಂದು ಪರಿಸರ ಪ್ರೇಮಿಗಳ ಆತಂಕ.

–ಅಭಿಷೇಕ್ ಎಚ್.ಎಸ್., ಮಹಾರಾಜ ಕಾಲೇಜು, ಮೈಸೂರು.

ಶಿಕ್ಷಣ ಸಚಿವರ ಉಡಾಫೆ ಮಾತು ಸಲ್ಲ

ಮಾನ್ಯರೆ,

"ಮಕ್ಕಳು ಶಾಲೆಗೆ ಬರುವುದು ಕಲಿಯುವುದಕ್ಕೆ ಹೊರತು ಶೂ, ಸಾಕ್ಸ್ ಹಾಕಿಕೊಳ್ಳುವುದಕ್ಕೆ ಅಲ್ಲ" ಎಂದು ಶಿಕ್ಷಣ ಸಚಿವ ಬಿಸಿ ನಾಗೇಶ್ ಅವರು ಉಡಾಫೆಯಾಗಿ ಮಾತನಾಡಿರುವುದು ಸರಿಯಲ್ಲ. ಅದರಲ್ಲೂ ಶಿಕ್ಷಣ ಸಚಿವರಾಗಿ ಈ ರೀತಿ ಮಾತನಾಡಿದ್ದು ಅವರ ಬೇಜವಾಬ್ದಾರಿಯನ್ನು ತೋರಿಸುತ್ತದೆ. ಶೂ, ಸಾಕ್ಸ್, ಮತ್ತು ಸೈಕಲ್ ಕಾರಣದಿಂದಾಗಿ ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ಅವುಗಳನ್ನು ವಿತರಿಸಲಾಗುತ್ತದೆ ಎಂಬ ಸಾಮಾನ್ಯ ಜ್ಞಾನವೂ ಸಚಿವರಿಗೆ ಇಲ್ಲದೆ ಹೋಗಿರುವುದು ವಿಪರ್ಯಾಸ. ಕೆಲವು ವರದಿಗಳ ಪ್ರಕಾರ 10 ಲಕ್ಷ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದಿದ್ದಾರೆ. ಅವರೆಲ್ಲ ಯಾಕೆ ಹೊರಗುಳಿದಿದ್ದಾರೆ ಎಂಬ ಸತ್ಯವನ್ನು ಪತ್ತೆ ಹಚ್ಚಿದರೆ ಶೂ, ಸಾಕ್ಸ್, ಪಠ್ಯಪುಸ್ತಕಗಳು, ಸೈಕಲ್ ವಿತರಣೆ ಮಹತ್ವ ಗೊತ್ತಾಗುತ್ತದೆ. ಶೂ, ಸಾಕ್ಸ್, ಸೈಕಲ್ ವಿತರಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 332 ಕೋಟಿ ರೂಪಾಯಿ ನೀಡಿರುವುದು ಸ್ವಾಗತಾರ್ಹ.

–ಶ್ರೀರಾಮ್. ಎಸ್., ಮಹಾರಾಜ ಕಾಲೇಜು ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಮನುಷ್ಯನ ಅಭ್ಯಾಸ 'ಬಲ'

ಪ್ರತಿ ಮನುಷ್ಯನೂ ತನ್ನದೇ ಆದ ಜೀವನ ವಿಧಾನ ಕಂಡುಕೊಂಡಿದ್ದಾನೆ. ಅದನ್ನೇ ಅನುಸರಿಸುತ್ತಾನೆ. ಅವು ಇತರರಿಂದ ಪ್ರೇರಿತರಾಗಿದ್ದಿರಬಹುದು ಅಥವಾ ತಾನೇ ಕಂಡುಕೊಂಡ ಜೀವನ ವಿಧಾನವಾಗಿರಲೂಬಹುದು. ಈ ಜೀವನ ವಿಧಾನಗಳು ಒಂದು ರೀತಿಯಲ್ಲಿ ಅಭ್ಯಾಸವಾಗಿ, ಹವ್ಯಾಸವಾಗಿ ಮಾರ್ಪಾಡಾಗುತ್ತವೆ. ಅವು ನಮಗೆ ತಿಳಿಯದಂತೆ ನಮ್ಮ ಜೀವನ ಕ್ರಮವಾಗಿ ಬಿಟ್ಟಿರುತ್ತವೆ. ಒಂದು ರೀತಿಯಲ್ಲಿ ಈ ಅಭ್ಯಾಸ ದುರಭ್ಯಾಸ ಎನಿಸಿದರೆ, ಅದರಿಂದ ತೊಂದರೆಗಳು ಆಗುತ್ತಿದ್ದರೆ, ಅದನ್ನು ಅಲ್ಲಿಗೇ ಬಿಟ್ಟುಬಿಡಬೇಕು. ಅದು ಸರಿ ಎನಿಸಿದರೆ ಮತ್ತಷ್ಟು ಸುಧಾರಣೆಯೊಂದಿಗೆ ಮುಂದುವರೆಸಬೇಕು. ಆದರೆ ಯಾವುದೇ ಕಾರಣದಿಂದ 'ನಾಳೆ ಮಾಡಿದರಾಯಿತು', 'ನಾಳೆ ನೋಡೋಣ' ಎಂಬ ಮನೋಭಾವ ನಮ್ಮನ್ನು ನಮ್ಮ ಅಭ್ಯಾಸಗಳಿಂದ ವಿಮುಕ್ತಿ ಮಾಡಿಸಿಬಿಡುತ್ತದೆ. ಅದರಿಂದ ತೊಂದರೆಯೂ ಆಗಬಹುದು.

ನಮ್ಮ ವಿದ್ಯಾರ್ಥಿಗಳು ಇಂದು ಇದೇ ಮಾರ್ಗ ಅನುಸರಿಸುತ್ತಾರೆ. ಪ್ರತಿದಿನ ಅಧ್ಯಯನ ಮಾಡಬೇಕು, ಅದು ವಿದ್ಯಾರ್ಥಿಯ ಲಕ್ಷಣ. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಮಾಡುವುದು ಥರವಲ್ಲ. ಅದು ನಮ್ಮನ್ನು ಹಾಳುಮಾಡುತ್ತದೆ. ಈ ವಿಷಯ ಗೊತ್ತಿದ್ದರೂ ವಿದ್ಯಾರ್ಥಿಗಳು ನಿರಂತರವಾಗಿ ಓದದೆ, ಪರೀಕ್ಷೆ ಹತ್ತಿರ ಬಂದಾಗ ಗಾಬರಿಯಿಂದ ಓದಲು ಕುಳಿತುಕೊಳ್ಳುತ್ತಾರೆ. ಆಗ ಅವರಲ್ಲಿ ಒತ್ತಡ ಮನೆ ಮಾಡಿರುತ್ತದೆ. ಹಾಗಾಗಿ ಓದಿದ್ದು ಸರಿಯಾಗಿ ಅರ್ಥವಾಗುವುದಿಲ್ಲ. ಓದು ಸಮರ್ಪಕವೆನಿಸುವುದಿಲ್ಲ, ಹೇಗೋ ಅಂಕ ತೆಗೆದು ಉತ್ತೀರ್ಣರಾಗಬಹುದಾದರೂ, ಓದಿದ ಕ್ರಮ ಸರಿಯಿರದ ಕಾರಣ ಜ್ಞಾನ ಬೆಳೆಯುವುದಿಲ್ಲ. ಓದು ಹಾಗೂ ಜ್ಞಾನ ಸಾಮಾನ್ಯವಾಗಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಸರಿಯಾದ ಓದು ಜ್ಞಾನ ಬೆಳೆಸುತ್ತದೆ. ಆದ್ದರಿಂದ ಜ್ಞಾನ ಬೆಳೆಯಬೇಕೆಂದರೆ ನಿರಂತರವಾದ ಓದು ಇರಬೇಕು. ಇದನ್ನು ಅಭ್ಯಾಸ ಎನ್ನಲಾಗುತ್ತದೆ. ಪರೀಕ್ಷಾ ಸಮಯದ ಓದು ಅಭ್ಯಾಸ ಎನಿಸದೆ ದುರಭ್ಯಾಸದ ವ್ಯಾಖ್ಯಾನದಡಿ ಸೇರ್ಪಡೆಯಾಗುತ್ತದೆ.

ನಿರಂತರ ನಡಿಗೆ, ವ್ಯಾಯಾಮ ಒಳ್ಳೆಯ ಅಭ್ಯಾಸಗಳು. ಮಿತ ಆಹಾರ, ಹಿತಕರವೆನಿಸುವಷ್ಟು ಹಣ, ಚಿಕ್ಕದಾದ ಮನೆ ಇವೆಲ್ಲಾ ಒಳ್ಳೆಯ ಅಭ್ಯಾಸಗಳು ಎನಿಸುತ್ತದೆ. ಇವುಗಳ ನಡುವೆ ಗಳಿಕೆಯ ಧಾವಂತ ಕಂಡುಬಂದಾಗ ಅದು ದುರಭ್ಯಾಸವಾಗಿ ಮಾರ್ಪಾಡಾಗುತ್ತಾ ಹೋಗುತ್ತದೆ. ಒಳ್ಳೆಯ ಅಭ್ಯಾಸಗಳು ನೀಡುವ ಫಲ ದೀರ್ಘಕಾಲದ್ದು, ದುರಭ್ಯಾಸದ ಫಲ ಅಲ್ಪಕಾಲದ್ದು. ಒಳ್ಳೆಯ ಅಭ್ಯಾಸಕ್ಕೆ ನಿರಂತರವಾದ ಶ್ರಮ ಬೇಕಾಗುತ್ತದೆ. ಆದರೆ ಅದರಿಂದ ಜೀವನ ಸುಲಲಿತವಾಗುತ್ತದೆ. ವಿಶೇಷ ಎಂದರೆ ನಮ್ಮನ್ನು ಕೆಟ್ಟದ್ದು ಆಕರ್ಷಿಸಿದಷ್ಟು ಒಳ್ಳೆಯ ಸಂಗತಿಗಳು ಆಕರ್ಷಿಸುವುದಿಲ್ಲ. ಈ ಬಗ್ಗೆ ನಾವು ಎಚ್ಚರಿಕೆ ವಹಿಸಬೇಕಾಗುತ್ತದೆ. ನಾವು ಮಾಡಿಕೊಳ್ಳುವ ದುರಭ್ಯಾಸಗಳು ಕ್ರಮೇಣ ನಮ್ಮ ಮಕ್ಕಳಿಗೆ ಬಂದರೂ ಆಶ್ಚರ್ಯವಿಲ್ಲ. ತಂದೆ ಸಿಗರೇಟು ಸೇದುವುದು, ಕುಡಿಯುವುದು ಮಾಡುತ್ತಿದ್ದಾಗ, ಅದು ಸರಿಯೇನೋ ಎಂದು ಮಕ್ಕಳು ಅದನ್ನು ಅನುಸರಿಸಿದರೆ ತಪ್ಪು ಯಾರದ್ದಾಗುತ್ತದೆ? ನಾನು ಮಾಡಿದ ಹಾಗೆ ಮಾಡಬೇಡ ಎನ್ನುವುದಕ್ಕಿಂತ, ನಾನು ಮಾಡಿದ ಹಾಗೆ ಮಾಡು ಎನ್ನುವುದು ಸೂಕ್ತ. ಅದು ಆದರ್ಶದ ಸ್ವಭಾವ. ಆದರೆ ನಾನು ಮಾಡುತ್ತಿರುವುದು ತಪ್ಪು ಎಂದಾದಾಗ ನನ್ನಂತೆಯೇ ನೀನೂ ಮಾಡು ಎಂದು ಮಕ್ಕಳಿಗೆ ಹೇಗೆ ಹೇಳುವುದು? ಅಥವಾ ಹಾಗೆ ಮಾಡಬೇಡ ಎಂದರೆ ಮಕ್ಕಳು ಕೇಳುತ್ತಾರೆಯೇ? ಬಲವಂತ ಮಾಡಿದರೆ ಕದ್ದಾದರೂ ದುರ್ಗುಣದ ದಾಸರಾಗುತ್ತಾರೆ. ಇಂತಹ ಸಂದಿಗ್ಧಗಳು ಬಂದಾಗ ನಾವೇ ನಮ್ಮ ಅವಗುಣಗಳನ್ನು ಬದಿಗೊತ್ತಬೇಕಾಗುತ್ತದೆ.

ನಿರಂತರ ಅಭ್ಯಾಸದ ಅನುಕೂಲಕ್ಕೆ ಸಂಬಂಧಿಸಿದಂತೆ ಒಂದು ಕಥೆ ಇದೆ. ಇದು ಕಾಲ್ಪನಿಕವಾದರೂ ಒಂದು ರೀತಿಯ ಎಚ್ಚರಿಕೆಯನ್ನು ನೀಡುತ್ತದೆ. ಒಮ್ಮೆ ದೇವತೆಗಳ ರಾಜನಾದ ಇಂದ್ರನು ಅದೇಕೋ ಒಂದು ಗ್ರಾಮದ ರೈತರ ಮೇಲೆ ಸಿಟ್ಟು ಮಾಡಿಕೊಂಡು 'ಇನ್ನು 12 ವರ್ಷಗಳು ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಳೆ ಸುರಿಸುವುದಿಲ್ಲ. ಅಲ್ಲಿ ಬಿತ್ತನೆ ಮಾಡಿದರೂ ಬೆಳೆ ಬರುವುದಿಲ್ಲ' ಎಂಬ ಶಾಪ ನೀಡಿದ. ಇದನ್ನು ತಿಳಿದ ರೈತರು, ಶಾಪ ಹಿಂಪಡೆಯುವಂತೆ ಇಂದ್ರನನ್ನು ಪರಿಪರಿಯಾಗಿ ಬೇಡಿಕೊಂಡರು. ಇದಕ್ಕೆ ಮಣಿದ ಇಂದ್ರನು, ಒಂದು ನಿಬಂಧನೆ ವಿಧಿಸುತ್ತಾನೆ. ಶಿವನು ತನ್ನ ಡಮರುಗವನ್ನು ಬಾರಿಸಿದರೆ ಮಾತ್ರ ಈ ಶಾಪ ವಿಮೋಚನೆಯಾಗುತ್ತದೆ ಎಂದು. ಅದರಂತೆ ರೈತರು ಶಿವನ ಮೊರೆ ಹೋದರು. ಶಿವನನ್ನು ಡಮರುಗ ಬಾರಿಸಲು ಕೋರಿದರು. ಆದರೆ ಶಿವ ಈ ಬಗ್ಗೆ ತನ್ನ ಅಸಹಾಯಕತೆ ವ್ಯಕ್ತಪಡಿಸಿ, ನಾನೂ 12 ವರ್ಷಗಳ ನಂತರವೇ ಡಮರುಗ ಬಾರಿಸುವುದಾಗಿ

> **ನಿರಂತರ ನಡಿಗೆ, ವ್ಯಾಯಾಮ ಒಳ್ಳೆಯ ಅಭ್ಯಾಸಗಳು. ಮಿತ ಆಹಾರ, ಹಿತಕರವೆನಿಸುವಷ್ಟು ಹಣ, ಚಿಕ್ಕದಾದ ಮನೆ ಇವೆಲ್ಲಾ ಒಳ್ಳೆಯ ಅಭ್ಯಾಸಗಳು ಎನಿಸುತ್ತದೆ. ಇವುಗಳ ನಡುವೆ ಗಳಿಕೆಯ ಧಾವಂತ ಕಂಡುಬಂದಾಗ ಅದು ದುರಭ್ಯಾಸವಾಗಿ ಮಾರ್ಪಾಡಾಗುತ್ತಾ ಹೋಗುತ್ತದೆ. ಒಳ್ಳೆಯ ಅಭ್ಯಾಸಗಳು ನೀಡುವ ಫಲ ದೀರ್ಘಕಾಲದ್ದು, ದುರಭ್ಯಾಸದ ಫಲ ಅಲ್ಪಕಾಲದ್ದು. ಒಳ್ಳೆಯ ಅಭ್ಯಾಸಕ್ಕೆ ನಿರಂತರವಾದ ಶ್ರಮ ಬೇಕಾಗುತ್ತದೆ. ಆದರೆ ಅದರಿಂದ ಜೀವನ ಸುಲಲಿತವಾಗುತ್ತದೆ. ವಿಶೇಷ ಎಂದರೆ ನಮ್ಮನ್ನು ಕೆಟ್ಟದ್ದು ಆಕರ್ಷಿಸಿದಷ್ಟು ಒಳ್ಳೆಯ ಸಂಗತಿಗಳು ಆಕರ್ಷಿಸುವುದಿಲ್ಲ. ಈ ಬಗ್ಗೆ ನಾವು ಎಚ್ಚರಿಕೆ ವಹಿಸಬೇಕಾಗುತ್ತದೆ.**

ಹೇಳಿದ. ಸರಿ, ಬೇರೆ ದಾರಿ ಕಾಣದೆ ರೈತರು 12 ವರ್ಷ ಕಾಯುವ ನಿರ್ಧಾರಕ್ಕೆ ಬಂದರು. ಎಲ್ಲರಿಗೂ ಮುಂದಿನ 12 ವರ್ಷ ತಾವು ಉತ್ತು ಬಿತ್ತುವುದು ವ್ಯರ್ಥ ಎಂದು ಅರಿವಾಯಿತು. ಆದರೆ ಆ ಗ್ರಾಮದ ಒಬ್ಬ ರೈತ ಮಾತ್ರ ಪ್ರತಿ ವರ್ಷ ತನ್ನ ಜಮೀನನ್ನು ಉಳುತ್ತಿದ್ದ, ಬಿತ್ತನೆ ಮಾಡುತ್ತಿದ್ದ, ಗೊಬ್ಬರವನ್ನೂ ಹಾಕುತ್ತಿದ್ದ. ಆದರೆ ಮಳೆ ಇಲ್ಲದೆ ಬೆಳೆ ಬರುತ್ತಿರಲಿಲ್ಲ. ಇದು ಆ ರೈತನಿಗೂ ಗೊತ್ತಿತ್ತು. ಅವನು ಮೂರು ವರ್ಷ ಹೀಗೇ ಮಾಡಿದಾಗ ಉಳಿದ ರೈತರು ಅವನನ್ನು ಅಪಹಾಸ್ಯ ಮಾಡಿದರು. 12 ವರ್ಷ ಮಳೆ ಬರುವುದಿಲ್ಲ ಎಂದು ಗೊತ್ತಿದ್ದರೂ ನೀನು ವ್ಯರ್ಥ ಪ್ರಯತ್ನ ಮಾಡುತ್ತಿರುವೆ, ಸುಮ್ಮನೇ ಹಣವನ್ನೂ ಪೋಲು ಮಾಡುತ್ತಿರುವೆ ಎಂದರು. ಅದಕ್ಕೆ ಆ ರೈತ ನೀಡಿದ ಉತ್ತರ ಮಾರ್ಮಿಕವಾಗಿತ್ತು. '12 ವರ್ಷ ಮಳೆ ಬರುವುದಿಲ್ಲ ಎಂಬುದು ನನಗೂ ಗೊತ್ತಿದೆ. ಆದರೆ ನಾನು ಇದನ್ನೆಲ್ಲಾ ಮಾಡುತ್ತಿರುವುದು ಉತ್ತುವ, ಬಿತ್ತುವ ಅಭ್ಯಾಸ ಮರೆತುಹೋಗಬಾರದು ಎಂದು. 12 ವರ್ಷದ ನಂತರ ಮಳೆ ಬಂದಾಗ ನಾನು ನನ್ನ ವೃತ್ತಿ ಮರೆತು ಸೋಮಾರಿಯಾಗಿ ಬಿಡಬಾರದಲ್ಲ, ಅದಕ್ಕೆ' ಎಂದ. ಈ ಮಾತು ಶಿವನ ಮಡದಿ ಪಾರ್ವತಿಗೆ ತಿಳಿದು ಅವಳಿಗೆ ಸಂತೋಷವಾಯಿತು. ಕೂಡಲೇ ಅವಳು ಶಿವನ ಉದ್ದೇಶಿಸಿ, 'ನೀನೂ 12 ವರ್ಷ ಡಮರುಗ ಬಾರಿಸದೇ ಇದ್ದರೆ, ಅದನ್ನು ಬಾರಿಸುವುದೇ ಮರೆತುಹೋಗಬಹುದು. ಮುಂದೆ ನಿನ್ನ ಗತಿ ಏನು?' ಇದರಿಂದ ಕೂಡಲೇ ಎಚ್ಚೆತ್ತ ಶಿವ, ನೀನು ಹೇಳುವುದೂ ಸರಿ ಎಂದು ತಕ್ಷಣವೇ ಡಮರುಗ ಬಾರಿಸಿದ. ತಕ್ಷಣ ಆ ಗ್ರಾಮದಲ್ಲಿ ಮಳೆ ಬಂತು. ಗ್ರಾಮದ ಈ ರೈತನ ಜಮೀನಿನಲ್ಲಿ ಮಾತ್ರ ಬೆಳೆ ಬಂದಿತು. ಉಳಿದವರು ಉತ್ತು ಬಿತ್ತನೆ ಮಾಡದಿದ್ದರಿಂದ ಅಲ್ಲಿ ಬೆಳೆ ಬರಲಿಲ್ಲ. ಇದನ್ನು ನೋಡಿದ ಉಳಿದ ರೈತರು ತಾವೂ ಹಾಗೇ ಮಾಡಬೇಕಾಗಿತ್ತು ಎಂದು ಹತಾಶೆಯಿಂದ ಪರಿತಪಿಸಿದರು'. ಇದು ಕಥೆ. ಆದರೆ ಸಂದೇಶ ಮಾತ್ರ ಸಾರ್ವತ್ರಿಕ ಸತ್ಯವಾದುದೇ ಅಲ್ಲವೆ!?

ನಾವು ಅಭ್ಯಾಸ ತಪ್ಪುವುದೂ, ನಮಗೆ ಪ್ರತಿಕೂಲವಾಗಬಹುದು. ಒಳ್ಳೆಯ ಬದುಕು ಬೇಕೆಂದರೆ ಒಳ್ಳೆಯ ಅಭ್ಯಾಸಗಳು ಇರಲೇಬೇಕು ಎಂಬುದು ಎಲ್ಲ ಕಾಲಕ್ಕೂ ಸಲ್ಲುವ ಮಾತಾಗಿದೆ. 'ಹೇಗೆ ಬಿತ್ತಿದರೂ ಉತ್ತಮ ಬೆಳೆ ಬರುತ್ತದೆ' ಎಂಬ ಯಾವ ಸೂತ್ರವೂ ಇಲ್ಲ. ಸರಿಯಾಗಿ ಬಿತ್ತುವುದು, ಸೂಕ್ತವಾಗಿ ಸಲಹುವುದು ನಮ್ಮ ಕರ್ತವ್ಯ. ಅದನ್ನು ಸರಿಯಾಗಿ ಮಾಡಿದರೆ ಉತ್ತಮ ಬೆಳೆ ಬಂದೇ ಬರುತ್ತದೆ.


ನಮಗೆ ಪ್ರತಿದಿನ ವ್ಯಾಯಾಮ ಬೇಕು, ಪ್ರತಿದಿನ ನಡೆಯಬೇಕು, ಅದರಿಂದ ಆರೋಗ್ಯಕ್ಕೆ ಅನುಕೂಲವಾಗುತ್ತದೆ ಎಂದು ತಿಳಿದಿರುತ್ತದೆ. ಆದರೆ ಬೆಳಗಿನ ಸಿಹಿ ನಿದ್ರೆಯನ್ನು ತೊರೆದು ವಾಕಿಂಗ್ ಹೋಗಲು ಮನಸ್ಸು ಬರುವುದಿಲ್ಲ. ಬೆಳಿಗ್ಗೆ ಬೇಗ ಏಳಬೇಕು ಎಂದು ಅಲಾರಂ ಇಟ್ಟುಕೊಂಡವರು ಅದರ ತಲೆ ಮೇಲೆ ಬಡಿದು, ಸುಮ್ಮನಿರಿಸಿ, ಮತ್ತೆ ನಿದ್ರೆಗೆ ಜಾರುತ್ತಾರೆ. ನಾಳೆಯಿಂದ ಹೋದರಾಯಿತು ಎಂದು ತಮಗೆ ತಾವೇ ಸಮಾಧಾನ ಮಾಡಿಕೊಳ್ಳುತ್ತಾರೆ. ಮರುದಿನದ ಕಥೆಯೂ ಇದೇ ಆಗಿರುತ್ತದೆ. ಆದರೆ ಆರೋಗ್ಯ ಏರುಪೇರಾದಾಗ, ಸಕ್ಕರೆ ಖಾಯಿಲೆ ಇದೆ ಎಂದು ತಿಳಿದ ನಂತರ, ಈವರೆವಿಗೆ ತಾನು ವ್ಯಾಯಾಮ ಮಾಡದಿದ್ದುದು, ನಡಿಗೆ ಮಾಡದಿದ್ದುದೇ ಇದಕ್ಕೆ ಕಾರಣ ಎಂದು ತನ್ನನ್ನು ತಾನೇ ಶಪಿಸಿಕೊಂಡು ಮರುದಿನ ಮುಂಜಾನೆ ಆಗುವುದನ್ನೇ ಕಾಯುತ್ತಾ, ಸರಿಯಾಗಿ ನಿದ್ರೆಯನ್ನೂ ಮಾಡದೆ, ಬೆಳಿಗ್ಗೆ ವಾಕಿಂಗ್ ಹೊರಡುತ್ತಾರೆ. ಇದು ಅಭ್ಯಾಸವಾದರೆ ಸರಿ, ಆ ಸಮಯಕ್ಕೆ ಸರಿಯಾಗಿ ಪ್ರತಿದಿನ ಎಚ್ಚರವಾಗುತ್ತದೆ, ಕ್ರಮೇಣ ದೇಹದ ಆರೋಗ್ಯವೂ ಸುಧಾರಿಸುತ್ತದೆ. ಅದನ್ನು ಬಿಟ್ಟು ಒಂದೆರಡು ದಿನ ಎದ್ದು ವಾಕಿಂಗ್ ಮಾಡಿ ನಂತರ ಮಾಡದಿದ್ದಲ್ಲಿ, ಹೇಗಿದ್ದರೂ ಮಾತ್ರೆಗಳಿವೆ, ಅದನ್ನೇ ತೆಗೆದುಕೊಂಡರಾಯಿತು ಎಂದು ಭಾವಿಸಿದಲ್ಲಿ, ನಮ್ಮ ಆರೋಗ್ಯದಲ್ಲಿ ಸುಧಾರಣೆ ಕಾಣಲು ಸಾಧ್ಯವಾಗುವುದಿಲ್ಲ. ಬದಲಾಗಿ ಅತಿಯಾಗಿ ಮಾತ್ರೆಗಳನ್ನು ಸೇವಿಸುವುದರಿಂದ ಬೇರೆಬೇರೆ ಸಮಸ್ಯೆಗಳು ನಮ್ಮನ್ನು ಕಾಡಲಾರಂಭಿಸುತ್ತವೆ. ಆದ್ದರಿಂದ ಒಳ್ಳೆಯದು ಎಂದು ಕಂಡು ಬಂದ ಅಭ್ಯಾಸಗಳನ್ನು ಬಿಡಬಾರದು.

ನಮಗೆ ಸಂಪಾದನೆಯ ಜೊತೆಗೆ ಮಿತವಾಗಿ ಖರ್ಚು ಮಾಡುವುದು, ಸ್ವಲ್ಪವಾದರೂ ಸಂಪಾದಿಸಿದ್ದನ್ನು ನಮಗಾಗಿಯೇ ಖರ್ಚು ಮಾಡಿಕೊಳ್ಳುವುದು ಅಭ್ಯಾಸವಾಗಬೇಕು. ಅದು ದುರಭ್ಯಾಸವಲ್ಲ, ಬದಲಿಗೆ ಒಂದು ರೀತಿಯ ಹಕ್ಕು ಎಂದೂ ಭಾವಿಸಬಹುದು. ಆದರೆ ಖರ್ಚು ಮಾಡಲೇಬೇಕು ಎಂದು ದುರಭ್ಯಾಸ ಬೆಳೆಸಿಕೊಂಡರೆ ಆವರೆವಿಗೆ ಗಳಿಸಿದ ಹಣ ಹಾಗೂ ಆರೋಗ್ಯ ಎರಡೂ ಹಾಳಾಗುತ್ತವೆ. ಈ ಬಗ್ಗೆ ಅರಿವಿರಬೇಕು.

ಒಳ್ಳೆಯ ಅಭ್ಯಾಸಗಳ ಪಾಲನೆ ಕಷ್ಟ, ಆದರೆ ಅದು ನೀಡುವ ಫಲ ಮಾತ್ರ ಒಳ್ಳೆಯದೇ ಆಗಿರುತ್ತದೆ. ನಮಗೆ ಒಳ್ಳೆಯದು ಬೇಕು ಎಂದಾದರೆ ನಿರಂತರವಾಗಿ ಒಳ್ಳೆಯ ಅಭ್ಯಾಸಗಳನ್ನು ಮುಂದುವರೆಸಿಕೊಂಡು ಹೋಗಬೇಕು. ಕೆಟ್ಟದ್ದು ಎಂದು ತಿಳಿದ ನಂತರವೂ ಅದರ ಹಿಂದೆ ಹೋಗುವುದನ್ನು ಸ್ವಯಂಕೃತ ಅಪರಾಧ ಎಂದೇ ಪರಿಗಣಿಸಬೇಕಾಗುತ್ತದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ನಾವು ಇದ್ದ ಹಾಗೆಯೇ ನಮ್ಮ ಸುತ್ತಲಿನ ಪರಿಸರವೂ ಇರುತ್ತದೆ. ನಾವು ಸದ್ಗುಣಿಯಾದರೆ ನಮ್ಮ ಸುತ್ತ ಸದ್ಗುಣಿಗಳೇ ಇರುತ್ತಾರೆ. ಇದು ನಮ್ಮನ್ನಾಳುವ ವ್ಯವಸ್ಥೆಗೂ ಅನ್ವಯವಾಗುತ್ತದೆ.

ತ್ವರಿತ ನ್ಯಾಯದಾನ ವೇಳೆ ವಿಳಂಬವಾದ ವಿಚಾರಣೆ!

ಸಮಯಬದ್ಧ ನ್ಯಾಯದಾನ ವ್ಯವಸ್ಥೆಯಲ್ಲಿ ನ್ಯಾಯಾಂಗವು ಮಹತ್ವದ ಪಾತ್ರ ವಹಿಸಿ, ತನ್ಮೂಲಕ ಜನಸಾಮಾನ್ಯನ ಮನಸ್ಸಿನಲ್ಲಿ ಜಾಗೃತಿ ಮೂಡಿಸಿ, ನ್ಯಾಯಾಲಯಗಳಿಂದ ಅವರು ಬಾಧಿತರಾಗದಂತೆ ನೋಡಿಕೊಳ್ಳುತ್ತದೆ. ವಸ್ತುಸ್ಥಿತಿ ಹೀಗಿರುವಾಗ, ಬಹಳ ಕಾಲದಿಂದ ಭರ್ತಿಯಾಗದೇ ಖಾಲಿ ಬಿದ್ದಿರುವ ಸರ್ಕಾರಿ ಅಭಿಯೋಜಕರ, ಸಹಾಯಕ ಹಿರಿಯ ಅಭಿಯೋಜಕರು, ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ತುಂಬುವುದರತ್ತ ರಾಜ್ಯ ಸರ್ಕಾರ ತುರ್ತು ಗಮನ ಹರಿಸಬೇಕಾಗಿದೆ.



ಪದನಾಮ	ಮಂಜೂರಾತಿ	ಕಾರ್ಯನಿರತ	ಖಾಲಿ
ಸರ್ಕಾರಿ ಅಭಿಯೋಜಕರು	187	117	70
ಹಿರಿಯ ಸಹಾಯಕ ಸರ್ಕಾರಿ–ಅಭಿಯೋಜಕರು	123	105	18
ಸಹಾಯಕ ಸರ್ಕಾರಿ–ಅಭಿಯೋಜಕರು	411	207	204
ಒಟ್ಟು	721	429	292

ಭಾರತದ ಕಾನೂನು ಆಯೋಗವು ಅಪರಾಧ ಪ್ರಕ್ರಿಯೆ ಸಂಹಿತೆ 1975ರ ಬಗ್ಗೆ ತನ್ನ 154ನೇ ವರದಿಯಲ್ಲಿ (ಅಧ್ಯಾಯ 3, ಕಂಡಿಕೆ 15) ಬಾಬು Vs ಕೇರಳ ರಾಜ್ಯ 1984ರ ಅಡಿ ಐಎ 499 (ಕೇರಳ ಹೈಕೋರ್ಟ್) ಪ್ರಕರಣದಲ್ಲಿ ಈ ರೀತಿ ಉದ್ಧರಿಸಿತು. "ಸರ್ಕಾರಿ ಅಭಿಯೋಜಕರು ನಿಜವಾಗಿ ನ್ಯಾಯ ಸಚಿವರು. ಅವರ ಕೆಲಸ ಬೇರೇನೂ ಅಲ್ಲದೆ ನ್ಯಾಯದಾನದಲ್ಲಿ ರಾಜ್ಯಕ್ಕೆ ಸಹಕರಿಸುವುದೇ ಆಗಿದೆ. ಅವರು ಯಾವುದೇ ಪಕ್ಷಗಳ ಪ್ರತಿನಿಧಿಗಳಲ್ಲ. ಪ್ರಕರಣಗಳಿಗೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು, ನ್ಯಾಯಾಲಯಗಳ ಮುಂದೆ ಮಂಡಿಸಿ, ನ್ಯಾಯಾಲಯಗಳಿಗೆ ಸಹಕರಿಸುವುದೇ ಆಗಿದೆ. ನಿರಪರಾಧಿಗಳು ನೇಣುಗಂಬ ಏರುವುದನ್ನು ನೋಡುವುದಕ್ಕಾಗಿ ಅವರಿರುವುದಿಲ್ಲ. ಅದೇ ರೀತಿ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದನ್ನು ನೋಡಲು ಸಹ ಅವರಿರುವುದಿಲ್ಲ".

ಆದ್ದರಿಂದ, ಅಭಿಯೋಜಕರು ರಾಜ್ಯಕ್ಕೆ, ಜನತೆಗೆ, ನ್ಯಾಯಾಲಯಗಳಿಗೆ ಹಾಗೂ ಆರೋಪಿಗಳಿಗೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಆದ್ದರಿಂದ ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಪಕ್ಷಪಾತರಾಗಿ, ಧ್ಯೇಯನಿಷ್ಠರಾಗಿ ಇರಬೇಕಾಗುತ್ತದೆ.

ಸಹಾಯಕ ಸರ್ಕಾರಿ ಅಭಿಯೋಜಕನು ಕ್ರಿಮಿನಲ್ ಮೊಕದ್ದಮೆಗಳ ವಿಲೇವಾರಿಯಲ್ಲಿ ಮಹತ್ವದ ಜವಾಬ್ದಾರಿ ನಿರ್ವಹಿಸುತ್ತಾನೆ. ಅವುಗಳೆಂದರೆ, ಕಾನೂನಾತ್ಮಕ ವಿಚಾರಗಳಲ್ಲಿ ಸಹಾಯ ಒದಗಿಸುವುದು, ಸಾಕ್ಷಿಗಳ ಸಂಗ್ರಹ, ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸುವುದು ಇತ್ಯಾದಿ. ಸರ್ಕಾರಿ ಅಭಿಯೋಜಕರ ಪರವಾಗಿ ನ್ಯಾಯಾಲಯದ ದಾಖಲೆಗಳನ್ನು ಸಹ ಅವರು ಸಿದ್ಧಪಡಿಸುತ್ತಾರೆ. ಆದ್ದರಿಂದ ಸಾಕಷ್ಟು ಸಂಖ್ಯೆಯ ಸಹಾಯಕ ಅಭಿಯೋಜಕರ ಹುದ್ದೆಗಳನ್ನು ಮಂಜೂರು ಮಾಡಬೇಕಾಗಿದೆ. ಕೇವಲ ಹುದ್ದೆಗಳನ್ನು ಮಂಜೂರು ಮಾಡಿದರಷ್ಟೇ ಸಾಲದು, ಅವುಗಳನ್ನು ತುಂಬಿದಾಗಲೇ ನಿಜವಾದ ಸಾರ್ಥಕತೆ ಸಾಧ್ಯವಾಗುತ್ತದೆ.

ಆದ್ದರಿಂದ ಸುಮಾರು ಶೇಕಡಾ 40ರಷ್ಟು ಅಭಿಯೋಜಕರ ಹುದ್ದೆ ಖಾಲಿ ಇವೆ. ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರಿ ಸಹಾಯಕ, ಹಿರಿಯ ಸಹಾಯಕ ಹಾಗೂ ಅಭಿಯೋಜಕರ ನೇಮಕಾತಿಯಲ್ಲಿನ ರಾಜ್ಯ ಸರ್ಕಾರದ ವೈಫಲ್ಯ ನ್ಯಾಯದಾನ ವಿತರಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

2019ರ ಅಂಕಿ–ಅಂಶಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 8,10,730 ಕ್ರಿಮಿನಲ್ ಪ್ರಕರಣಗಳು ವಿವಿಧ ವಿಚಾರಣಾ ನ್ಯಾಯಾಲಯಗಳಲ್ಲಿ ವಿಲೇವಾರಿಯಾಗದೇ ಬಾಕಿ ಉಳಿದಿವೆ. ಈ ಅಂಕಿ–ಅಂಶಗಳು ಇವತ್ತಿನ ದಿನಗಳಲ್ಲಿ ಅಭಿಯೋಜಕರ ಖಾಲಿ ಹುದ್ದೆ ಹಾಗೂ ವಿಲೆ ಕಾಣದ ಪ್ರಕರಣಗಳ ಸಂಖ್ಯೆ ಇನ್ನೂ ಹೆಚ್ಚಾಗಿರಬಹುದು.

ಈ ವಿಚಾರ, ಕರ್ನಾಟಕ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿಯ ರೂಪದಲ್ಲಿ ರಿಟ್ ಅರ್ಜಿಯೊಂದನ್ನು ವಿಚಾರಣೆಗೆ ತೆಗೆದುಕೊಂಡು, ರಾಜ್ಯಾದ್ಯಂತ ಖಾಲಿ ಇರುವ ಸರ್ಕಾರಿ ಸಹಾಯಕ, ಹಿರಿಯ ಸಹಾಯಕ ಹಾಗೂ ಅಭಿಯೋಜಕರ ಹುದ್ದೆಗಳನ್ನು ತುಂಬುವಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಿಕ ಪರಮಾದೇಶ (Writ of Mandamus) ನೀಡಿದಾಗ ಬೆಳಕಿಗೆ ಬಂತು. ಈ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಗೆ ಉತ್ತರವಾಗಿ, ಗೃಹ ಮಂತ್ರಾಲಯವು, ತಾನು ಸರ್ಕಾರಿ ಹಿರಿಯ ಸಹಾಯಕ, ಸಹಾಯಕ ಹಾಗೂ ಅಭಿಯೋಜಕರ ಖಾಲಿ ಹುದ್ದೆಗಳ ಭರ್ತಿಗಾಗಿ ಪ್ರಕಟಣೆ ನಂಬರ್ DPN NESA 09 2019–2020 ಹೊರಡಿಸಿರುವುದಾಗಿ ಹೇಳಿ ಕೈತೊಳೆದುಕೊಂಡಿತು. ಈ ನೇಮಕಾತಿಯು 2019ರಲ್ಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಯಬೇಕಾಗಿತ್ತು. ಪಿಎಸ್ಐ ನೇಮಕಾತಿಯ ಹಗರಣದಿಂದಾಗಿ, ನೇಮಕಾತಿಯ ಜವಾಬ್ದಾರಿಯನ್ನು NLSIUಗೆ ವಹಿಸಿತು. ಅಲ್ಲದೆ, ಸರ್ಕಾರಿ ಸಹಾಯಕ, ಸಹಾಯಕ ಹಾಗೂ ಅಭಿಯೋಜಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳು ಮುಗಿಯುವ ತನಕ, ಗುತ್ತಿಗೆ ಆಧಾರದ ಮೇಲೆ ಸಹಾಯಕ ಸರ್ಕಾರಿ ಅಭಿಯೋಜಕರನ್ನಾಗಿ ನೇಮಕ ಮಾಡುವುದಾಗಿ ಹೇಳಿತು.

ರಾಜ್ಯ ಉಚ್ಚ ನ್ಯಾಯಾಲಯವು, ತನ್ನ ಅಭಿಪ್ರಾಯ ವ್ಯಕ್ತಪಡಿಸಿ, "ಸಂವಿಧಾನದ 21ನೇ ವಿಧಿಯ ಪ್ರಕಾರ, ಪ್ರತಿಯೊಬ್ಬ ಆರೋಪಿಯು, ಶೀಘ್ರ ವಿಚಾರಣೆಯ ಹಕ್ಕನ್ನು ಹೊಂದಿದ್ದಾನೆ. ವಿಚಾರಣೆಗಳು ಅಭಿಯೋಜಕರ ಅಲಭ್ಯತೆಯಿಂದ ವಿಳಂಬವಾದಲ್ಲಿ, ಭಾರತದ ಸಂವಿಧಾನದ 21ನೇ ವಿಧಿಯ ಪ್ರಕಾರ, ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಆಗುತ್ತದೆ ಎಂದು ಹೇಳಿದೆ". ಆದ್ದರಿಂದ, ಆರು ವಾರಗಳ ಒಳಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು. ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನ್ಯಾಯಾಂಗದ ಪಾವಿತ್ರ್ಯತೆಗೆ ಸಂಬಂಧಪಟ್ಟಂತೆ ಈ ವಿಷಯಗಳು ಗಮನಾರ್ಹವಾದವು. ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗಳ ಆಕಾಂಕ್ಷಿಗಳು ಹಾಗೂ NLSIU ಮಾದರಿ ಪ್ರಶ್ನೆಪತ್ರಿಕೆ ಬಿಡುಗಡೆ ಮಾಡಿತು. ಇದರ ವಿರುದ್ಧ ಸಂಬಂಧಿಸಿದ ಹುದ್ದೆಯ ಆಕಾಂಕ್ಷಿಗಳು ತೀವ್ರ ತರಹದ ವಿರೋಧ ವ್ಯಕ್ತಪಡಿಸಿದರು. ಇದಕ್ಕೆ ಕರ್ನಾಟಕ ಬಾರ್ ಕೌನ್ಸಿಲ್ ಮತ್ತು ವಕೀಲರ ಸಂಘ ಸಹ ತಮ್ಮ ಬೆಂಬಲ ವ್ಯಕ್ತಪಡಿಸಿದವು.

ಪ್ರತಿಭಟನೆ ನಡೆಸುತ್ತಿರುವ ನಾನಾ ಹುದ್ದೆಗಳ ಆಕಾಂಕ್ಷಿಗಳು ಹಾಗೂ ವಕೀಲರ ಸಂಘ, ಸಂವಿಧಾನದ ಮೂಲ ಆಶಯಗಳಿಗೆ ಅನುಗುಣವಾಗಿ, ಎಲ್ಲವೂ ಮತ್ತು ಪ್ರತಿಯೊಂದು ಕೂಡ ನಡೆಯಬೇಕೆಂಬುದನ್ನು ಮರೆತಿದ್ದಾರೆ. ವಕೀಲನಾಗಿ ಅಥವಾ ಅಭಿಯೋಜಕನಾಗಿ ಕಾರ್ಯ ನಿರ್ವಹಿಸುವಾಗ, ಸಂವಿಧಾನವು ಬಹು ಮುಖ್ಯವಾದ ಪಾತ್ರ ನಿರ್ವಹಿಸುತ್ತದೆ. ಹೀಗಾಗಿ ಪ್ರತಿಭಟನಾನಿರತರು ನೇಮಕಾತಿಯ ಪ್ರಕ್ರಿಯೆಯಲ್ಲಿ ಮತ್ತಷ್ಟು ವಿಳಂಬಕ್ಕೆ ಕಾರಣರಾಗಬಾರದು. ಅರ್ಹ ಅಭ್ಯರ್ಥಿಗಳು ವಯೋಮಿತಿಯ ಕಾರಣದಿಂದ, ಮುಂದಿನ ಅವಕಾಶಗಳನ್ನು ಕಳೆದುಕೊಳ್ಳಬಹುದು ಎಂಬುದರ ಬಗ್ಗೆಯೂ ಪ್ರತಿಭಟನಾಕಾರರು ವಿಚಾರ ಮಾಡಬೇಕಿತ್ತು.

ಒಂದು ಮಾರ್ಗದರ್ಶಿ ಸೂತ್ರದ ಪ್ರಕಾರ, ಜಿಲ್ಲಾ ನ್ಯಾಯಾಧೀಶರನ್ನು ಅಭಿಯೋಜನೆಯ ನಿರ್ದೇಶಕರನ್ನಾಗಿ ನೇಮಕ ಮಾಡಬೇಕು. ಆ ರೀತಿ ಮಾಡಿದರೆ, ಅಭಿಯೋಜಕರ ನೇಮಕಾತಿಯಲ್ಲಿ ಆಗುತ್ತಿರುವ ಎಲ್ಲಾ ರೀತಿಯ ವಿಳಂಬವನ್ನು ತಡೆಯಬಹುದು. ಮುನ್ಸಿಫ್, ಜಿಲ್ಲಾ ನ್ಯಾಯಾಧೀಶರ ನೇಮಕಾತಿಯ ಹಾಗೆಯೇ ಅಭಿಯೋಜಕರ ನೇಮಕಾತಿಯೂ ಸಹ ಹೈಕೋರ್ಟಿನ ಮೂಲಕ ನಡೆಯುತ್ತದೆ. ಈ ಕಾರ್ಯ ವಿಧಾನವನ್ನು ಅನುಸರಿಸಿದರೆ, ಗಾಬರಿಗೊಳಿಸುವಷ್ಟು ಬಾಕಿ ಪ್ರಕರಣಗಳು ಉಳಿಯುವುದಿಲ್ಲ. ಅಪರಾಧಗಳು ಕಡಿಮೆ ಆಗುತ್ತವೆ. ಆದ್ದರಿಂದ, ಪಾರದರ್ಶಕವಾದ, ಜವಾಬ್ದಾರಿಯುತ, ನೀಡಿಕೆ ಆಧಾರಿತ ಹಾಗೂ ಬದಲಾವಣೆಗೆ ಹೊಂದಿಕೊಳ್ಳುವ ಹೊಸಜಗತ್ತು ಕಾಣಸಿಗಬಹುದು.

ಒಟ್ಟಾರೆಯಾಗಿ, ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಮಾಡಬೇಕು ಮತ್ತು ಸರ್ಕಾರಿ ಹಿರಿಯ ಸಹಾಯಕ, ಸಹಾಯಕ ಹಾಗೂ ಅಭಿಯೋಜಕರು ಹಾಗೂ ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬಬೇಕು., ಸಹಾಯಕ ಸರ್ಕಾರಿ ಅಭಿಯೋಜಕರ ಖಾಲಿ ಹುದ್ದೆಗಳಿಂದಾಗಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸರ್ಕಾರಿ ಅಭಿಯೋಜಕರ ಮೇಲೆ ಕೆಲಸದ ಒತ್ತಡ (ಹೊರೆ) ಹೆಚ್ಚಾಗಿದ್ದು ಅವರ ಕಾರ್ಯ ದಕ್ಷತೆಯ ಮೇಲೆ ವ್ಯತಿರಕ್ತ ಪರಿಣಾಮ ಬೀರಿದೆ. ಭರ್ತಿಯಾಗದೆ ಉಳಿದ ಖಾಲಿ ಹುದ್ದೆಗಳು, ಹೆಚ್ಚಿನ ಕಾರ್ಯದೊತ್ತಡವನ್ನು ಸೃಷ್ಟಿಸಿದೆ. ಅಂತಹ ಕೆಲಸದ ಹೊರೆ ಸಂಸ್ಥೆಯ ಕಾರ್ಯವಿಧಾನದ ಮೇಲೆ ಅಪಮೌಲ್ಯದ ಪರಿಣಾಮವನ್ನು ಆಗಾಗ ಬೀರಬಹುದು.



–ರೋಹನ್ ವಿ.ಗಂಗಾಧರ್
2ನೇ ಸೆಮ್ ಬಿಎಎಲ್ ಎಲ್‌ಬಿ (ಆನರ್ಸ್),
ಜೆಎಸ್‌ಎಸ್ ಕಾನೂನು ಕಾಲೇಜು, ಮೈಸೂರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
15-7-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ಈ ವಾರ ಸಸ್ಪೆನ್ಸ್, ಥ್ರಿಲ್ಲರ್ ಚೇಝ್



ಮರ್ಡರ್ ಮಿಸ್ಟ್ರಿ, ಥ್ರಿಲ್ಲರ್ ಕಥಾಹಂದರ ಇರುವ ಚಿತ್ರ 'ಚೇಝ್' ಈ ವಾರ ತೆರೆಗೆ ಬರುತ್ತಿದೆ. ವಿಲೋಕ್ ಶೆಟ್ಟಿ ನಿರ್ದೇಶನವಿರುವ ಈ ಚಿತ್ರದಲ್ಲಿ ಒಂದು ಮರ್ಡರ್ ಮಿಸ್ಟ್ರಿಯಿದ್ದು, ಅದನ್ನು ಚೇಸ್ ಮಾಡುತ್ತಾ ಹೋದಂತೆ ಹೊರಬೀಳುವ ಅನೇಕ ಸತ್ಯಗಳೇ ಈ ಚಿತ್ರದ ಮುಖ್ಯ ಕಥಾವಸ್ತು. ಮಹಿಳೆಯರ ಅಜಾಗರೂಕತೆಯಿಂದ ಸಾಕಷ್ಟು ಅನಾಹುತಗಳು ನಡೆಯುತ್ತಿವೆ. ಈ ಕುರಿತು ಪೊಲೀಸ್ ಇಲಾಖೆ ಸಾಕಷ್ಟು ಎಚ್ಚರಿಕೆ ನೀಡುತ್ತಿದ್ದರೂ ಅತ್ಯಾಚಾರ, ಅನಾಚಾರಗಳು ನಡೆಯುತ್ತಲೇ ಇವೆ. ಅಂಥದೇ ಒಂದು ಕಥೆ ಚೇಝ್ ಚಿತ್ರದಲ್ಲಿದೆ. ಒಂದು ಕೊಲೆಯ ತನಿಖೆಯ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥೆಯಿರುವ, ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟು ಹಾಕಿರುವ ಈ ಚಿತ್ರದಲ್ಲಿ ರಾಧಿಕಾ ನಾರಾಯಣ್, ಅವಿನಾಶ್ ನರಸಿಂಹರಾಜು, ಶೀತಲ್ ಶೆಟ್ಟಿ, ಅರ್ಜುನ್ ಯೋಗಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ಚಿತ್ರದ ಟ್ರೈಲರನ್ನು ಸುದೀಪ್ ವೀಕ್ಷಿಸಿ ಚಿತ್ರತಂಡದ ಬೆನ್ನು ತಟ್ಟಿದ್ದಾರೆ.

ಈ ಕುರಿತಂತೆ ನಿರ್ದೇಶಕ ವಿಲೋಕ್ ಶೆಟ್ಟಿ ಮಾತನಾಡಿ ಟ್ರೇಲರ್ ನೋಡಿ ಸುದೀಪ್ ಹೊಗಳಿದ್ದಾರೆ. ನಮ್ಮ ಚಿತ್ರ



ತಾಂತ್ರಿಕವಾಗಿ ತುಂಬಾ ರಿಚ್ ಆಗಿ ಮೂಡಿಬಂದಿದೆ. ಸಸ್ಪೆನ್ಸ್ ಥ್ರಿಲ್ಲರ್, ಕ್ರೈಮ್ ಎಲ್ಲಾ ಜಾನರ್ ಇರುವ ಕಮರ್ಷಿಯಲ್ ಚಿತ್ರ. ಟೀಮ್ ವರ್ಕ್ ನಿಂದಲೇ ಅದ್ಭುತವಾಗಿ ಮೂಡಿಬಂದಿದೆ ಎಂದರು.

ನಿರ್ಮಾಪಕರಾದ ಪ್ರಶಾಂತ ಶೆಟ್ಟಿ, ಕಾರ್ಯಕಾರಿ ನಿರ್ಮಾಪಕರಾದ. ಶಿವ ಶೆಟ್ಟಿ ರಿಲೀಸ್ ಬಗ್ಗೆ ಮಾತನಾಡಿದರು. ನಿರ್ದೇಶಕ ವಿಲೋಕ್ ಶೆಟ್ಟಿ, ಒಂದು ಕಂಟೆಂಪೊರರಿ ಸಬ್ಜೆಕ್ಟನ್ನು ಈ ಚಿತ್ರದ ಮೂಲಕ ಹೇಳಲು ಹೊರಟಿದ್ದಾರೆ. ಚಿತ್ರದಲ್ಲಿ ಕ್ಷಣಕ್ಷಣಕ್ಕೂ ಕುತೂಹಲ ಕೆರಳಿಸುವಂಥ ಸೀನ್‌ಗಳಿವೆ. ಈ ಚಿತ್ರಕ್ಕೆ ಅನಂತರಾಜ ಅರಸ್ ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ ವಿಲೋಕ್‌ಶೆಟ್ಟಿ ಅವರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ. ಚಿತ್ರದ ಇತರ ಪಾತ್ರಗಳಲ್ಲಿ ಸುಧಾ ಬೆಳವಾಡಿ, ವೀಣಾಸುಂದರ್, ಉಷಾ ಭಂಡಾರಿ, ಪ್ರಮೋದ್‌ಶೆಟ್ಟಿ, ಅರವಿಂದ ಬೋಳಾರ್, ಸುಶಾಂತ್ ಪೂಜಾರಿ, ಅರವಿಂದರಾವ್ ನಟಿಸಿದ್ದಾರೆ.

ಸಸ್ಪೆನ್ಸ್ ಥ್ರಿಲ್ಲರ್ ಡೇವಿಡ್ ಟ್ರೈಲರ್



ಕನ್ನಡ ಚಿತ್ರವೊಂದನ್ನು ಹಾಲಿವುಡ್ ಸ್ಟೈಲ್ ನಲ್ಲಿ ನಿರೂಪಿಸುವ ಪ್ರಯತ್ನವನ್ನು ಶ್ರೇಯಸ್ ಚಿಂಗಾ ಮಾಡಿದ್ದಾರೆ. ತಾವೇ ನಾಯಕನಾಗಿ ನಟಿಸಿರುವ 'ಡೇವಿಡ್' ಚಿತ್ರವನ್ನು ಯಾವುದೇ ಹಾಲಿವುಡ್ ಚಿತ್ರಕ್ಕೂ ಕಡಿಮೆ ಇಲ್ಲದಂತೆ ತೆರೆಮೇಲೆ ತಂದಿದ್ದಾರೆ. ಈ ಚಿತ್ರದ ಹಾಡು ಹಾಗೂ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಸಸ್ಪೆನ್ಸ್, ಥ್ರಿಲ್ಲರ್, ಮರ್ಡರ್ ಮಿಸ್ಟ್ರಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಾಯಕನಿಗೆ 2 ಶೇಡ್ ಇರುವ ಪಾತ್ರವಿದೆ. ಅಲೋಕ್ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಒಂದು ಹಾಡಿಗೆ ರೋಹನ್ ಸಾಹಿತ್ಯ ಬರೆದಿದ್ದು, ಸಂಚಿತ್ ಹೆಗಡೆ ಹಾಡಿದ್ದಾರೆ 'ಡೇವಿಡ್' ಒಂದು ವಿಭಿನ್ನ ಪ್ರಯತ್ನ. ನಾನು ಹಾಗೂ ಭಾರ್ಗವ್ ಯೋಗಾಂಬರ್ ಜಂಟಿಯಾಗಿ ನಿರ್ದೇಶಿಸಿದ್ದೇವೆ ನಾನು ನಾಯಕನಾಗೂ ನಟಿಸಿದ್ದೇನೆ ಸಾರಾ ಹರೀಶ್ ಈ ಚಿತ್ರದ ನಾಯಕಿ. ಅವಿನಾಶ್, ಪ್ರತಾಪ್ ನಾರಾಯಣ್, ರಾಕೇಶ್ ಅಡಿಗ, ಕವ್ಯ ಶಾ, ಬುಲೆಟ್ ಪ್ರಕಾಶ್ ಈ ಚಿತ್ರದಲ್ಲಿ ನಟಿಸಿದ್ದಾರೆ. ನಾಯಕ ತನ್ನ ಸಾಮರ್ಥ್ಯಕ್ಕೆ ಮೀರಿದ ಶಕ್ತಿಗಳ ವಿರುದ್ಧ ಹೇಗೆ ಹೋರಾಡುತ್ತಾನೆ ಎನ್ನುವುದೇ ಚಿತ್ರದ ಕಥಾಹಂದರ. ಬಹುತೇಕ ಬೆಂಗಳೂರಿನಲ್ಲೇ ಚಿತ್ರೀಕರಣ ನಡೆಸಲಾಗಿದ್ದು, ಆಗಸ್ಟ್ ನಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದು ನಾಯಕ ಕಮ್ ನಿರ್ದೇಶಕ ಶ್ರೇಯಸ್ ಹೇಳಿದರು. ವಿಶೇಷವಾಗಿ ಕೇನ್ಸ್ ಚಲನಚಿತ್ರೋತ್ಸವದಲ್ಲಿ ಡೇವಿಡ್ ಪ್ರದರ್ಶನಗೊಂಡಿದ್ದು, ಅಲ್ಲಿ ಪ್ರದರ್ಶನಗೊಂಡ ಮೊದಲ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಸಾಕಷ್ಟು ಸ್ನೇಹಿತರು ಸೇರಿ ಈ ಚಿತ್ರ ನಿರ್ಮಾಣ ಮಾಡಿದ್ದೇವೆ. ಸ್ಟೀವ್ ರೈಸ್ ಹಾಗೂ ದೇವೇಂದ್ರ ನಾಯ್ಡು ಚಿತ್ರದ ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ.

ನಾನಾ ತರಹದ ಭಾವನೆಗಳ ಸಮ್ಮಿಲನ ಓ ಮೈ ಲವ್




ವಿಭಿನ್ನ ಪ್ರೇಮಕಥೆಯೊಂದನ್ನು ನಿರ್ದೇಶಕ ಸ್ಮೈಲ್‌ಶ್ರೀನು ಓ ಮೈ ಲವ್ ಚಿತ್ರದ ಮೂಲಕ ಹೇಳಲು ಹೊರಟಿದ್ದಾರೆ. ಇಂದು ತೆರೆಕಂಡಿರುವ ಹದಿಹರೆಯದಲ್ಲಿ ಯುವ ಹೃದಯಗಳ ಮನದಲ್ಲಿ ಉಂಟಾಗುವ ತಳಮಳ, ಪ್ರೀತಿ, ಪ್ರೇಮವನ್ನು ಫ್ಯಾಮಿಲಿ ಎಲಿಮೆಂಟ್ ಹಾಗೂ ಹಾಸ್ಯದ ಜೊತೆಗೆ ಸ್ಮೈಲ್‌ಶ್ರೀನು ಹೇಳಲು ಪ್ರಯತ್ನಿಸಿದ್ದಾರೆ. ಅಕ್ಷಿತ್ ಶಶಿಕುಮಾರ್. ಕೀರ್ತಿ ಕಲಕೇರಿ ಚಿತ್ರದ ನಾಯಕ, ನಾಯಕಿಯಾಗಿ ಅಭಿನಯಿಸಿದ್ದಾರೆ.

ನಿರ್ದೇಶಕ ಸ್ಮೈಲ್ ಶ್ರೀನು ಮಾತನಾಡುತ್ತ, ರಾಜ್ಯಾದ್ಯಂತ ನಾವು ಪ್ರಚಾರ ನಡೆಸಿದಾಗ ಪ್ರೇಕ್ಷಕರಿಂದ ಚಿತ್ರಕ್ಕೆ ಪಾಸಿಟಿವ್ ಪ್ರತಿಕ್ರಿಯೆ ಸಿಕ್ಕಿದೆ. ಕುಟುಂಬ ಸಮೇತ ನೋಡಬಹುದಾದ ಕಮರ್ಷಿಯಲ್, ಮ್ಯೂಸಿಕಲ್ ಲವ್‌ಸ್ಟೋರಿ ಇದಾಗಿದ್ದು, ಎಲ್ಲಾ ಥರದ ಎಮೋಷನ್‌ಗಳನ್ನು ಹೇಳಿದ್ದೇವೆ ಎಂದರು.

ನಾಯಕ ಅಕ್ಷಿತ್ ಮಾತನಾಡುತ್ತ ವೈಯಕ್ತಿಕವಾಗಿ ನನಗೆ ತುಂಬಾ ಇಷ್ಟವಾದ ಸಿನಿಮಾವಿದು. ಎಲ್ಲಾ ಕಡೆ ಜನ ನನ್ನನ್ನು ಶಶಿಕುಮಾರ್ ಮಗನೆಂದು ಗುರುತು ಹಿಡಿದು ಮಾತಾಡಿಸುತ್ತಿದ್ದರು. ಎಸ್.ನಾರಾಯಣ್ ಅವರಿಂದ ಚಿತ್ರೀಕರಣ ಸಂದರ್ಭದಲ್ಲಿ ಬಹಳಷ್ಟು ಕಲಿತುಕೊಂಡೆ ಎಂದು ಹೇಳಿದರು. ನಂತರ ಮಾತನಾಡಿದ ಎಸ್.ನಾರಾಯಣ್ ಇಂತಹ ನಿರ್ಮಾಪಕರು ಚಿತ್ರರಂಗಕ್ಕೆ ಹೆಚ್ಚು ಹೆಚ್ಚು ಬರಬೇಕು, ಅಕ್ಷಿತ್ ತಾನು ಶಶಿಕುಮಾರ್ ಮಗನೆಂದು ಅಹಂ ತೋರಿಸದೆ ಶ್ರದ್ದೆ ಭಕ್ತಿಯಿಂದ ಕೆಲಸ ಮಾಡಿದ್ದಾರೆ. ಮಕ್ಕಳು ದಾರಿ ತಪ್ಪದೆ ಇರಲಿ ಎಂದು ಹೇಳುವ ಸಿನಿಮಾವಿದು ಎಂದರು.


ನಿರ್ಮಾಪಕ ಜಿ.ರಾಮಾಂಜಿನಿ ಮಾತನಾಡುತ್ತ, ಚಿಕ್ಕಂದಿನಿಂದ ನನಗೆ ಚಿತ್ರ ನಿರ್ಮಿಸುವ ಆಸೆಯಿತ್ತು. ಅದು ಈ ಚಿತ್ರದಿಂದ ಈಡೇರಿದೆ. ನಾನು ಮಾಡಿದ ಎಲ್ಲಾ ವ್ಯವಹಾರದಲ್ಲೂ ಸಕ್ಸಸ್ ಕಂಡಿದ್ದೇನೆ ನಾನು ಮಾಡಿದ ಎಲ್ಲಾ ವ್ಯವಹಾರದಲ್ಲೂ ಸಕ್ಸಸ್ ಕಂಡಿದ್ದೇನೆ. ಕೊನೆಯದಾಗಿ ಸಿನಿಮಾರಂಗಕ್ಕೆ ಬಂದಿದ್ದೇನೆ ಎಂದರು.



ಥೈಲ್ಯಾಂಡ್‌ನಲ್ಲಿ ಆಶಿಕಾ ರಂಗನಾಥ

ಸಿನಿಪದಬಂಧ-016

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ರಾಜೇಶ್-ಆರತಿ ಅಭಿನಯದ 1981ರ ಚಿತ್ರ (8)
5. ಡಾ. ರಾಜಕುಮಾರ್ ಲವ್ ಮಿ ಆರ್ ಹೇಟ್ ಮಿ ಎಂದು ಹಾಡಿದ ಚಿತ್ರ (5)
6. ಹಿಂದಿ ಚಿತ್ರ ಮೇರಿ ಅದಾಲತ್ ಕನ್ನಡ ರಿಮೇಕ್‌ನಲ್ಲಿ ರಮೇಶ್-ಅಂಬರೀಶ್ (5)
8. 1993ರ ರಾಮಕುಮಾರ್-ಶ್ವೇತಾ ಅಭಿನಯದ ಚಿತ್ರ (4)
11. ರಕ್ತ---, ಶಂಕರನಾಗ್-ಜಯಮಾಲಾ ಚಿತ್ರ (3)
13. ದೇವರಾಜ್ ಶ್ರುತಿ ನಟಿಸಿದ 1992ರ ಚಿತ್ರ (4)
14. 1956ರ ರಾಜಕುಮಾರ್-ಪಂಡರೀಬಾಯಿ ಭಕ್ತಿಪ್ರಧಾನ ಚಿತ್ರ (5)
16. ರಾಜಕುಮಾರ್-ಕಲ್ಯಾಣಕುಮಾರ್ ನಟಿಸಿರುವ 1956ರ ಚಿತ್ರ (5)
18. ಜೀವನ ಕುದುರೆಗಾಡಿ ಎಂಬರ್ಥದ ಸಿನಿಮಾದಲ್ಲಿ ಕಾಶಿನಾಥ್ ನಟಿಸಿದ್ದಾರೆ. (8)

ಮೇಲಿನಿಂದ ಕೆಳಕ್ಕೆ

1. 1985ರ ಅಂಬರೀಶ್-ಅಂಬಿಕಾ ಚಿತ್ರ (4)
2. ಕುಮಾರ್ ಗೋವಿಂದ್-ಶಿಲ್ಪಾ ಅಭಿನಯದ 1997ರ ಚಿತ್ರ (2)
3. ರಮೇಶ್-ವಿಜಯಲಕ್ಷ್ಮಿ-ಶಿಲ್ಪಾ ಅಭಿನಯದ 1999ರ ಚಿತ್ರ (5)
4. ರಾಜ್ ಜಯಂತಿ ಅಭಿನಯದ ಪತ್ತೇದಾರಿ ಚಿತ್ರ (5)
7. ಅಭಿನಯ ಶಾರದೆ --- (3)
9. ಅಂಬರೀಶ್-ಶ್ರೀನಾಥ್-ಅಶ್ವಥ್ ನಟಿಸಿದ 1978ರ ಚಿತ್ರ ತಲೆಕೆಳಗಾಗಿದೆ (5)
10. ಶಂಕರನಾಗ್, ಅನಂತನಾಗ್, ಲೋಕನಾಥ್ ಅಭಿನಯದ 1981ರ ಚಿತ್ರ (5)
12. --- ಐ ಲವ್ ಯು ಕರುನಾಡ ಮೇಲಾಣೆ (3)
15. ದ್ವಿಪಾತ್ರದಲ್ಲಿ ಡಾ. ರಾಜ್, ನಾಯಕಿಯಾಗಿ ಭಾರತಿ ನಟಿಸಿದ 1970ರ ಚಿತ್ರ (4)
17. ಗಡಿಬಿಡಿ ಗಂಡ ಚಿತ್ರದ ನಾಯಕಿಯರಲ್ಲಿ ಒಬ್ಬಳು. (2)

ಸಿನಿ ಪದಬಂಧ 015ರ ಸರಿ ಉತ್ತರ

ಬೆ	ಳ	ದಿಂ	ಗ	ಳ	ಬಾ	ಲೆ				ಹ
ಳ್ಳಿ			ಜ		ಳ		ನೀ	ಲ	ಕಂ	ಠ
ನಾ			ಪ		ಪಂ					ವಾ
ಗ		ಶೃ	ತಿ		ಜ		ಸ	ಪ್ತ	ಪ	ದಿ
	ಚಂ		ಗ		ರ		ರ		ದೀ	
ರು	ದ್ರ		ರ್ವ	ಪ		ದಾ	ಸ		ಗು	ರು
	ಹಾ		ಭಂ		ಬ		ಮ್ಮ		ತೂ	
ಹೊ	ಸ	ರಾ	ಗ		ಯ		ನ	ಟ		ಬೇ
ಸ					ಲು		ಸ			ವು
ಕಾ	ದಿ	ರು	ವೆ		ದೀ		ಮಾ			ಬೆ
ವ್ಯ				ಅ	ಪ	ರಾ	ಧಿ	ನಾ	ನ	ಲ್ಲ

ವಿಜೇತರು: ಕರ್ನಲ್ ಶಿವಕುಮಾರ್
ನಂ.153, ಬಿ ಬ್ಲಾಕ್, ಎಸ್‌ಬಿಎಂ ಲೇಔಟ್
ಬೋಗಾದಿ, ಮೈಸೂರು ಜಿಲ್ಲೆ

ಸೆಪ್ಟೆಂಬರ್ 2ಕ್ಕೆ ತಾಜ್ ಮಹಲ್-2



ಮೇಕಪ್ ಕಲಾವಿದನಾಗಿ ಚಿತ್ರರಂಗ ಪ್ರವೇಶಿಸಿದ ದೇವರಾಜ್ ಕುಮಾರ್ ನಂತರದ ದಿನಗಳಲ್ಲಿ 'ಡೇಂಜರ್ ಜೋನ್' ಮೂಲಕ ನಿರ್ದೇಶಕರಾದರು. ಈಗವರು ನಿರ್ದೇಶನದ ಜೊತೆಗೆ ನಾಯಕನಾಗಿಯೂ ನಟಿಸಿರುವ ಚಿತ್ರ "ತಾಜ್ ಮಹಲ್-2" ಸೆಪ್ಟೆಂಬರ್ 2 ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಭಾ.ಮಾ.ಹರೀಶ್ ಅವರು "ತಾಜ್ ಮಹಲ್ 2" ಚಿತ್ರದ ಬಿಡುಗಡೆ ದಿನಾಂಕವನ್ನು ಘೋಷಿಸುವ ಮೂಲಕ ಚಿತ್ರತಂಡಕ್ಕೆ ಶುಭ ಕೋರಿದರು.

ನಾಯಕ ದೇವರಾಜ್ ಮಾತನಾಡುತ್ತ, 2020 ರಲ್ಲಿ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿತ್ತು ನಂತರ ಕೊರೊನಾದಿಂದ ಚಿತ್ರದ ಬಿಡುಗಡೆ ವಿಳಂಬವಾಯಿತು. ಇತ್ತೀಚೆಗೆ ಈ ಚಿತ್ರದ ಹಾಡೊಂದನ್ನು ಉತ್ತರ ಕರ್ನಾಟಕದಲ್ಲಿ ಸಚಿವ ಶಂಕರ್ ಪಾಟೀಲ್ ಅವರು ಬಿಡುಗಡೆ ಮಾಡಿದರು. ಆ ಹಾಡನ್ನು ಐದು ಲಕ್ಷಕ್ಕೂ ಅಧಿಕ ಜನ ವೀಕ್ಷಣೆ ಮಾಡಿದ್ದಾರೆ. ಟ್ರೇಲರ್ ಸಹ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಹೇಳಿದರು. ಗಂಗಾಂಬಿಕಾ ಎಂಟರ್ ಪ್ರೈಸಸ್ ಮೂಲಕ ನಿತ್ಯಾಶ್ರೀ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಭಾ.ಮಾ. ಹರೀಶ್ ಮಾತನಾಡುತ್ತ, ಹಾಡು ಟ್ರೈಲರ್ ನೋಡಿದೆ ಚೆನ್ನಾಗಿ ಬಂದಿದೆ. ಮಹಿಳೆಯೊಬ್ಬರು ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಚಿತ್ರ ನಿರ್ಮಾಣ ಮಾಡುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗಿರುವುದು ಹೆಮ್ಮೆಯ ವಿಚಾರ ಎಂದು ಹೇಳಿದರು.

ನಿರ್ಮಾಪಕ ಸಂಘದ ಪ್ರವೀಣ್, ಉಮೇಶ್ ಬಣಕಾರ್, ಶಿಲ್ಪ ಶ್ರೀನಿವಾಸ್, ಲಿಖಿತ್ ಫಿಲಂಸ್‌ನ ರಮೇಶ್ ಬಾಬು, ಪ್ರದರ್ಶಕ ಕುಮಾರ್, ಖಳನಟ ಕಾಕ್ರೋಜ್ ಸುಧಿ, ವಿಕ್ಟರಿ ವಾಸು, ರಾಜದೇವ್ ಹಾಗೂ ಹಾಡು ಬರೆದಿರುವ ಮನ್ವರ್ಷಿ ನವಲಗುಂದ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಿರುತೆರೆಯಲ್ಲಿ ಗೋಲ್ಡನ್ ಸ್ಟಾರ್ ಗಣೇಶ್

ಗೋಲ್ಡನ್ ಸ್ಟಾರ್ ಗಣೇಶ್ ಬಹಳ ದಿನಗಳ ನಂತರ ಕಿರುತೆರೆಯತ್ತ ಮರಳಿದ್ದಾರೆ. ಈಗಾಗಲೇ ಹಲವಾರು ರಿಯಾಲಿಟಿ ಶೋಗಳನ್ನು ನಡೆಸಿಕೊಟ್ಟಿರುವ ಗಣೇಶ್, ಈಗ ಹತ್ತು ಸೆಲೆಬ್ರಿಟಿ ಜೋಡಿಗಳನ್ನಿಟ್ಟುಕೊಂಡು ಇಸ್ಮಾರ್ಟ್ ಜೋಡಿ ಎಂಬ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಇದೇ ಶನಿವಾರದಿಂದ ಸುವರ್ಣ ವಾಹಿನಿಯಲ್ಲಿ ಪ್ರಾರಂಭವಾಗಲಿರುವ ಈ ಶೋ ಚಿತ್ರೀಕರಣ ನಡೆಯುತ್ತಿರುವ ರಾಕ್‌ಲೈನ್ ಸ್ಟುಡಿಯೋದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಗಣೇಶ್, ಮೊದಲ ಬಾರಿಗೆ ಸೆಲೆಬ್ರಿಟಿ ಜೋಡಿಗಳ ಜೊತೆ ಶೋ ನಡೆಸಿಕೊಡುತ್ತಿದ್ದೇನೆ. ಬೇರೇನೋ ಹೊಸದು ಮಾಡಬೇಕು, ಫ್ಯಾಮಿಲಿ ಆಡಿಯನ್ಸ್ ತಲುಪಬೇಕು ಎಂದು ಯೋಚಿಸುತ್ತಿದ್ದಾಗ ಸುವರ್ಣದವರು ಈ ಕಾರ್ಯಕ್ರಮದ ಕುರಿತು ಹೇಳಿದರು. ಇಲ್ಲಿ ಹೊಸದಾಗಿ ಮದುವೆಯಾದವರಿಂದ ಹಿಡಿದು 40 ವರ್ಷ ದಾಂಪತ್ಯ ಜೀವನ ನಡೆಸಿದ ಹಿರಿಯರೂ ಇದ್ದಾರೆ. ಈಗಿನ ದಿನಗಳಲ್ಲಿ ದಂಪತಿಗಳು ಸಣ್ಣಸಣ್ಣ ವಿಷಯಕ್ಕೂ ಜಗಳವಾಡಿಕೊಂಡು ದೂರಾಗುತ್ತಿದ್ದಾರೆ.



ಜೀವನ ಎಂದರೆ ಅದಲ್ಲ, ಇಲ್ಲಿ ಏಳುಬೀಳು, ಸುಖ-ಸಂತೋಷ ಎಲ್ಲವೂ ಇರುತ್ತದೆ ಎಂಬುದನ್ನು ಹೇಳುವ ಪ್ರಯತ್ನ ಈ ಕಾರ್ಯಕ್ರಮ. ಇದರಲ್ಲಿ ಒಟ್ಟು 26 ಕಂತುಗಳಿದ್ದು, ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9ಕ್ಕೆ ಪ್ರಸಾರವಾಗಲಿದೆ. ಇಲ್ಲಿ ಒಬ್ಬೊಬ್ಬರ ಜರ್ನಿ ಒಂದೊಂದು ರೀತಿ. ಹಿರಿಯರ ಜೊತೆಗೆ ಮಾತನಾಡುವಾಗ ಅವರ ಜೀವನದ ಬಗ್ಗೆ ಕೇಳಿ ಬಹಳ ಖುಷಿಯಾಯಿತು. ಎಲ್ಲರೂ ಪ್ರೀತಿಯಿಂದ ಬದುಕಿ ಎಂಬ ಸಂದೇಶ ಹೇಳುವ ಕಾರ್ಯಕ್ರಮವಿದು. ಇಲ್ಲಿ ತೀರ್ಪುಗಾರರು ರುವುದಿಲ್ಲ. ಮೊದಲ ಐದು ಕಂತುಗಳಲ್ಲಿ ಯಾವುದೇ ಎಲಿಮಿನೇಷನ್ ಇರುವುದಿಲ್ಲ. ಇಲ್ಲಿ ಚಿತ್ರರಂಗ ಮತ್ತು ಕಿರುತೆರೆ ಜೋಡಿಗಳೂ ಭಾಗವಹಿಸುತ್ತಿದ್ದಾರೆ ಎಂದರು. ನಿರ್ದೇಶಕ ಪ್ರಶಾಂತ್, ವರ್ಷ, ಉಷಾ ಗೌಡ ಮುಂತಾದವರು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಮೈಸೂರು ಮಿತ್ರ ಶುಕ್ರವಾರ 15 ಜುಲೈ 2022

ಪರಿಹಾರ ಕೇಂದ್ರಕ್ಕೆ ಸಂತ್ರಸ್ತರ ಸ್ಥಳಾಂತರ

ಜಿಲ್ಲೆಯಲ್ಲಿ ಐದು ಪರಿಹಾರ ಕೇಂದ್ರಗಳು ಕಾರ್ಯನಿರ್ವಹಣೆ

ಸಂಬಂಧಿಕರ ಮನೆಯಲ್ಲಿರುವವರಿಗೂ ಪಡಿತರ ಕಿಟ್ ವಿತರಣೆ

ಮಡಿಕೇರಿ, ಜು.14– ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಯಿಂದ ಪ್ರವಾಹ ಸಂಭವಿಸಬಹುದಾದ ಪ್ರದೇಶದ ಜನರನ್ನು ಪರಿಹಾರ ಕೇಂದ್ರಕ್ಕೆ ಸ್ಥಳಾಂತರಿಸಲು ಜಿಲ್ಲಾಡಳಿತ ಮುಂದಾಗಿದೆ. ಆ ನಿಟ್ಟಿನಲ್ಲಿ ಜಿಲ್ಲೆಯಲ್ಲಿ 5 ಪರಿಹಾರ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ಸಂತ್ರಸ್ತರು ಸಂಬಂಧಿಕರ ಮನೆಯಲ್ಲಿ ವಾಸ ಮಾಡುತ್ತಿದ್ದರೆ, ಅಂತಹ ಕುಟುಂಬಗಳಿಗೆ ಪಡಿತರ ಕಿಟ್ ವಿತರಿಸಲಾಗುತ್ತದೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಮುಖ್ಯಮಂತ್ರಿಗಳು ಕೊಡಗು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂತ್ರಸ್ತರಿಗೆ ಪೌಷ್ಟಿಕ ಆಹಾರ ವಿತರಿಸುವಂತೆ ಸೂಚಿಸಿದ್ದಾರೆ. ಮುಖ್ಯಮಂತ್ರಿ ಅವರ ನಿರ್ದೇಶನದಂತೆ ಸಂತ್ರಸ್ತರಿಗೆ ಯಾವುದೇ ರೀತಿಯ ತೊಂದರೆ ಇಲ್ಲದಂತೆ ಅಗತ್ಯ ಮೂಲ ಸೌಲಭ್ಯ ಹಾಗೂ ಊಟೋಪಚಾರ ಕಲ್ಪಿಸಲಾಗುತ್ತದೆ ಎಂದರು.

ಜಿಲ್ಲೆಯಲ್ಲಿ ಮಳೆ ಮುಂದುವರೆದಿದ್ದು, ಗಾಳಿ, ಮಳೆಯಿಂದಾಗಿ ಮರದ ಕೊಂಬೆಗಳು ವಿದ್ಯುತ್ ಮಾರ್ಗದ ಮೇಲೆ ಬೀಳುತ್ತಿವೆ. ಇದರಿಂದ ವಿದ್ಯುತ್ ಕಂಬಗಳು ನೆಲಕ್ಕೆ ಉರುಳುತ್ತಿವೆ. ಇದನ್ನು ಸರಿಪಡಿಸುವ ಕಾರ್ಯ ಸೆಸ್ಕ್ ಹಾಗೂ ಅರಣ್ಯ ಇಲಾಖೆಯಿಂದ ಆಯಾಯ ಸಂದರ್ಭದಲ್ಲಿ ನಡೆಯುತ್ತಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಧಾರಾಕಾರ ಮಳೆ ಮುಂದುವರೆದಿರುವುದರಿಂದ ರಸ್ತೆ ಸೇತುವೆ, ವಿದ್ಯುತ್, ಶಾಲೆಗಳು, ಅಂಗನವಾಡಿ ಕಟ್ಟಡಗಳಿಗೆ ಹಾನಿ ಉಂಟಾಗಿದೆ. ಮಳೆ ಕಡಿಮೆಯಾದ ನಂತರ ಪ್ರಾಕೃತಿಕ ವಿಕೋಪದಡಿ ಹಣ ಒದಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ವ್ಯಾಪಕ ಮಳೆ ಸಂದರ್ಭದಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ನೀಡುವ ಸಂಬಂಧ ಆಯಾಯ ಶಾಲೆಯ ಮುಖ್ಯಸ್ಥರು ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರು, ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಡಿಪಿಒಗಳು ಕ್ರಮವಹಿಸಬಹುದಾಗಿದೆ.

ರಜೆ ನೀಡಿದ್ದಲ್ಲಿ ಸರ್ಕಾರಿ ರಜೆ ಅವಧಿಯಲ್ಲಿ ಸರಿದೂಗಿಸುವಂತಾಗಬೇಕು ಎಂದು ಅವರು ಸಲಹೆ ನೀಡಿದರು.

ಸೋಮವಾರಪೇಟೆಯಲ್ಲಿ ಭಾರೀ ಮಳೆ

ಮರಬಿದ್ದು ಮನೆಗಳಿಗೆ ಹಾನಿ, ಕೆಲವರಿಗೆ ಗಾಯ



ಸೋಮವಾರಪೇಟೆ, ಜು.14– ಪಟ್ಟಣ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಭಾರಿ ಗಾಳಿಯೊಂದಿಗೆ ಮಳೆ ಮುಂದುವರೆದಿದೆ.

ತಾಲೂಕಿನ ಗರ್ವಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿರಂಗಳ್ಳಿ ಗ್ರಾಮದ ಧರ್ಮರಾಯ ಎಂಬುವರ ವಾಸದ ಮನೆಯ ಮೇಲೆ ಬೈನೆ ಮರವೊಂದು ಬಿದ್ದು, ಎರಡು ಕೊಠಡಿಗಳಿಗೆ ಹಾನಿಯಾಗಿದೆ. ಕೋಣೆಯಲ್ಲಿ ಮಲಗಿದ್ದ ಧರ್ಮರಾಯ ಅವರ ತಲೆಗೆ ಪೆಟ್ಟಾಗಿದ್ದು, ಸ್ಥಳೀಯ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದರು. ತಹಸೀಲ್ದಾರ್ ಗೋವಿಂದರಾಜು ಮತ್ತು ಕಂದಾಯ ಇಲಾಖಾಧಿಕಾರಿಗಳು ಮನೆಗೆ ತೆರಳಿ ಮಾಹಿತಿ ಪಡೆದಿದ್ದಾರೆ.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಲ್ಲಭಾಯಿ ರಸ್ತೆಯಲ್ಲಿ ವಾಸವಾಗಿರುವ ಮಹದೇವಮ್ಮ ಎಂಬುವರಿಗೆ ಸೇರಿದ ಮನೆ ಮಳೆಯಿಂದ ಶಿಥಿಲಗೊಂಡು ಸಂಪೂರ್ಣ ಬಿದ್ದು ಹೋಗಿದ್ದು, ಮನೆಯವರು ಅಪಾಯದಿಂದ ಪಾರಾಗಿದ್ದಾರೆ. ಹರದೂರು ಗ್ರಾಪಂ ವ್ಯಾಪ್ತಿಯ ಗರಗಂದೂರು ಬಿ ಗ್ರಾಮದ ಬಟಕನಹಳ್ಳಿಯ ಗೋಪಿ ಸಣ್ಣಪ್ಪ ಅವರ ಮನೆ ಮೇಲೆ ಮರ ಬಿದ್ದು ಹಾನಿಯಾಗಿದ್ದು, ರಸ್ತೆ ಸಂಚಾರಕ್ಕೆ ತೊಡಕಾಗಿತ್ತು. ಗ್ರಾಪಂ ಸದಸ್ಯ ಸಲೀಂ ಹೊಸತೋಟ, ಕಂದಾಯ ಇಲಾಖೆಯ ದೀಪಿಕಾ, ಸಹಾಯಕ ರೋಷನ್ ಆಗಮಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ತಾಲೂಕಿನ ಗರಗಂದೂರು ಬಿ ಗ್ರಾಮದ ರಕ್ಷಿತ್ ಎಂಬುವರ ದನದ ಕೊಟ್ಟಿಗೆ ಮಳೆ ಗಾಳಿಯಿಂದ ಕುಸಿದಿದೆ ಶಾಂತಳ್ಳಿ ಹೋಬಳಿ ತೋಳೂರುಶೆಟ್ಟಳ್ಳಿ ಗ್ರಾಮದ ರುಕ್ಮಿಣಿ ಎಂಬುವರ ಮನೆಯ ಮೇಲ್ಛಾವಣಿ ಮತ್ತು ಗೋಡೆ ಕುಸಿದಿದೆ. ಕೊಡ್ಲಿಪೇಟೆ ಹೋಬಳಿ ಚಿಕ್ಕಭಂಡಾರ ಗ್ರಾಮದ ಗೌರಮ್ಮ ಎಂಬುವರ ವಾಸದ ಮನೆ, ಕೋಣಿಗನಹಳ್ಳಿ ಗ್ರಾಮದ ದೇವೇಗೌಡ ಅವರ ವಾಸದ ಮನೆ ಕುಸಿದಿದೆ. ಬೇಳೂರು ಪಂಚಾಯಿತಿ ವ್ಯಾಪ್ತಿಯ ಬಳಗುಂದ ಗ್ರಾಮದ ಪಿ.ಎ.ಅಬ್ಬಾಸ್ ಎಂಬುವರ ಮನೆಯ ಮೇಲ್ಛಾವಣಿ ಗಾಳಿಗೆ ಹಾರಿದ್ದು ಸಾವಿರಾರು ರೂಪಾಯಿ ನಷ್ಟ ಅನುಭವಿಸಿದ್ದಾರೆ.

ಮಣಗಲಿ ಗ್ರಾಮದ ಜಾನಕಮ್ಮ, ಹಂಡ್ಲಿ ಗ್ರಾಮದ ಅಪ್ಪಸ್ವಾಮಿ ಎಂಬುವವರ ಮನೆ ಗೋಡೆ ಕುಸಿದಿದೆ. ಸ್ಥಳಕ್ಕೆ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ. ಇನ್ನು ಕೆಲವೆಡೆ ಮನೆಗಳಿಗೆ ಹಾನಿಯಾಗಿ ಹಲವರು ಗಾಯಗೊಂಡಿರುವ ಬಗ್ಗೆ ಮಾಹಿತಿಗಳು ಬಂದಿವೆ.

ವಿರಾಜಪೇಟೆಯಲ್ಲಿ ಫಲಾನುಭವಿಗಳಿಗೆ ಸಾಗುವಳಿ ಚೀಟಿ, ಹಕ್ಕುಪತ್ರ ವಿತರಣೆ

ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಿ: ಶಾಸಕ ಕೆ.ಜಿ.ಬೋಪಯ್ಯ



ವಿರಾಜಪೇಟೆ,ಜು.14– ಇನ್ನು ಒಂದು ವರ್ಷದವರೆಗೆ ಮನೆ ಮತ್ತು ನಿವೇಶನ ಹಕ್ಕು ಪತ್ರಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ ಎಂದು ಸರಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರೂ ಆದ ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ.

ವಿರಾಜಪೇಟೆ ಮಹಿಳಾ ಸಮಾಜದ ಸಭಾಂಗಣದಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ (ಅಕ್ರಮ–ಸಕ್ರಮ) ಸಮಿತಿಯಿಂದ ನಡೆದ ಸಮಾರಂಭದಲ್ಲಿ ಅಮ್ಮತ್ತಿ ಹೋಬಳಿ ಮತ್ತು ವಿರಾಜಪೇಟೆ ಹೋಬಳಿಯ ಫಲಾನುಭವಿಗಳಿಗೆ ಸಾಗುವಳಿ ಚೀಟಿ, ಹಕ್ಕು ಪತ್ರ ಮತ್ತು ಪಿಂಚಣಿ ಪತ್ರ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿರಾಜಪೇಟೆ ಈಗ ಪುರಸಭೆಯಾಗಿದ್ದು, ಪಟ್ಟಣದಿಂದ ಮೂರು ಕಿಮೀ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಸಾಧ್ಯವಿಲ್ಲ, ಆನ್‌ಲೈನ್ ಮೂಲಕ ಸರಕಾರಿ ಜಾಗಕ್ಕೆ ಮತ್ತೆ ಅರ್ಜಿ ಸಲ್ಲಿಸಬಹುದು.

ಈ ಹಿಂದೆ ಕಾರಣಾಂತರದಿಂದ ಈ ಸೌಲಭ್ಯ ಇರಲಿಲ್ಲ ನಮ್ಮ ಸರಕಾರ ಈ ಅವಕಾಶವನ್ನು ಮಾಡಿ ಕೊಟ್ಟಿದೆ. ಇದರ ಸದುಪಯೋಗ ಪಡಿಸಿಕೊಳ್ಳಿ ಎಂದರು. ನಿವೇಶನ ರಹಿತರು ಜಾಗವನ್ನು ಪಡೆದುಕೊಂಡು ಶೀಘ್ರದಲ್ಲಿ ಸ್ವಂತ ಸೂರು ಮಾಡಿಕೊಳ್ಳುವಂತೆ ತಿಳಿಸಿದರು.

ಮುಖ್ಯವಾಗಿ ಹುತಾತ್ಮ ವೀರ ಯೋಧ ವಿರಾಜಪೇಟೆಯ ಮುಂಡ್ಯೊಳಂಡ ಅಲ್ತಾಫ್ ಅವರಿಗೆ ಮನೆ ಇಲ್ಲದನ್ನು ಮನಗಂಡು ತಾಲೂಕಿನ ಚೆನ್ನಯ್ಯನ ಕೋಟೆಯಲ್ಲಿ ಸರಕಾರದ ವತಿಯಿಂದ ನಿವೇಶನ ಪತ್ರವನ್ನು ಅವರ ಪತ್ನಿಗೆ ನೀಡಲಾಗುತ್ತಿದ್ದು ಸೈನಿಕರಿಗೆ ನಾವು ಸಲ್ಲಿಸುವ ಗೌರವವಾಗಿದೆ ಎಂದರು. ಮಳೆ ಹಾನಿ ಹಾಗೂ ಪ್ರಕೃತಿ ವಿಕೋಪವನ್ನು ಎದುರಿಸಲು ಮುಂಜಾಗ್ರತೆ ಕ್ರಮ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದು, ಘಟನೆಗಳು ನಡೆದಲ್ಲಿ ತಾಲೂಕು ಕಛೇರಿಗೆ ಸಂಪರ್ಕಿಸುವಂತೆ ಹೇಳಿದರು.

ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಸರಕಾರ ಬಡಕುಟುಂಬಗಳ ಅಭಿವೃದ್ಧಿ ಹೊಂದುವಂತಾಗಬೇಕೆಂದು ನಿವೇಶನ ರಹಿತರಿಗೆ ಹಕ್ಕು ಪತ್ರ ವಿತರಣೆ ಮತ್ತು ಸರಕಾರದ ಸೌಲಭ್ಯಗಳ ವಿತರಣೆ ಕಾರ್ಯಕ್ರಮ ರೂಪಿಸಲಾಗಿದೆ. ಇದರ ಸದುಪಯೋಗವನ್ನು ಜನರು ಪಡೆದುಕೊಳ್ಳುವಂತಾಗಬೇಕು ಎಂದರು. ಹಲವು ವರ್ಷಗಳಿಂದ ಅಕ್ರಮ–ಸಕ್ರಮ ಸಮಿತಿಯಿಂದ ಕಡತಗಳು ವಿಲೇವಾರಿ ಆಗಿ ಜನರಿಗೆ ಸೌಲಭ್ಯ ದೊರೆಯುತ್ತಿರುವುದಾಗಿ ತಿಳಿಸಿದ ಅವರು ಕೇಂದ್ರ ಸರಕಾರದ ಆಯುಷ್ಮಾನ್ ಯೋಜನೆ ಸೇರಿದಂತೆ ಅನೇಕ ಜನಪರ ಯೋಜನೆಗಳಿಂದ ಸಾಕಷ್ಟು ಸೌಲಭ್ಯಗಳು ದೊರಕುತ್ತಿರುವುದರಿಂದ ನಿವಾಸಿಗಳು ಇದರ ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದರು.

ವಿರಾಜಪೇಟೆ ತಾಲೂಕು ಅಕ್ರಮ–ಸಕ್ರಮ ಸಮಿತಿ ಅಧ್ಯಕ್ಷ ಕಾಡ್ಯಮಾಡ ಗಿರೀಶ್ ಗಣಪತಿ ಪ್ರಾಸ್ತಾವಿಕವಾಗಿ ಮಾತನಾಡಿ, ಹಲವು ವರ್ಷಗಳಿಂದ ಕೆಲವು ರೈತರು ಅನುಭವಿಸುತ್ತಿರುವ ಸರ್ಕಾರಿ ಜಾಗವನ್ನು ಪರಿಶೀಲಿಸಿ ಅವರ ಹೆಸರಿಗೆ ಮಾಡಿಕೊಡುವುದಾಗಿ ಬಾಕಿ ಉಳಿದಿದ್ದ ಅನೇಕ ಕಡತಗಳನ್ನು ವಿಲೇವಾರಿ ಮಾಡಲಾಗಿದೆ ರೈತರು ಸದುಪಯೋಗ ಪಡಿಸಿಕೊಳ್ಳುವಂತೆ ಹೇಳಿದರು. ವೇದಿಕೆಯಲ್ಲಿ ತಾಲೂಕು ತಹಸೀಲ್ದಾರ್ ಡಾ. ಆರ್.ಯೋಗಾನಂದ, ಬಗರ್ ಹುಕುಂ ಸಮಿತಿಯ ಸದಸ್ಯರಾದ ಯಮುನಾ ಚಂಗಪ್ಪ, ಲಾಲಾ ಭೀಮಯ್ಯ, ಹೆಚ್.ಕೆ. ದಿನೇಶ್ ಉಪಸ್ಥಿತರಿದ್ದರು.

ಸಭೆಯಲ್ಲಿ ಉಪತಹಶೀಲ್ದಾರ್ ಮೋನ್ನಪ್ಪ, ಸರ್ವೇ ಇಲಾಖೆ ಅಧಿಕ್ಷಕ ಚಾಣಂಗಡ ಅರುಣ್, ಕಂದಾಯ ಪರಿವೀಕ್ಷಕ ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಶಾಲೆಗಳಿಗೆ ರಜೆ

ಕೊಡಗು ಜಿಲ್ಲೆಯ ಬಹುತೇಕ ಕಡೆ ಭಾರೀ ಗಾಳಿಯೊಂದಿಗೆ ಮಳೆ ಬೀಳುತ್ತಿರುವ ಹಿನ್ನೆಲೆಯಲ್ಲಿ ಜು.15 ರಂದು ಜಿಲ್ಲೆಯ ಎಲ್ಲಾ ಶಾಲೆಗಳಿಗೆ ರಜೆ ನೀಡಲಾಗಿದ್ದು, ಸದರಿ ದಿನದ ಕರ್ತವ್ಯವನ್ನು ಮುಂದಿನ ದಿನಗಳಲ್ಲಿ ಸರಿದೂಗಿಸಲಾಗುವುದು.

ಮಂಡ್ಯ ಜಿಲ್ಲೆ ಅಭಿವೃದ್ಧಿಪಡಿಸುವಲ್ಲಿ ಜೆಡಿಎಸ್ ವಿಫಲ

ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್‌ನಾರಾಯಣ್ ಕಿಡಿ



ಪಾಂಡವಪುರ, ಜು.14– ಜಿಲ್ಲೆಯ ಜನರಿಂದ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ಜೆಡಿಎಸ್ ನವರು ಜಿಲ್ಲೆಯ ಅಭಿವೃದ್ಧಿಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ್ ಕಿಡಿಕಾರಿದರು.

ತಾಲೂಕಿನ ಮೇಲುಕೋಟೆಯಲ್ಲಿ ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್ ಅವರು ಪರಿವರ್ತನ ಟ್ರಸ್ಟ್ ವತಿಯಿಂದ ಬಿಜಿಎಸ್ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಉಚಿತ ಆಂಬ್ಯುಲೆನ್ಸ್ ಚಾಲನೆ ಹಾಗೂ 100 ಮಂದಿ ವಿಕಲಚೇತನರಿಗೆ ವಾಕಿಂಗ್ ಸ್ಟಿಕ್ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಿಲ್ಲೆಯವರಿಗೆ ನೀರಿಗೆ ಕೊರತೆ ಇಲ್ಲ. ರೈತರು ಮೌಲ್ಯವರ್ಧನೆ ಮಾಡಿ, ಕೇವಲ ಕಬ್ಬು, ಭತ್ತದ ಬೆಳೆಯನ್ನೇ ಬೆಳೆಯುವುದನ್ನು ಬಿಟ್ಟು ಮಾರುಕಟ್ಟೆಯಲ್ಲಿ ಬೆಲೆ ಇರುವಂತಹ ಬೆಳೆಗಳನ್ನು ಬೆಳೆದು ಅಭಿವೃದ್ಧಿ ಕಡೆಗೆ ಮುಂದಾಗಿ. ಕೃಷಿಗೆ ಸಂಬಂಧಿಸಿದಂತಹ ಸಾಕಷ್ಟು ಕಂಪನಿಗಳು ನಮ್ಮ ರಾಜ್ಯದಲ್ಲಿವೆ. ಅವಿಷ್ಕಾರ, ತಂತ್ರಜ್ಞಾನ, ಎಂಜಿನಿಯರಿಂಗ್, ಬಾಹ್ಯಾಕಾಶ ಎಲ್ಲಾ ಕ್ಷೇತ್ರದಲ್ಲೂ ಮುಂದಿದ್ದು ವಿಶ್ವಕ್ಕೆ ಮಾದರಿಯಾಗಿದೆ ಎಂದರು.

ರೈತರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ, ತಮ್ಮ ಮಕ್ಕಳಿಗೆ ಪರಿಪೂರ್ಣವಾದ ವ್ಯಕ್ತಿತ್ವವನ್ನು ನೀಡಿ. ನಮ್ಮ ಸರ್ಕಾರ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಡುವ ಕೆಲಸ ಮಾಡುತ್ತಿವೆ. ಶೀಘ್ರವೇ ಜಿಲ್ಲೆಯಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗುವುದು ಎಂದು ಭರವಸೆ ನೀಡಿದರು.

ಸಿದ್ದರಾಮಯ್ಯ ವಿರುದ್ಧ ಕಿಡಿ: ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ ಐದು ವರ್ಷ ಪೂರೈಸಿ ಮತ್ತೆ ರಾಜಕೀಯಕ್ಕೆ ಬರೋದಿಲ್ಲ ಎಂದಿದ್ದರು. ಈಗ ಮತ್ತೆ 5 ವರ್ಷ ಕೊನೆ ಅಂತಿದ್ದಾರೆ. ಮುಂದೆ ಮತ್ತೊಂದು ಐದು ವರ್ಷ ಬೇಕು ಅಂತಾರೆ. ಇವರೆಲ್ಲ ಹೀಗೆ ಹೇಳಿದರೆ ಹೊಸಬರು, ಬೇರೆಯವರು ಎಲ್ಲಿಗೆ ಹೋಗಬೇಕು. ಸಿದ್ದರಾಮಯ್ಯನ ಏನೂ ಸಾಧನೆ ಮಾಡಿ ದ್ದಾರೆ ಹೇಳರಪ್ಪ ಎಂದು ಪ್ರಶ್ನಿಸಿದ ಅವರು, ಇವರು ಇವರಿಗೋಸ್ಕರ ಬದುಕೋದನ್ನು ಬಿಟ್ಟು ಸಮಾಜಕ್ಕಾಗಿ ಬದುಕೋದನ್ನು ಕಲಿಯಿರಿ ಎಂದು ಕಿಡಿಕಾರಿದರು.

ಇದಕ್ಕೂ ಮೊದಲು ನಾಗಮಂಗಲದಿಂದ ಮೇಲುಕೋಟೆಗೆ ಆಗಮಿಸಿದ ಸಚಿವ ಡಾ. ಅಶ್ವತ್‌ನಾರಾಯಣ್ ಅವರನ್ನು ಜಕ್ಕನಹಳ್ಳಿ ವೃತ್ತದಲ್ಲಿ ಇಂದ್ರೇಶ್ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಬೃಹತ್ ಸೇಬಿನ ಹಾರಹಾಕಿ ಸ್ವಾಗತಿಸಿದರು. ಬಳಿಕ ಮೇಲುಕೋಟೆಯ ಚಲುವನಾರಾಯಣಸ್ವಾಮಿ ದೇವಸ್ಥಾನಕ್ಕೆ ತೆರಳಿದ ಅಶ್ವತ್‌ನಾರಾಯಣ್ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಯತಿರಾಜ್ ಮಠಕ್ಕೆ ತೆರಳಿದರು. ಅಲ್ಲಿಂದ ಸಂಸ್ಕೃತ ಸಂಶೋಧನ ಕೇಂದ್ರಕ್ಕೆ ತೆರಳಿ ಅಲ್ಲಿನ ಪುರಾತನ ತಾಳೆಗರಿಗಳನ್ನು ವೀಕ್ಷಣೆ ಮಾಡಿ ಸಂಶೋಧನ ಕೇಂದ್ರದ ನಿರ್ದೇಶಕ ಎಸ್. ಕುಮಾರ್ ಅವರಿಂದ ಮಾಹಿತಿ ಪಡೆದುಕೊಂಡರು. ಈ ವೇಳೆ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ತಹಸೀಲ್ದಾರ್ ನಯನಾ, ಇಓ ಗಿರೀಶ್ ಇದ್ದರು.

ಸಮಾರಂಭದಲ್ಲಿ ಪುರಸಭೆ ಸದಸ್ಯ ಡೇರಿ ರಾಮು, ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಬಿಜೆಪಿ ಜಿಲ್ಲಾಧ್ಯಕ್ಷ ಉಮೇಶ್, ಮುಖಂಡರಾದ ಡಾ.ಎನ್.ಎಸ್.ಇಂದ್ರೇಶ್, ಅಶೋಕ್, ಎಸ್.ಡಿ.ಜಯರಾಮು, ಸ್ವಾಮಿ, ನಾಗಣ್ಣಗೌಡ ಶ್ರೀಧರ್, ಬಸವರಾಜು, ಎಲ್.ಅಶೋಕ್, ಮಂಗಳ ನವೀನ್‌ಕುಮಾರ್, ಅಶೋಕ್, ರಾಜೀವ, ಈರೇಗೌಡ ಹಾಜರಿದ್ದರು.

ಆಟೋಗೆ ಕಾರು ಡಿಕ್ಕಿ: ಸ್ಥಳದಲ್ಲೇ ಮೂವರು ಸಾವು

ಮಳವಳ್ಳಿ, ಜು.14– ಪ್ಯಾಸೆಂಜರ್ ಆಟೋಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಆಟೋದಲ್ಲಿದ್ದ ಮೂವರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಕಾರಿನಲ್ಲಿದ್ದ ಇಬ್ಬರು ಗಾಯಗೊಂಡಿರುವ ದುರಂತ ತಾಲೂಕಿನ ಮಾರೇಹಳ್ಳಿ ಸಮೀಪ ಕಣಿಗಲ್ ಗೇಟ್ ಬಳಿ ಬುಧವಾರ ಸಂಭವಿಸಿದೆ. ಬೆಂಗಳೂರು ಮೂಲದ ರವಿಕುಮಾರ್ (50), ಮದ್ದೂರಿನ ಹುಲಿಗೆರೆಪುರದ ಭಾಸ್ಕರ್(30) ಹಾಗೂ ಆಟೋ ಚಾಲಕ ಶ್ರೀನಿವಾಸ್ (35) ಮೃತಪಟ್ಟವರು. ರವಿಕುಮಾರ್, ಜಯ ಕರ್ನಾಟಕ ಜನಪರ ವೇದಿಕೆಯ ರಾಜ್ಯ ಘಟಕದ ಕಾರ್ಯದರ್ಶಿಯಾಗಿದ್ದು, ತಮ್ಮ ಹುಟ್ಟೂರು ತಾಲೂಕಿನ ಕನಕಹಳ್ಳಿಗೆ ಭೇಟಿ ನೀಡಿ, ವಾಪಸ್ ಬೆಂಗಳೂರಿಗೆ ಹೋಗಲು ಮಳವಳ್ಳಿಗೆ ಗ್ರಾಮದ ಶ್ರೀನಿವಾಸ್ ಎಂಬುವರ ಆಟೋದಲ್ಲಿ ತೆರಳುತ್ತಿದ್ದರು. ಭಾಸ್ಕರ್ ಎಂಬುವರು ಸಹ ಮಳವಳ್ಳಿಗೆ ಇದೇ ಆಟೋದಲ್ಲಿ ಪ್ರಯಾಣಿಸುತ್ತಿದ್ದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಕಣಿಗಲ್ ಬಳಿ ಎದುರಿನಿಂದ ಬಂದ ಇಂಡಿಕಾ ಕಾರು ಚಾಲಕನ ನಿಯಂತ್ರಣ ತಪ್ಪಿ, ಆಟೋಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಆಟೋ ಚಾಲಕ ಶ್ರೀನಿವಾಸ್, ಭಾಸ್ಕರ್ ಹಾಗೂ ರವಿಕುಮಾರ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಕಾರಿನಲ್ಲಿದ್ದ ಮಧುಲೋಕ್, ಅನುಷ್‌ಕುಮಾರ್ ಇವರು ಇಬ್ಬರು ಗಾಯಗೊಂಡಿದ್ದು, ಇವರನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರ ಬಗ್ಗೆ ವಿವರಗಳು ತಿಳಿದು ಬಂದಿಲ್ಲ. ದುರಂತದಲ್ಲಿ ಆಟೋ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಸ್ಥಳಕ್ಕೆ ಡಿವೈಎಸ್‌ಪಿ ನವೀನ್‌ಕುಮಾರ್, ಸಿಪಿಐ ಎ.ಕೆ. ರಾಜೇಶ್ ಭೇಟಿ ನೀಡಿ, ಪರಿಶೀಲಿಸಿದರು. ಈ ಸಂಬಂಧ ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರೋತ್ಥಾನ ಯೋಜನೆ ಅನುದಾನದಲ್ಲಿ ಶಾಸಕ ಸುರೇಶ್‌ಗೌಡ ಗೋಲ್‌ಮಾಲ್ ಆರೋಪ

ನಾಗಮಂಗಲ ಪುರಸಭೆ ಸದಸ್ಯರಿಂದ ಪ್ರತಿಭಟನೆ



ಮಂಡ್ಯ ಜು.14– ನಗರೋತ್ಥಾನ ಯೋಜನೆಯ ಅನುದಾನದಲ್ಲಿ ನಾಗಮಂಗಲ ಶಾಸಕ ಸುರೇಶ್‌ಗೌಡ ಅವರು ಗೋಲ್‌ಮಾಲ್ ನಡೆಸಿದ್ದಾರೆ ಎಂದು ಆರೋಪಿಸಿ ನಗರದ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಗುರುವಾರ ನಾಗಮಂಗಲ ಪುರಸಭೆಯ 11 ಮಂದಿ ಸದಸ್ಯರು ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಾವೇರಿ ಮುಂಭಾಗ ಜಮಾವಣೆಗೊಂಡ ಸದಸ್ಯರು, ಶಾಸಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಗರೋತ್ಥಾನ ಯೋಜನೆಯಡಿ ನಾಗಮಂಗಲಕ್ಕೆ 10 ಕೋಟಿ ರೂ. ಅನುದಾನ ಬಂದಿದೆ ಆದರೆ ಶಾಸಕರು ಕಾಂಗ್ರೆಸ್ ಸದಸ್ಯರನ್ನು ಗಣನೆಗೆ ತೆಗೆದುಕೊಳ್ಳದೆ ಅನುದಾನವನ್ನು ಹಂಚಿಕೆ ಮಾಡಿದ್ದಾರೆ ಎಂದು ಆರೋಪಿಸಿದರು.

ಪಟ್ಟಣದ ಅಭಿವೃದ್ಧಿಗೆ ಅನುದಾನ ಬಳಕೆ ಮಾಡಬೇಕಿದೆ. ಆದರೆ ಹೊರ ಪ್ರದೇಶಕ್ಕೂ ಅನುದಾನ ನೀಡುವುದರ ಮೂಲಕ ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ದೂರಿದರು.

ಶಾಸಕರು ಅಧಿಕಾರಿಗಳಿಂದ ಮಂತ್ಲಿ ವಸೂಲಾತಿ ಮಾಡುತ್ತಿದ್ದಾರೆ. ಕ್ಷೇತ್ರದಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ. ಆದ್ದರಿಂದ ಕ್ರಿಯಾ ಯೋಜನೆಯನ್ನು ತಡೆಹಿಡಿಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ನಗರಸಭೆ ಸದಸ್ಯರಾದ ಗಿರೀಶ್ ಜವರಪ್ಪ ಆನಂದ, ಎನ್.ಸಿ.ರಾಜೇಶ್, ತಿಮ್ಮಪ್ಪ, ರಮೇಶ್, ಮುಖಂಡರಾದ ರುದ್ರಪ್ಪ, ತಿಬ್ಬನಹಳ್ಳಿ ರಮೇಶ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಚಿನಕುರಳಿ ಗ್ರಾಪಂ ನೂತನ ಅಧ್ಯಕ್ಷ ಕೆ.ಎಸ್.ಪುಟ್ಟಸ್ವಾಮಿ



ಚಿನಕುರಳಿ, ಜು.14– ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ಎಸ್.ಪುಟ್ಟಸ್ವಾಮಿ(ಪಾಪಣ್ಣ) ಅವಿರೋಧವಾಗಿ ಆಯ್ಕೆಯಾದರು.

24 ಮಂದಿ ಸದಸ್ಯರ ಸಂಖ್ಯಾಬಲ ಹೊಂದಿರುವ ಚಿನಕುರಳಿ ಗ್ರಾಪಂ ಹಿಂದಿನ ಅಧ್ಯಕ್ಷ ಮಹಮದ್ ಇಮ್ತಿಯಾಜ್ ಪಾಷ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ಎಸ್.ಪುಟ್ಟಸ್ವಾಮಿ ಅವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ಸದಸ್ಯರು ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿಯೂ ಆದ ತಾಪಂ ಇಓ ಗಿರೀಶ್ ಘೋಷಿಸಿದರು.

ನೂತನ ಅಧ್ಯಕ್ಷ ಕೆ.ಎಸ್.ಪುಟ್ಟಸ್ವಾಮಿ ಅವರು ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಸಿಹಿಹಂಚಿ ಸಂಭ್ರಮಿಸಿದರು. ಬಳಿಕ ಎಲ್ಲಾ ಸದಸ್ಯರು, ಮುಖಂಡರು ನೂತನ ಅಧ್ಯಕ್ಷರಿಗೆ ಅಭಿನಂದಿಸಿದರು.

ಈ ವೇಳೆ ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಅಶೋಕ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಮಹಮದ್ ಇಮ್ತಿಯಾಜ್ ಪಾಷ, ಜಯರಾಮೇಗೌಡ, ಸದಸ್ಯರಾದ ಸಿ.ಎ.ಲೋಕೇಶ್, ಸಿ.ಎಸ್.ಪರಮೇಶ್, ಕೃಷ್ಣೇಗೌಡ, ಇಂದ್ರಾಣಿ, ಮಂಜುಳಾ, ಕಮಲಮ್ಮ, ಧನಲಕ್ಷ್ಮಿ, ಸತೀಶ್, ನಾಗೇಗೌಡ, ದೇವರಾಜು, ಶ್ರೀನಿವಾಸ್, ನರಸಿಂಹಶೆಟ್ಟಿ, ವಸಂತೇಗೌಡ, ಸುಮಾ, ಗಾಯಿತ್ರಿ, ಶಿವಮ್ಮ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣೇಗೌಡ, ಮುಖಂಡರಾದ ವಾಸುದೇವ್, ಸಿ.ಎಸ್.ಮಂಜುನಾಥ್ ಇನ್ನಿತರಿದ್ದರು.

ಕೆಆರ್‌ಎಸ್‌ನಿಂದ ಭಾರೀ ನೀರು ಬಿಡುಗಡೆ

ಕೊಳ್ಳೇಗಾಲ ಸುತ್ತಮುತ್ತ ನದಿ ಪಾತ್ರದ ಜನರಿಗೆ ಮುನ್ನೆಚ್ಚರಿಕೆ

ಚಾಮರಾಜನಗರ, ಜು.14– ಕೃಷ್ಣರಾಜಸಾಗರ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಕೃಷ್ಣರಾಜಸಾಗರ ಜಲಾಶಯಕ್ಕೆ ಹೆಚ್ಚಿನ ನೀರು ಬರುತ್ತಿದ್ದು, ಜಲಾಶಯದಿಂದ ಸುಮಾರು 75,000 ರಿಂದ 1,50,000 ಕ್ಯೂಸೆಕ್ ನೀರನ್ನು ಕಾವೇರಿ ನದಿಗೆ ಬಿಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೊಳ್ಳೇಗಾಲ ತಾಲ್ಲೂಕು ವ್ಯಾಪ್ತಿಯ ಕಾವೇರಿ ನದಿ ಪಾತ್ರದಲ್ಲಿ ಬರುವ ಗ್ರಾಮಗಳ ಜನರು ತಮ್ಮ ಆಸ್ತಿ ಪಾಸ್ತಿ ಹಾಗೂ ಜಾನುವಾರು ರಕ್ಷಣೆಗಾಗಿ ಸುರಕ್ಷಿತ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಮನವಿ ಮಾಡಿದ್ದಾರೆ.

ಜಿಲ್ಲೆಯ ಜಲಪಾತಗಳ ಪ್ರವೇಶಕ್ಕೆ ನಿರ್ಬಂಧ

ಚಾಮರಾಜನಗರ: ನದಿಗಳಲ್ಲಿ ನೀರಿನ ಮಟ್ಟ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಕೊಳ್ಳೇಗಾಲ ತಾಲೂಕಿನ ಭರಚುಕ್ಕಿ ಜಲಪಾತ, ವೆಸ್ಲಿ ಸೇತುವೆ ಹಾಗೂ ಹನೂರು ತಾಲೂಕಿನ ಹೊಗೇನೆಕಲ್ ಜಲಪಾತಗಳಿಗೆ ಸಾರ್ವಜನಿಕರ ಹಾಗೂ ಪ್ರವಾಸಿಗರ ಪ್ರವೇಶವನ್ನು ತಾತ್ಕಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಆದೇಶ ಹೊರಡಿಸಿದ್ದಾರೆ.

ಕೊಳ್ಳೇಗಾಲ ತಾಲೂಕು ವ್ಯಾಪ್ತಿಯ ಕಾವೇರಿ ನದಿಯ ಪಾತ್ರದಲ್ಲಿ ಬರುವ ಮುಳ್ಳೂರು, ಹಳೆ ಹಂಪಾಪುರ, ದಾಸನಪುರ, ಹಳೆ ಅಣಗಳ್ಳಿ, ಹರಳೆ, ಸರಗೂರು, ಧನಗೆರೆ, ಎಡಕುರಿಯ, ಸತ್ತೇಗಾಲ ಮುಂತಾದ ನದಿಯ ಎರಡೂ ದಂಡೆಗಳಲ್ಲಿರುವ ಗ್ರಾಮಗಳು ಮತ್ತು ನದಿಯ ತಗ್ಗು ಪ್ರದೇಶದಲ್ಲಿ ವಾಸಿಸುತ್ತಿರುವ ಜನರು ತಮ್ಮ ಆಸ್ತಿ ಪಾಸ್ತಿ ಹಾಗೂ ಜಾನುವಾರು ರಕ್ಷಣೆಗಾಗಿ ಮುನ್ನೆಚ್ಚರಿಕೆ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ.

ನದಿ ಪಾತ್ರದಲ್ಲಿ ವಾಸಿಸುವ ಜನರು ನದಿಯಲ್ಲಿ ಬಟ್ಟೆ ಒಗೆಯುವುದು, ಸ್ನಾನ ಮಾಡುವುದು, ಹಸು ತೊಳೆಯುವುದು, ಈಜುವುದು ಇನ್ನಿತರ ಚಟುವಟಿಕೆಗಳನ್ನು ಮಾಡಬಾರದು. ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮುಂಜಾಗ್ರತಾ ಕ್ರಮ ವಹಿಸಲು ಗ್ರಾಮಗಳಿಗೆ ಆಗಮಿಸುವ ಅಧಿಕಾರಿ, ಸಿಬ್ಬಂದಿಯವರಿಗೆ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಕ್ಕಳು, ಸಾರ್ವಜನಿಕರು ಅಪಾಯಕಾರಿ ವಿದ್ಯುತ್ ಕಂಬ, ಕಟ್ಟಡ, ಮರಗಳ ಹತ್ತಿರ, ಕೆಳಗೆ ನಿಲ್ಲದೆ ಸುರಕ್ಷಿತ ಸ್ಥಳಗಳನ್ನು ತಲುಪಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಲೆಕ್ಕಿಗರು ಸಾರ್ವಜನಿಕರಿಗೆ ಸುರಕ್ಷಿತ ಕ್ರಮಗಳ ಕುರಿತು ಗ್ರಾಮಗಳಲ್ಲಿ ಟಾಂ ಟಾಂ ಸಾರಿಸಬೇಕು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು ವಿಪತ್ತನ್ನು ನಿಭಾಯಿಸಲು ಸಜ್ಜಾಗಿರಬೇಕು. ಸಾರ್ವಜನಿಕರು ತುರ್ತು ಸೇವೆಗೆ ಶುಲ್ಕ ರಹಿತ ಸಂಖ್ಯೆ 1077, ದೂ.ಸಂ.08226–223160 ಮೊ.ಸಂ 9740942901 ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂಟಗುಡಿ ಕಾಲೋನಿಯಲ್ಲಿ ನಾಳೆ ವಿದ್ಯುತ್ ಅದಾಲತ್

ಚಾಮರಾಜನಗರ, ಜು.14– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಸಂತೇಮರಳ್ಳಿ ಉಪವಿಭಾಗದ ಕಾಗಲವಾಡಿ ವ್ಯಾಪ್ತಿಯ ಕುಂಟಗುಡಿ ಕಾಲೋನಿ ಗ್ರಾಮದಲ್ಲಿ ಜುಲೈ 16ರಂದು ಬೆಳಿಗ್ಗೆ 11 ಗಂಟೆಗೆ ಸಂತೇಮರಹಳ್ಳಿಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಜೆ.ಎಂ. ಶಶಿಧರ್ ಅವರ ಅಧ್ಯಕ್ಷತೆಯಲ್ಲಿ ವಿದ್ಯುತ್ ಅದಾಲತ್ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗ್ರಾಹಕರು ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆಗಳಿದ್ದಲ್ಲಿ ತಿಳಿಸಿ ಪರಿಹಾರ ಕಂಡುಕೊಳ್ಳುವಂತೆ ಸಂತೆಮರಹಳ್ಳಿಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾ.ನಗರ ನಗರಸಭೆಯಲ್ಲಿ ಲಂಚಾವತಾರ

ಅಧಿಕಾರಿಗಳು, ಸಿಬ್ಬಂದಿ ಮೇಲೆ ಜಿಲ್ಲಾಧಿಕಾರಿ ಕ್ರಮ



ಚಾರುಲತಾ

ಚಾಮರಾಜನಗರ, ಜು.14– ಚಾಮರಾಜನಗರದ ನಗರ ಸಭೆಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಮತ್ತು ಲಂಚ ತಾಂಡವವಾಡುತ್ತಿದೆ ಎಂಬ ಸಾರ್ವಜನಿಕರ ದೂರುಗಳಿಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಸ್ಪಂದಿಸಿದ್ದಾರೆ. ನಗರಸಭೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳುವ ಮೂಲಕ ಬಿಸಿ ಮುಟ್ಟಿಸಿದ್ದಾರೆ.

ಜಿಲ್ಲಾ ಕೇಂದ್ರವಾದ ಚಾಮರಾಜನಗರದ ನಗರಸಭೆಯಲ್ಲಿ ಯಾವುದೇ ಕೆಲಸಗಳು ನಿಗದಿತ ಸಮಯಕ್ಕೆ ಸರಿಯಾಗಿ ಆಗುತ್ತಿಲ್ಲ ಎಂಬುದು ಬಹುತೇಕ ಜನರ ಆರೋಪವಾಗಿತ್ತು. ಇ–ಸ್ವತ್ತು ಪಡೆಯಲು, ಖಾತೆ ಬದಲಾವಣೆ, ಮನೆ ನಿರ್ಮಾಣಕ್ಕೆ ಲೈಸನ್ಸ್ ಪಡೆಯಲು, ಅಂಗಡಿ ಪ್ರಾರಂಭಕ್ಕೆ ಹಾಗೂ ಲೈಸೆನ್ಸ್ ರಿಟರ್ನ್ ಮಾಡುವುದು ಸೇರಿದಂತೆ ಎಲ್ಲಾ ಕೆಲಸಗಳು ವಿಳಂಬವಾಗುತ್ತಿತ್ತು. ನಗರಸಭೆಯಲ್ಲಿ ಮಧ್ಯವರ್ತಿ ಇಲ್ಲವೇ ಅಥವಾ ಲಂಚ ನೀಡದೇ ಕೆಲಸಗಳೇ ಆಗುತ್ತಿಲ್ಲ ಎಂಬ ವ್ಯಾಪಕ ದೂರುಗಳೂ ಸಹ ಬಂದಿತ್ತು. ಈ ಬಗ್ಗೆ ನಗರಸಭೆ ಸಾಮಾನ್ಯ ಸಭೆಗಳಲ್ಲೂ ಸಹ ಸಾಕಷ್ಟು ಚರ್ಚೆಗಳು ಆಗಿದ್ದವು.

ನಗರಸಭೆ ಸದಸ್ಯರೇ ಇದು ನಗರಸಭೆ ಅಲ್ಲ, ನರಕ ಸಭೆ ಎಂದು ಜರಿದಿದ್ದರು. ಅಷ್ಟರ ಮಟ್ಟಿಗೆ ನಗರಸಭೆ ಆಡಳಿತ ಹಲವು ವರ್ಷಗಳಿಂದ ಕುಸಿದಿತ್ತು. ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಆಗಮಿಸಿದಾಗ, ಆ ಕೆಲಸ ಆಗದೆ ಇದ್ದುದ್ದರಿಂದ ಅಧಿಕಾರಿಗಳು ಹಾಗೂ ನೌಕರರಿಗೆ ಶಾಪ ಹಾಕುತ್ತಾ ತೆರಳುತ್ತಿದ್ದದ್ದು, ಪ್ರತಿನಿತ್ಯ ಸಾಮಾನ್ಯವಾಗಿತ್ತು. ಅಷ್ಟರಮಟ್ಟಿಗೆ ನಗರಸಭೆಯಲ್ಲಿ ಜನರಿಗೆ ನರಕವಾಗಿತ್ತು. ನಗರಸಭೆ ಅಧಿಕಾರಿಗಳು ಹಾಗೂ ನೌಕರರ ಕಾರ್ಯವೈಖರಿ ಬಗ್ಗೆ ನಿಗದಿಯಂತೆ ವ್ಯಾಪಕ ದೂರುಗಳು ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು, ಇದನ್ನು ಗಂಭೀರವಾಗಿ ಪರಿಗಣಿಸಿ ಅಧಿಕಾರಿಗಳ ತಂಡ ರಚಿಸಿ ತನಿಖೆಗೆ ಆದೇಶಿಸಿದ್ದರು. ಈ ತಂಡದ ವರದಿಯ ಮೇರೆಗೆ ನಗರಸಭೆಯಲ್ಲಿ ಕಂದಾಯ ಅಧಿಕಾರಿಯಾಗಿದ್ದ ಜಯಶೀಲಾ ಅವರನ್ನು ಅಮಾನತು ಗೊಳಿಸಿದ್ದರು. ನಂತರ ಕಛೇರಿ ವ್ಯವಸ್ಥಾಪಕಿ ಮರ್ಸಿರೀಟಾ ಮತ್ತು ನಗರಸಭೆಯಲ್ಲಿ ವಿಷಯ ನಿರ್ವಾಹಕಿಯಾಗಿದ್ದು ಈಗ ಯಳಂದೂರು ಪಪಂಯಲ್ಲಿ ದ್ವಿತೀಯ ದರ್ಜೆ ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿ.ಎಂ. ಗುಣಶ್ರೀ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ನಗರಸಭೆ ಆಯುಕ್ತರಿಗೆ ಸೂಚಿಸಿದ್ದರು.

ಈ ಸೂಚನೆ ಮೇರೆಗೆ ಆಯುಕ್ತರು ಇವರಿಬ್ಬರ ಮೇಲೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಇದೀಗ ಆಯುಕ್ತರು ಕರ್ತವ್ಯದಿಂದ ಬಿಡುಗಡೆಗೊಳಿಸಿ ಆದೇಶಿಸಿದ್ದಾರೆ. ಈ ಮೂಲಕ ನಗರಸಭೆ ಅಧಿಕಾರಿಗಳು ಹಾಗೂ ನೌಕರರಲ್ಲಿ ನಡುಕ ಉಂಟುಮಾಡಿದ್ದಾರೆ. ಜಿಲ್ಲಾಧಿಕಾರಿಗಳ ಕಾರ್ಯದಕ್ಷತೆಗೆ ಜಿಲ್ಲೆಯಾದ್ಯಂತ ವ್ಯಕ್ತವಾಗಿದೆ.

> ಹಳಿ ತಪ್ಪಿರುವ ಚಾಮರಾಜನಗರ ಜಿಲ್ಲಾಡಳಿತವನ್ನು ಸರಿ ದಾರಿಗೆ ತರಲು ಹಲವಾರು ಕಾನೂನಾತ್ಮಕ ಕ್ರಮಗಳನ್ನು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ತೆಗೆದುಕೊಳ್ಳುತ್ತಿದ್ದಾರೆ. ಇದು ಸ್ವಾಗತಾರ್ಹ.
>
> ಸರ್ಕಾರಿ ಅಧಿಕಾರಿಗಳು, ನೌಕರರು ತೋರಿಸುತ್ತಿದ್ದ ನಿರ್ಲಕ್ಷ್ಯತನ ಹಾಗೂ ಬೇಜವಾಬ್ದಾರಿ ವಿರುದ್ಧ ಜಿಲ್ಲಾಧಿಕಾರಿ ನಿರ್ದಾಕ್ಷಣ್ಯ ಕ್ರಮ ಜರುಗಿಸುತ್ತಿದ್ದು, ಸಾರ್ವಜನಿಕರಿಂದ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಚಾ.ನಗರ ಜಿಲ್ಲೆಯಾಗಿ 25 ವರ್ಷಗಳಾದರೂ ನಿರ್ಧಿಷ್ಟ ಪ್ರಮಾಣದಲ್ಲಿ ಅಭಿವೃದ್ಧಿ ಕಂಡಿಲ್ಲ. ಹೀಗಾಗಿ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಚಾರುಲತಾ ಸೋನಲ್ ಅವರನ್ನು ಕನಿಷ್ಠ 2 ವರ್ಷಗಳವರೆಗೆ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಲು ಸರ್ಕಾರ ಅವಕಾಶ ಮಾಡಿಕೊಡಬೇಕು.
>
> –ಸಿ.ಎಂ. ಕೃಷ್ಣಮೂರ್ತಿ, ಜಿ.ಎಂ. ಗೌಡ್ಕರ್, ಕೆ.ಎಂ. ನಾಗರಾಜು, ಆರ್. ರಂಗರಾಜು, ಹೋರಾಟಗಾರರು ಚಾಮರಾಜನಗರ.

> ಚಾಮರಾಜನಗರ ನಗರಸಭೆ ಕಾರ್ಯವೈಖರಿ ಎಂದೂ ಸಹ ಚುರುಕಾಗಿ ನಡೆದಿರುವ ದಿನಗಳೇ ಇಲ್ಲ. ಹಣ ಕೊಟ್ಟರಷ್ಟೇ ಇಲ್ಲಿ (ನಗರಸಭೆ) ಕೆಲಸ ಎಂಬುದು ಪ್ರತೀತಿ. ಸಾರ್ವಜನಿಕರು ಎಷ್ಟೇ ಹೇಳಿದರೂ ಸಹ ಯಾವೊಬ್ಬ ಜನಪ್ರತಿನಿಧಿಯೂ ಸಹ ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ. ಈಗ ಜಿಲ್ಲಾಧಿಕಾರಿಗಳು ನಗರಸಭೆ ಅಧಿಕಾರಿಗಳು ಹಾಗೂ ನೌಕರರಿಗೆ ಚುರುಕು ಮುಟ್ಟಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ. ಇದನ್ನು ಸ್ವಾಗತಿಸುತ್ತೇನೆ.
>
> –ಬ್ರಿಜೇಶ್, ಚಾಮರಾಜನಗರ.

ಜಲಜೀವನ್ ಮಿಷನ್ ಯೋಜನೆಯಡಿ

ಗುಂಡ್ಲುಪೇಟೆ: ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು



ಗುಂಡ್ಲುಪೇಟೆ,ಜು.14–ತಾಲೂಕಿನ ಎಲ್ಲಾ ಗ್ರಾಮಗಳ ಪ್ರತಿಯೊಂದು ಮನೆಗಳಿಗೂ ಶುದ್ಧ ಕುಡಿಯುವ ನೀರು ಪೂರೈಸುವ ಸಲುವಾಗಿ ಜಲಜೀವನ್ ಮಿಷನ್ ಯೋಜನೆ ಕೈಗೊಳ್ಳಲಾಗಿದೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ತಾಲೂಕಿನ ದೊಡ್ಡ ತುಪ್ಪೂರು ಗ್ರಾಮದಲ್ಲಿ ಜಲಜೀವನ್ ಮಿಷನ್ ಯೋಜನೆಯಲ್ಲಿ ಕೈಗೊಂಡ ನಲ್ಲಿಗಳ ನೀರಿನ ಸಂಪರ್ಕಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ಹೆಚ್ಚಾಗಿತ್ತು. ಓವರ್ ಹೆಡ್ ಟ್ಯಾಂಕ್ ಮೂಲಕ ಸರಬರಾಜು ಮಾಡಿದರೂ ಎಲ್ಲಾ ಮನೆಗಳಿಗೂ ನೀರು ತಲುಪದೆ ಸಮಸ್ಯೆ ಎದುರಿಸಬೇಕಾಗಿತ್ತು. ಅಂತರ್ಜಲ ಮಟ್ಟದ ಇಳಿಕೆಯಿಂದ ಕೊಳವೆ ಬಾವಿಗಳಲ್ಲಿಯೂ ಶುದ್ಧ ನೀರು ದೊರಕದಂತಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಜಲಜೀವನ್ ಮಿಷನ್ ಯೋಜನೆಯ ಮೂಲಕ ಎಲ್ಲಾ ಮನೆಗಳಿಗೂ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆ ರೂಪಿಸಿದ್ದು ತಾಲೂಕಿನಲ್ಲಿ ಸದ್ಯ ದೊಡ್ಡತುಪ್ಪೂರು ಗ್ರಾಮದಲ್ಲಿ ಪೂರ್ಣಗೊಂಡಿದ್ದು ಶಿಂಡನಪುರ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗಿದೆ ಎಂದು ಅವರು ತಿಳಿಸಿದರು.


ತಾಲೂಕಿನ ಇನ್ನೂ 48 ಗ್ರಾಮಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು 2023ರ ವೇಳೆಗೆ ಎಲ್ಲಾ ಗ್ರಾಮಗಳ ಮನೆ ಮನೆಗಳಿಗೂ ನೀರು ಪೂರೈಸಲಾಗುವುದು ಎಂದರು.

ಒಂದನೇ ಪುಟದಿಂದ

ಪಾಸ್‌ಪೋರ್ಟ್ ಭಾಗ್ಯ

ಕೇಂದ್ರವನ್ನು, ರಾಜ್ಯದವರೇ ಆದ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಉದ್ಘಾಟಿಸಿದ್ದರು. ಅಂದಿನಿಂದ ಇಂದಿನವರೆಗೂ ಮೈಸೂರು ಸೇರಿದಂತೆ ನೆರೆ ಜಿಲ್ಲೆ ಸಾರ್ವಜನಿಕರು ಈ ಕೇಂದ್ರದ ಮೂಲಕ ಪಾಸ್‌ಪೋರ್ಟ್ ಪಡೆದುಕೊಳ್ಳುತ್ತಿದ್ದಾರೆ. ಈ ಸೇವಾ ಕೇಂದ್ರ ಸ್ಥಾಪನೆಗೆ ಮುನ್ನ ಹೊಸದಾಗಿ ಪಾಸ್‌ಪೋರ್ಟ್ ಪಡೆಯಲು ಹಾಗೂ ನವೀಕರಣಕ್ಕೆ ಬೆಂಗಳೂರು ಹಾಗೂ ಮಂಗಳೂರಿನ ಪಾಸ್‌ಪೋರ್ಟ್ ಕಚೇರಿಗಳಿಗೆ ಅರ್ಜಿ ಸಲ್ಲಿಸಬೇಕಾಗಿತ್ತು. ಹಾಗಾಗಿ ಅಧಿಕ ಹಣದ ಜೊತೆಗೆ ಸಮಯವೂ ಹಿಡಿಯುತ್ತಿತ್ತು. ಕೆಲವೊಮ್ಮೆ ಅಲ್ಲಿಗೆ ಹೋದರೂ ಒಂದು ದಿನದಲ್ಲೇನೂ ಕೆಲಸವಾಗುತ್ತಿರಲಿಲ್ಲ. ಅವರು ಕೇಳಿದ ಅಗತ್ಯ ದಾಖಲೆಗಳು ಇಲ್ಲದೆ ಹೋದರೆ, ಮರಳಿ ಮೈಸೂರಿಗೆ ಬರಬೇಕು, ಮತ್ತೆ ಹೋಗಬೇಕು. ಹೀಗೆ ಪ್ರಯಾಸದ ಸಂಗತಿಯಾಗಿತ್ತು. ಮೈಸೂರಿನಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭವಾದಂದಿನಿಂದ ಮೈಸೂರು, ಚಿಕ್ಕಮಗಳೂರು, ಮಂಡ್ಯ, ಹಾಸನ, ಕೊಡಗು ಸೇರಿದಂತೆ ಮೈಸೂರಿನ ಸುತ್ತಮುತ್ತಲಿನ ಜಿಲ್ಲೆಯ ವಿದ್ಯಾರ್ಥಿಗಳು, ಉದ್ಯಮಿಗಳು, ಅಧಿಕಾರಿಗಳು, ಪ್ರವಾಸಿಗರು ಸೇರಿದಂತೆ ಪ್ರತಿ ವರ್ಷ 25 ಸಾವಿರಕ್ಕೂ ಅಧಿಕ ಅರ್ಜಿಗಳು ಬರುತ್ತಿವೆ. ಜನರಿಗೆ ಈ ಕೇಂದ್ರದಿಂದ ಪಾಸ್‌ಪೋರ್ಟ್ ಪಡೆಯಲು ಹೆಚ್ಚು ಅನುಕೂಲಕಾರಿಯಾಗಿದೆ. ಹಾಗಾಗಿ ಅವರೆಲ್ಲಾ ಭಾರೀ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಕಾಗದ ರಹಿತ ಅರ್ಜಿ ಸಲ್ಲಿಕೆ: ಆನ್‌ಲೈನ್ ಮೂಲಕ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಈ ಸೇವಾ ಕೇಂದ್ರಕ್ಕೆ ಬರಲು ಒಂದು ದಿನಾಂಕ, ಸಮಯವನ್ನು ನಿಗಧಿಪಡಿಸಿ ಅರ್ಜಿದಾರರ ಮೊಬೈಲ್ ಸಂಖ್ಯೆಗೆ ಸಂದೇಶ ಹೋಗುತ್ತದೆ. ಆ ನಿಗಧಿಪಡಿಸಿದ ದಿನಾಂಕ, ಸಮಯದಂದು ಅರ್ಜಿದಾರರು ತಮ್ಮ ಮೂಲ ದಾಖಲಾತಿಗಳನ್ನು ತೆಗೆದುಕೊಂಡು ಸೇವಾ ಕೇಂದ್ರಕ್ಕೆ ಬಂದರೆ, ಮೊದಲು ಅಲ್ಲಿರುವ ಅಧಿಕಾರಿಗಳು ಅರ್ಜಿಯನ್ನು ಪರಿಶೀಲನೆ ನಡೆಸುತ್ತಾರೆ. ನಂತರ ಅರ್ಜಿದಾರರ ಫೋಟೋ ಮತ್ತು ಬೆರಳಚ್ಚು ಪಡೆದುಕೊಂಡು ಅರ್ಜಿದಾರರನ್ನು ಪರಿಶೀಲನಾ ಅಧಿಕಾರಿಗಳ ಬಳಿ ಕಳುಹಿಸಲಾಗುತ್ತದೆ. ಪರಿಶೀಲನಾ ಅಧಿಕಾರಿಯು ಇವರ ಮೂಲ ದಾಖಲೆಗಳು ಮತ್ತು ಅರ್ಜಿಯ ಜೊತೆಗೆ ಲಗತ್ತಿಸಿರುವ ದಾಖಲಾತಿಗಳ ಸಾಮ್ಯತೆಯನ್ನು ಪರಿಶೀಲಿಸಿ, ನಂತರ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡುವ ಮೂಲಕ ಬೆಂಗಳೂರಿನ ಪ್ರಾದೇಶಿಕ ಕಚೇರಿಗೆ ಕಳುಹಿಸುತ್ತಾರೆ. ಒಂದು ವೇಳೆ ಮೂಲ ದಾಖಲೆಗಳು ಸರಿ ಇಲ್ಲದಿದ್ದರೆ, ಸರಿಪಡಿಸಿಕೊಂಡು ಮರು ದಿನವೇ ಬರುವಂತೆ ತಿಳಿಸಲಾಗುತ್ತದೆ. ಯಾವುದೇ ಕಾಗದ ಬಳಸದೆ ಆನ್‌ಲೈನ್ ಮೂಲಕವೇ ಈ ಎಲ್ಲಾ ಪ್ರಕ್ರಿಯೆಗಳು ಸುಗಮ ಹಾಗೂ ತ್ವರಿತವಾಗಿ ನಡೆಯುತ್ತಿವೆ. ಬೆಂಗಳೂರಿನ ಪ್ರಾದೇಶಿಕ ಕಚೇರಿಗೆ ಕಳುಹಿಸಿದ ನಂತರ ಅರ್ಜಿದಾರರ ಮನೆಯು ಯಾವ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆಯೋ ಆ ಠಾಣೆಗೆ ಅರ್ಜಿದಾರರ ಕುರಿತಾಗಿ ಪೊಲೀಸ್ ಪರಿಶೀಲನೆ ನಡೆಸುವಂತೆ ಸಂದೇಶ ರವಾನೆಯಾಗುತ್ತದೆ. ಅರ್ಜಿದಾರರ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗದೇ ಇದ್ದರೆ ಕೆಲವೇ ದಿನಗಳಲ್ಲಿ ಪಾಸ್‌ಪೋರ್ಟ್ ಅವರ ಕೈ ಸೇರಲಿದೆ.



ಮೈಸೂರಿನ ಪಾಸ್‌ಪೋರ್ಟ್ ಸೇವಾ ಕೇಂದ್ರವು ಹಳೆ ಮೈಸೂರು ಭಾಗದ ಜನತೆಗೆ ಅತ್ಯಂತ ಉಪಯುಕ್ತಕಾರಿಯಾಗಿದ್ದು, ಬೆಂಗಳೂರಿಗೆ ಹೋಗುವ ಹಣ ಮತ್ತು ಸಮಯ ಉಳಿತಾಯವಾಗುತ್ತದೆ. ಇಲ್ಲಿನ ಸಿಬ್ಬಂದಿಯೂ ಅಷ್ಟೇ, ಇವರಿಂದ ಉತ್ತಮ ಸ್ಪಂದನೆ ಇದ್ದು, ದಾಖಲಾತಿ ಸರಿ ಇಲ್ಲದಿದ್ದರೆ, ಸರಿಪಡಿಸಿಕೊಂಡು ಮರು ದಿನ ಬರಲು ಸೌಜನ್ಯದಿಂದಲೇ ಹೇಳಿ, ಅವಕಾಶ ಮಾಡಿಕೊಡುತ್ತಿದ್ದಾರೆ. **–ವಿದ್ಯಾಶ್ರೀ, ಅರ್ಜಿದಾರರು**

ಮೈಸೂರಲ್ಲಿ ಪಾಸ್ ಪೋರ್ಟ್ ಕೇಂದ್ರ ಆರಂಭವಾದ ದಿನದಿಂದ ಇಂದಿನವರೆಗೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಿತ್ಯವೂ 100ಕ್ಕೂ ಹೆಚ್ಚು ಅರ್ಜಿದಾರರು ಕೇಂದ್ರಕ್ಕೆ ಭೇಟಿ ನೀಡುತ್ತಿದ್ದಾರೆ. ಮೈಸೂರು ಮಾತ್ರವಲ್ಲದೆ ಅಕ್ಕ ಪಕ್ಕದ ಜಿಲ್ಲೆಗಳಿಂದಲೂ ಅರ್ಜಿದಾರರು ಬರುತ್ತಿದ್ದಾರೆ. ಇಲ್ಲಿಗೆ ಬರುವವರು ಮೂಲ ದಾಖಲಾತಿಗಳನ್ನು ತರುವುದರ ಜೊತೆಗೆ ತಾಳ್ಮೆಯೂ ಬಹಳ ಮುಖ್ಯವಾಗಿದೆ.
– ದೀಪಕ್‌ಕುಮಾರ್, ಪರಿಶೀಲನಾ ಅಧಿಕಾರಿ, ಪಾಸ್‌ಪೋರ್ಟ್ ಸೇವಾ ಕೇಂದ್ರ

ರೌಡಿಶೀಟರ್‌ಗಳು ಸೇರಿ ಮೂವರ ಬಂಧನ

ಅಪರಾಧಿ ಮಹ ದೇವಪುರದ ರವಿ ಅಲಿಯಾಸ್ ಜಾಂಬೂ ರವಿ ಎಂಬಾತನನ್ನು ಕೊಲೆ ಮಾಡಲು ಹೊಂಚು ಹಾಕುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ವಿವರ: ಮಂಡಿ ಠಾಣೆ ಪೊಲೀಸರು ಜು.13ರಂದು ಮುಂಜಾನೆ 3.50ರ ಸುಮಾರಿನಲ್ಲಿ ಗಸ್ತಿನಲ್ಲಿದ್ದಾಗ ಮೈಸೂರಿನ ಖಾಸಗಿ ಬಸ್ ನಿಲ್ದಾಣದ ಬಳಿ ಹ್ಯುಂಡೈ ಐ20 ಕಾರು (ಕೆಎ–04, ಎಂಹೆಚ್ 0651) ಅನುಮಾನಾಸ್ಪದ ವಾಗಿ ನಿಂತಿರುವುದು ಕಂಡು ಬಂದಿದೆ. ದೂರದಿಂದ ನೋಡಿದಾಗ ಕಾರಿನಲ್ಲಿದ್ದವರ ವರ್ತನೆಯು ಕೂಡ ಅಸಹಜವಾಗಿದ್ದ ಹಿನ್ನೆಲೆಯಲ್ಲಿ ಗಸ್ತಿನಲ್ಲಿದ್ದ ಇಬ್ಬರು ಪೊಲೀಸರು ಮುನ್ನೆಚ್ಚರಿಕಾ ಕ್ರಮವಾಗಿ ಮತ್ತಿಬ್ಬರು ಪೊಲೀಸರನ್ನು ಕರೆಸಿಕೊಂಡು ಕಾರಿನ ಬಳಿ ತೆರಳಿದ್ದಾರೆ. ಪೊಲೀಸರನ್ನು ಕಂಡೊಡನೆ ಓರ್ವ ಓಡಿ ಹೋಗಿದ್ದು, ಉಳಿದ ಮೂವರನ್ನು ವಶಕ್ಕೆ ಪಡೆದುಕೊಂಡು ಪೊಲೀಸರು ಕಾರನ್ನು ತಪಾಸಣೆ ಮಾಡಲಾಗಿ ಅದರಲ್ಲಿ ಲಾಂಗ್‌ಗಳು ಇರುವುದು ಕಂಡುಬಂದಿದೆ.

ತಕ್ಷಣವೇ ಠಾಣೆಯ ಇನ್‌ಸ್ಪೆಕ್ಟರ್ ರಘು ಅವರಿಗೆ ಮಾಹಿತಿ ನೀಡಿದ ಪೊಲೀಸರು, ಕಾರಿನ ಸಮೇತ ಮೂವರನ್ನು ಠಾಣೆಗೆ ಕರೆದೊಯ್ದು ವಿಚಾರಣೆಗೆ ಒಳಪಡಿಸಿದಾಗ ಇವರು ಮಹದೇವಪುರದ ರವಿ ಅಲಿಯಾಸ್ ಜಾಂಜೂ ರವಿ ಎಂಬಾತನನ್ನು ಹತ್ಯೆ ಮಾಡಲು ಹುಡುಕುತ್ತಿದ್ದು, ಆತ ಈ ರಸ್ತೆಯಲ್ಲಿ ಬರುತ್ತಾನೆ ಎಂಬ ಮಾಹಿತಿ ಮೇರೆಗೆ ಮಾರಕಾಸ್ತಗಳೊಂದಿಗೆ ಕಾದು ಕುಳಿತ್ತಿದ್ದರು ಎಂಬುದು ಬಯಲಾಗಿದೆ.

ಈ ವ್ಯಕ್ತಿಗಳು ಹತ್ಯೆ ಮಾಡಲು ಸಂಚು ರೂಪಿಸಿದ್ದ ರವಿ ಅಲಿಯಾಸ್ ಜಾಂಬೂ ರವಿ ಕೊಲೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿ ಕಳೆದ 9ವರ್ಷದಿಂದ ಜೈಲಿನಲ್ಲಿದ್ದ. ಅನಾರೋಗ್ಯದ ಕಾರಣದಿಂದಾಗಿ ಹೈಕೋರ್ಟ್‌ನಿಂದ ಜಾಮೀನು ಪಡೆದು, ಕಳೆದ 20ದಿನಗಳ ಹಿಂದೆ ಹೊರಬಂದಿದ್ದಾನೆ. ಜೈಲಿನಿಂದ ಬಂದ ನಂತರ ಈತ ಅವಿನಾಶ್‌ನನ್ನು ಹತ್ಯೆ ಮಾಡುವುದಾಗಿ ಬೆದರಿಸಿದ್ದ, ಹೀಗಾಗಿ ಆತನನ್ನೇ ಮುಗಿಸಲು ಬಂಧಿತರು ಸಂಚು ರೂಪಿಸಿದ್ದರು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಬಂಧಿತರಲ್ಲಿ ಅವಿನಾಶ್ ಅಲಿಯಾಸ್ ಅವಿ ಅಲಿಯಾಸ್ ಸೊಪ್ಪು ಮೈಸೂರಿನ ಕೆಆರ್ ಮತ್ತು ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗಳಲ್ಲಿ ಕೊಲೆ ಯತ್ನದ 5 ಪ್ರಕರಣಗಳಲ್ಲಿ ಆರೋಪಿಯಾಗಿದ್ದರೆ, ಆನಂದ ಅಲಿಯಾಸ್ ಗೌಡ ಕೆಆರ್ ಮತ್ತು ವಿದ್ಯಾರಣ್ಯಪುರಂ ಠಾಣೆಗಳಲ್ಲಿ 3 ಕೊಲೆ ಯತ್ನ ಹಾಗೂ ಒಂದು ಹಲ್ಲೆ ಪ್ರಕರಣದಲ್ಲಿ ಆರೋಪಿಯಾಗಿದ್ದಾನೆ. ರವಿ ವಿರುದ್ಧ ಕೆಆರ್ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿದ್ದು, ಆನಂದ್ ವಿರುದ್ಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿದೆ. ಇವರೊಂದಿಗೆ ಬಂಧಿತನಾಗಿರುವ ಜುನೇದ್ ಕಾರು ಚಾಲಕನಾಗಿ ಬಂದಿದ್ದ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಪರಾರಿಯಾಗಿರುವ ದಿಲೀಪ್ ಈ ಹಿಂದೆ ಯಾವುದಾದರೂ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದಾನೆಯೇ ಎಂಬುದರ ಬಗ್ಗೆ ತಿಳಿಯಬೇಕಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊಸಳೆಗಳ ಹಾವಳಿ

ಹೊರಬಂದ ನಂತರ ಅದರ ಕಣ್ಣನ್ನು ಗೋಣಿ ಚೀಲದಿಂದ ಮುಚ್ಚಿ, ಮಾಹಿತಿ ನೀಡಿದರೆ ಅವುಗಳನ್ನು ಸ್ಥಳಾಂತರಿಸುತ್ತೇವೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ನಿಗಮದ ಎಇಇ ಅಬು ಮಾತನಾಡಿ, ಮೊಸಳೆಗಳ ಬಗ್ಗೆ ನಿಗಾ ವಹಿಸಲು ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿಯೊಂದಿಗೆ ಕಾರ್ಯಾಚರಣೆ ನಡೆಸಿ, ಶೀಘ್ರವೇ ಮೊಸಳೆಗಳನ್ನು ಸ್ಥಳಾಂತರ ಮಾಡಲಾಗುವುದು. ಪ್ರವಾಸಿಗರು ಆತಂಕಪಡುವ ಅಗತ್ಯವಿಲ್ಲ ಎಂದರು.

ನದಿಯಲ್ಲಿ ನೀರು ಹೆಚ್ಚಿರುವ ಕಾರಣ ಅಣೆಕಟ್ಟೆಯ ಕೆಳಭಾಗವಾದ ರಂಗನತಿಟ್ಟು ಪಕ್ಷಿಧಾಮದಿಂದ ಹಿಮ್ಮುಖವಾಗಿ ಈಜಿ ಮೊಸಳೆಗಳು ಇಲ್ಲಿಗೆ ಬಂದಿರುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

ನೀರು ಬಿಡುಗಡೆ

ಶ್ರೀರಂಗಪಟ್ಟಣದ ಐತಿಹಾಸಿಕ ವೆಲ್ಲೆಸ್ಲಿ ಸೇತುವೆಯಲ್ಲಿ ಜನರ ಓಡಾಟವನ್ನು ನಿರ್ಬಂಧಿಸಲಾಗಿದ್ದು, ಸೇತುವೆಯ ಒಂದು ತುದಿಯನ್ನು ಕಾಂಕ್ರೀಟ್ ಗೋಡೆಯಿಂದ ಮತ್ತೊಂದು ತುದಿಯನ್ನು ಬ್ಯಾರಿಕೇಡ್‌ಗಳ ಮೂಲಕ ಬಂದ್ ಮಾಡಲಾಗಿದೆ.

ಒಳಹರಿವು ಹೆಚ್ಚಳ: ಕೆಆರ್‌ಎಸ್ ಜಲಾಶಯಕ್ಕೆ ಗುರುವಾರ ಸಂಜೆ 71,203 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದ ಸುರಕ್ಷತಾ ದೃಷ್ಟಿಯಿಂದ 85,859 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಪ್ರಸ್ತುತ ಜಲಾಶಯದಲ್ಲಿ 123.49 ಅಡಿ ನೀರು ಸಂಗ್ರಹವಾಗಿದೆ.

ಟೀ ಕುಡಿಯಲು ಹೋದ ವ್ಯಕ್ತಿ ನಾಪತ್ತೆ

ಮೈಸೂರು, ಜು.14– ಟೀ ಕುಡಿಯಲು ಮನೆಯಿಂದ ಹೊರ ಹೋದ ವ್ಯಕ್ತಿ ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಕಲಾಗಿದೆ. ಆಲನಹಳ್ಳಿ ನಿವಾಸಿ ವೆಂಕಟೇಶ್ (53) ಜೂ.26ರಂದು ಬೆಳಗ್ಗೆ 6 ಗಂಟೆಗೆ ಮನೆಯಿಂದ ಹೋರ ಹೋದವರು ಇನ್ನೂ ವಾಪಾಸ್ಸಾಗಿಲ್ಲ ಎಂದು ವೆಂಕಟೇಶ್ ಅವರ ಪತ್ನಿ ಯಶೋಧ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಆಲನಹಳ್ಳಿ ಪೊಲೀಸ್ ಠಾಣೆ ದೂ.ಸಂ. 0821–2418311, ಕಂಟ್ರೋಲ್ ರೂಂ ನಂಬರ್ 2418339ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.



ಮನೆ ಮನೆಗೆ ನೈಸರ್ಗಿಕ ಅಡುಗೆ ಅನಿಲ: ಕಾಮಗಾರಿಗೆ ಸಂಸದ ಪ್ರತಾಪ್ ಸಿಂಹ, ಶಾಸಕ ನಾಗೇಂದ್ರ ಚಾಲನೆ

ಮೈಸೂರು, ಜು.14(ಎಸ್‌ಬಿಡಿ)– ಮೈಸೂರಿನ ವಿಜಯನಗರ ಮೊದಲ ಹಂತದ ಮನೆಗಳಿಗೆ ನೈಸರ್ಗಿಕ ಅಡುಗೆ ಅನಿಲ(ಪಿಎನ್‌ಜಿ) ಪೂರೈಸುವ ಯೋಜನೆ ಕಾಮಗಾರಿಗೆ ಗುರುವಾರ ಚಾಲನೆ ದೊರಕಿತು.

ಮೈಸೂರು ನಗರ ಪಾಲಿಕೆ 20ನೇ ವಾರ್ಡ್ ವಿಜಯನಗರ ಮೊದಲ ಹಂತದ ಮನೆಗಳಿಗೆ ಕುಡಿಯುವ ನೀರು ಮಾದರಿಯಲ್ಲಿ ಪಿಎನ್‌ಜಿ ಅಡುಗೆ ಅನಿಲ ಸರಬರಾಜು ಮಾಡಲು 20 ಕೋಟಿ ರೂ. ವೆಚ್ಚದಲ್ಲಿ ಸುಮಾರು 15 ಕಿ.ಮೀ. ಪೈಪ್‌ಲೈನ್ ಅಳವಡಿಸುವ ಯೋಜನೆ ಕೈಗೆತ್ತಿಕೊಂಡಿದ್ದು ಸಂಸದ ಪ್ರತಾಪ್ ಸಿಂಹ, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಮತ್ತಿತರ ಗಣ್ಯರು ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಎದುರಿನ ಜನರಲ್ ತಿಮ್ಮಯ್ಯ ರಸ್ತೆಯಲ್ಲಿ ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಕಾಮಗಾರಿಗೆ ಚಾಲನೆ ನೀಡಿದರು.



ಮೈಸೂರಿನ ವಿಜಯನಗರ ಮೊದಲ ಹಂತದ ಮನೆಗಳಿಗೆ ಪಿಎನ್‌ಜಿ ಅಡುಗೆ ಅನಿಲ ಪೂರೈಕೆ ಪೈಪ್‌ಲೈನ್ ಅಳವಡಿಸುವ ಕಾಮಗಾರಿಗೆ ಸಂಸದ ಪ್ರತಾಪ್ ಸಿಂಹ, ಶಾಸಕ ನಾಗೇಂದ್ರ ಚಾಲನೆ ನೀಡಿದರು.

ನಗರ ಪಾಲಿಕೆ ಸದಸ್ಯರಾದ ಎಂ.ಯು.ಸುಬ್ಬಯ್ಯ, ಶಿವಕುಮಾರ್, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ, ಅಧೀಕ್ಷಕ ಇಂಜಿನಿಯರ್ ಮಹೇಶ್, ಎಜಿ&ಪಿ ಪ್ರಥಮ್ ಸಂಸ್ಥೆಯ ಪ್ರಾದೇಶಿಕ ಮುಖ್ಯಸ್ಥ ಅರುಣ್ ನಾಯಕ್, ಕರ್ನಾಟಕ ಕ್ಲಸ್ಟರ್ ಮಾರ್ಕೆಟಿಂಗ್ ಹೆಡ್ ನಿತಿನ್ ಹುಯಿಲಗೋಳ್ ಮತ್ತಿತರರು ಉಪಸ್ಥಿತರಿದ್ದರು.

ಉಳಿತಾಯ: ಪ್ರತಿ ಮನೆಗೆ ಮಧ್ಯಮ ಸಾಂದ್ರತೆಯ ಪಾಲಿಥಿಲೀನ್(ಎಂಡಿಪಿಇ) ಪೈಪ್‌ಲೈನ್ ಮೂಲಕ ನಿರಂತರವಾಗಿ ಪಿಎನ್‌ಜಿ ಪೂರೈಸುವ ಯೋಜನೆ ಇದಾಗಿದೆ. ಗೃಹ ಬಳಕೆ ಮಾತ್ರವಲ್ಲದೆ ವಾಣಿಜ್ಯ ಬಳಕೆದಾರರಿಗೂ ಅನಿಲ ಪೂರೈಸುವ ಉದ್ದೇಶವಿದೆ. ಇದು ಸುರಕ್ಷಿತ, ಮಿತವ್ಯಯ ಹಾಗೂ ಅನುಕೂಲಕರವಾಗಿದ್ದು, ಎಲ್‌ಪಿಜಿ ಸಿಲಿಂಡರ್‌ಗಳಿಗೆ ಹೋಲಿಸಿದರೆ ಅನಿಲ ಬಳಕೆಯಲ್ಲಿ ಶೇ.22ರಷ್ಟು ಉಳಿತಾಯವಾಗಲಿದೆ ಎಂದು ಹೇಳಲಾಗಿದೆ. ಮೈಸೂರು ನಗರದಲ್ಲಿ ಹಂತ ಹಂತವಾಗಿ ಈ ಯೋಜನೆ ಅನುಷ್ಠಾನವಾಗಲಿದ್ದು, ಮಹದೇಶ್ವರ ಬಡಾವಣೆ(3ನೇ ವಾರ್ಡ್)ಯಲ್ಲಿ ಕಾಮಗಾರಿ ಶೀಘ್ರ ಆರಂಭವಾಗಲಿದೆ. ಇದರ ಬೆನ್ನಲ್ಲೇ ವಿಜಯನಗರ(20ನೇ ವಾರ್ಡ್) ಹಾಗೂ ಕುವೆಂಪುನಗರ(ವಾರ್ಡ್ 47)ದಲ್ಲೂ ಕಾಮಗಾರಿ ನಡೆಸಲಾಗುತ್ತದೆ.

ಇಂಡಿಯನ್ ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್(ಸಿಜಿಡಿ) ಉದ್ಯಮದ ಎಜಿ&ಪಿ ಪ್ರಥಮ್ ಸಂಸ್ಥೆ ಜಿಲ್ಲೆಯಲ್ಲಿ ಈಗಾಗಲೇ 9 ಸಿಎನ್‌ಜಿ ಕೇಂದ್ರ ಸ್ಥಾಪಿಸಿದೆ. 2023ರ ಮಾರ್ಚ್ ವೇಳೆಗೆ ಕೇಂದ್ರಗಳ ಸಂಖ್ಯೆ 24ಕ್ಕೆ ಏರಲಿದ್ದು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು. ಕರ್ನಾಟಕ ಸೇರಿದಂತೆ ತಮಿಳುನಾಡು, ಆಂಧ್ರಪ್ರದೇಶ, ಕೇರಳ ಹಾಗೂ ರಾಜಸ್ಥಾನದ 34 ಜಿಲ್ಲೆಗಳಲ್ಲಿ ನೈಸರ್ಗಿಕ ಅನಿಲ ಒದಗಿಸಲು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ(ಪಿಎನ್‌ಜಿಆರ್‌ಬಿ)ಯಿಂದ ಪರವಾನಗಿ ಪಡೆಯಲಾಗಿದ್ದು, ಅದರಂತೆ ಮೈಸೂರಿನ ಪ್ರತಿ ಮನೆಗೂ ಶುದ್ಧ ನೈಸರ್ಗಿಕ ಅನಿಲವನ್ನು ಸುರಕ್ಷಿತವಾಗಿ ಪೂರೈಸಲು ಬದ್ಧ ಎಂದು ಸಂಸ್ಥೆಯ ಪ್ರಾದೇಶಿಕ ಮುಖ್ಯಸ್ಥ ಅರುಣ್ ನಾಯಕ್ ತಿಳಿಸಿದ್ದಾರೆ.

ಕಾಶಿ ಯಾತ್ರಾರ್ಥಿಗಳಿಗೆ ಸಹಾಯ ಧನ ವರ್ಗಾವಣೆ

ಬೆಂಗಳೂರು, ಜು.14– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದು ರಾಜ್ಯದಿಂದ ಕಾಶಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಸಹಾಯಧನವನ್ನು ಡಿಬಿಟಿ ಮೂಲಕ ಆನ್‌ಲೈನ್‌ನಲ್ಲಿ ವರ್ಗಾವಣೆ ಮಾಡಿದರು.

ಇತ್ತೀಚೆಗೆ ಕಾಶಿಯಾತ್ರೆಗೆ ತೆರಳಿದ್ದ 10 ಜನ ಯಾತ್ರಾರ್ಥಿಗಳಿಗೆ ಸಾಂಕೇತಿಕವಾಗಿ ಸಹಾಯಧನ ವಿತರಿಸಲಾಯಿತು.

ನಂತರ ಮಾತನಾಡಿದ ಮುಖ್ಯಮಂತ್ರಿ, ಕಾಶಿಯನ್ನು ರಾಜ್ಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸಂದರ್ಶಿಸಲಿ ಎನ್ನುವ ಉದ್ದೇಶದಿಂದ ಸಹಾಯಧನ ಯೋಜನೆ ಪ್ರಾರಂಭಿಸಲಾಗಿದೆ. ಈ ಬಾರಿಯ ಆಯವ್ಯಯದಲ್ಲಿ ಇದಕ್ಕಾಗಿ ಅಗತ್ಯ ಅನುದಾನವನ್ನೂ ನೀಡಲಾಗಿದೆ ಯಾತ್ರಾರ್ಥಿಗಳು ಸುಲಭವಾಗಿ ಸಹಾಯ ಧನ ಪಡೆದುಕೊಳ್ಳುವುದಕ್ಕೆ ಅನುವು ಮಾಡಿಕೊಡುವ ವೆಬ್‌ಪೋರ್ಟಲ್‌ನ್ನು ಸೇವಾಸಿಂಧು ವೆಬ್‌ಪೋರ್ಟಲ್‌ನಲ್ಲಿ ಸಿದ್ದಪಡಿಸಲಾಗಿದೆ. ಯಾತ್ರಾರ್ಥಿಗಳು ಕಾಶಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಕರ್ನಾಟಕ ಛತ್ರದಲ್ಲಿ ತಮ್ಮ ಹೆಸರು ನೊಂದಣಿ ಮಾಡಿ ಸಿಕೊಂಡು ಅಗತ್ಯ ದಾಖಲಾತಿಗಳನ್ನು ವೆಬ್ ಪೋರ್ಟಲ್ ಮೂಲಕ ಸಲ್ಲಿಸಬಹುದು ಎಂದು ಹೇಳಿದರು.

ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಾದ ಶಶಿಕಲಾ ಜೊಲ್ಲೆ ಮಾತನಾಡಿ, ಜೀವನದಲ್ಲಿ ಒಮ್ಮೆಯಾದರೂ ಕಾಶಿಗೆ ಭೇಟಿ ಮಾಡಬೇಕು ಎನ್ನುವುದು ಬಹಳಷ್ಟು ಜನರ ಅಭಿಲಾಷೆಯಾಗಿರುತ್ತದೆ. ಅದಕ್ಕೆ ಪ್ರೋತ್ಸಾಹ ಧನ ನೀಡಬೇಕು ಎನ್ನುವುದು ನನ್ನ ಬಹಳ ದಿನದ ಆಶಯವಾಗಿತ್ತು. ಇದಕ್ಕೆ ಸೂಕ್ತವಾಗಿ ಸ್ಪಂದಿಸಿದ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಘೋಷಣೆ ಮಾಡಿದರು. ಅಲ್ಲದೇ, ಸೂಕ್ತ ಅನುದಾನವನ್ನೂ ಒದಗಿಸಿದ್ದಾರೆ. ಹಾಗೆಯೇ, ಭಾರತ್ ಗೌರವ್ ಯೋಜನೆ ಪ್ರಾರಂಭಕ್ಕೂ ಬೆನ್ನೆಲುಬಾಗಿ ನಿಂತಿದ್ದಾರೆ ಎಂದು ಹೇಳಿದರು.

ಹೆಬ್ಬಾಳು ಮುಖ್ಯರಸ್ತೆಯ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ

ಮೈಸೂರು,ಜು.14(ಪಿಎಂ)– ಮೈಸೂರಿನ ಹೆಬ್ಬಾಳು ಮುಖ್ಯರಸ್ತೆಯ ಎರಡೂ ಬದಿಯಲ್ಲಿ ಕೆಆರ್‌ಎಸ್ ರಸ್ತೆಯ ಮೇಟಗಳ್ಳಿ ವೃತ್ತದಿಂದ ಸೂರ್ಯ ಬೇಕರಿವರೆಗೆ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಲ್. ನಾಗೇಂದ್ರ ಗುರುವಾರ ಚಾಲನೆ ನೀಡಿದರು.



ಹೆಬ್ಬಾಳು ಮುಖ್ಯರಸ್ತೆಯ ಎರಡೂ ಬದಿಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯನ್ನು ಶಾಸಕರ ವಿವೇಚನಾ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯ ವಿಶೇಷ ಅನುದಾನದ 1.50 ಕೋಟಿ ರೂ. ವೆಚ್ಚದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೈಗೆತ್ತಿಕೊಂಡಿದೆ. ಇಲ್ಲಿನ ಸಂಜೀವಿನ ವೃತ್ತದ ಬಳಿಯಲ್ಲಿ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಇಲ್ಲಿನ ಲೋಕನಾಯಕನಗರದ ಅಭಿವೃದ್ಧಿ ಕಾರ್ಯಕ್ಕೆ 9.50 ಕೋಟಿ ರೂ. ಅನುದಾನ ಕಲ್ಪಿಸಿದ್ದೇನೆ. ಹೆಬ್ಬಾಳು ಪ್ರದೇಶದ ನಾಲ್ಕು ವಾರ್ಡ್‌ಗಳ ಪೈಕಿ ಲೋಕನಾಯಕ ನಗರದಲ್ಲಿ ರೈತರು ತಮ್ಮ ಜಮೀನುಗಳನ್ನು ನಿವೇಶನಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಆ ಕಾರಣಕ್ಕೆ ಈ ಭಾಗವು ರೆವಿನ್ಯೂ ಬಡಾವಣೆಗಳಾಗಿ ಮಾರ್ಪಟ್ಟಿದೆ. ಇದೇ ಭಾಗದಲ್ಲಿ ಹೆಬ್ಬಾಳು ಮುಖ್ಯರಸ್ತೆ ಇರುವ ಕಾರಣ ಇಲ್ಲಿ ವಾಹನ ದಟ್ಟಣೆಯೂ ಅಧಿಕ. ಹಾಗಾಗಿ ಇಲ್ಲಿನ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಚರಂಡಿ ನಿರ್ಮಾಣ ಕಾಮಗಾರಿಗೆ ಅನುದಾನ ಕಲ್ಪಿಸಿದ್ದೇನೆ ಎಂದು ಹೇಳಿದರು.

ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಪಾಲಿಕೆ ಉಪ ಆಯುಕ್ತ ಮಹೇಶ್, ಬಿಜೆಪಿ ಮುಖಂಡರಾದ ಕುಮಾರ್‌ಗೌಡ, ಪುನೀತ್, ತನುಜಾ ಮಹೇಶ್, ಸಂಜೀವಿನಿ ಕುಮಾರ್, ಮುಖಂಡರಾದ ರಾಮೇಗೌಡ, ಕದಂಬ ಸತೀಶ್, ರಾಮು, ಶ್ರೀನಿವಾಸ್‌ಗೌಡ, ಅಪ್ಪಾಜಿಗೌಡ, ಮರುದಾಸೆಗೌಡ, ಕೃಷ್ಣಪ್ಪ, ನಾಗೇಶ್, ಭೈರಪ್ಪ, ಶುಭ, ಸತ್ಯವತಿ, ಮಮತಾ, ಶಾಂತಮ್ಮ, ಜಂತುಪ್ಪ, ಅಜಂತ್, ಮಹೇಂದ್ರ, ಬಸವರಾಜು, ನಾಗರಾಜ್, ದೇವೇಗೌಡ, ಬೇಟ್ಟೆಗೌಡ ಮತ್ತಿತರರು ಹಾಜರಿದ್ದರು.

ನೆರೆ ರಾಜ್ಯ ಕೇರಳದಲ್ಲಿ 'ಮಂಕಿಪಾಕ್ಸ್' ಪ್ರತ್ಯಕ್ಷ
ಮೈಸೂರಲ್ಲಿ ಕಟ್ಟೆಚ್ಚರದ ಅನಿವಾರ್ಯತೆ

ಮೈಸೂರು, ಜು.14(ಎಸ್‌ಬಿಡಿ)– ನೆರೆ ರಾಜ್ಯ ಕೇರಳದಲ್ಲಿ ಮಂಕಿಪಾಕ್ಸ್ ಪ್ರಕರಣ ದೃಢಪಟ್ಟಿರುವ ಹಿನ್ನೆಲೆಯಲ್ಲಿ ಮೈಸೂರು–ಕೇರಳ ಗಡಿಭಾಗದಲ್ಲಿ ಮತ್ತಷ್ಟು ಎಚ್ಚರ ವಹಿಸುವ ಅನಿವಾರ್ಯ ಇದೆ. ಯುನೈಟೆಡ್ ಅರಬ್ ಎಮಿರೆಟ್ಸ್‌ನಿಂದ ಕೇರಳಕ್ಕೆ ಆಗಮಿಸಿದ 37 ವರ್ಷದ ವ್ಯಕ್ತಿಯಲ್ಲಿ ಸೋಂಕು ದೃಢಪಟ್ಟಿದೆ. ಈ ವ್ಯಕ್ತಿಯ ರಕ್ತ ಮಾದರಿ ಪರೀಕ್ಷೆ ನಡೆಸಿದ ಪುಣೆಯ ವೈರಾಲಜಿ ಸಂಸ್ಥೆ, ಪಾಸಿಟಿವ್ ವರದಿ ನೀಡಿದೆ ಇದು ಭಾರತದಲ್ಲಿ ಪತ್ತೆಯಾಗಿರುವ ಮೊದಲ ಪ್ರಕರಣವಾಗಿದ್ದು, ಕೇರಳದಲ್ಲಿ ತೀವ್ರ ನಿಗಾ ವಹಿಸಲಾಗಿದೆ.

ನೆರೆ ರಾಜ್ಯದಲ್ಲಿ ಮಂಕಿಪಾಕ್ಸ್ ಪತ್ತೆಯಾದ ಪರಿಣಾಮ ಕರ್ನಾಟಕದಲ್ಲಿ ಭೀತಿ ಶುರುವಾಗಿದೆ. ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲೂಕು ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಿದೆ. ಪರಿಸ್ಥಿತಿ ಅವಲೋಕಿಸಿ ಕೇರಳದಿಂದ ಬರುವವರನ್ನು ಸ್ಕ್ರೀನಿಂಗ್ ಮಾಡಲು ಸಿದ್ಧತೆ ಮಾಡಿಕೊಳ್ಳಬೇಕಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್, ಕೇರಳದಲ್ಲಿ ಮಂಕಿಪಾಕ್ಸ್ ಪ್ರಕರಣ ಪತ್ತೆಯಾಗಿರುವುದು ಗಮನಕ್ಕೆ ಬಂದಿದೆ. ಮಂಕಿಪಾಕ್ಸ್ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಪರಿಸ್ಥಿತಿ ಅವಲೋಕಿಸಿ, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ರೋಗ ಲಕ್ಷಣ: ಮಂಕಿಪಾಕ್ಸ್ ವೈರಲ್ ಝೂನೋಟಿಕ್ (ಪ್ರಾಣಿ) ಕಾಯಿಲೆಯಾಗಿದ್ದು, ಈ ವೈರಸ್‌ನಿಂದ ಸಿಡುಬು ರೋಗ ಲಕ್ಷಣ ಗೋಚರಿಸುತ್ತವೆ. ಸೋಂಕು ತಗುಲಿದವರಿಗೆ ಜ್ವರ, ತಲೆ ನೋವು, ಬೆನ್ನು ನೋವು, ಸ್ನಾಯು ನೋವು, ಚಳಿ, ಬಳಲಿಕೆಯಾಗುತ್ತದೆ. ಮುಖ್ಯವಾಗಿ ಜ್ವರದೊಂದಿಗೆ ಮುಖ, ಕೈಕಾಲು ಸೇರಿ ದೇಹದ ವಿವಿಧೆಡೆ ದದ್ದು(ಗುಳ್ಳೆ) ಕಾಣಿಸಿಕೊಳ್ಳುತ್ತದೆ. ಇದು ಎಲ್ಲಾ ವಯೋಮಾನದವರಲ್ಲೂ ಕಾಣಿಸಿಕೊಳ್ಳಬಹುದು. ಮಂಕಿಪಾಕ್ಸ್ ಮಾತ್ರವಲ್ಲ ಯಾವುದೇ ಸಾಮಾನ್ಯ ವೈರಸ್ ಬಗ್ಗೆಯೂ ನಿರ್ಲಕ್ಷ್ಯ ಮಾಡಿದರೆ ತೊಂದರೆ ಹೆಚ್ಚು. ಹಾಗಾಗಿ ಈ ರೀತಿಯ ರೋಗ ಲಕ್ಷಣಗಳು ಕಾಣಿಸಿ ಕೊಂಡವರು ಪ್ರತ್ಯೇಕವಾಗಿದ್ದು ತಕ್ಷಣ ಆಸ್ಪತ್ರೆಗೆ ಹೋಗಿ ವೈದ್ಯರ ಸಲಹೆ ಪಡೆಯಬೇಕು. ವೈದ್ಯರು ರಕ್ತ ಪರೀಕ್ಷೆ ನಡೆಸಿ, ಅಗತ್ಯ ಔಷಧಿ ಸೂಚಿಸುತ್ತಾರೆ. ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಬಹುದು ಎಂದು ವೈದ್ಯರು ತಿಳಿಸಿದ್ದಾರೆ.

ಶೇ.10ರಷ್ಟು ಕನಿಷ್ಠ ವೇತನ ಪರಿಷ್ಕರಣೆ ಪ್ರಸ್ತಾಪಕ್ಕೆ ವಿರೋಧ ; ಸಿಐಟಿಯು ಪ್ರತಿಭಟನೆ



ಮೈಸೂರು,ಜು.14(ಪಿಎಂ)– ಇತ್ತೀಚೆಗೆ ನಡೆದ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯಲ್ಲಿ ಕಾರ್ಮಿಕರ ಕನಿಷ್ಠ ವೇತನ ಸಂಬಂಧ ಕೇವಲ ಶೇ.10ರಷ್ಟು ಹೆಚ್ಚಳಕ್ಕೆ ಪ್ರಸ್ತಾಪಿಸಿರುವುದು ಅವೈಜ್ಞಾನಿಕ ಎಂದು ಆರೋಪಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಜಿಲ್ಲಾ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕುವೆಂಪುನಗರದ ಸಹಾಯಕ ಕಾರ್ಮಿಕರ ಆಯುಕ್ತರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅನುಸೂಚಿತ 83 ಉದ್ಯೋಗಗಳ ಕನಿಷ್ಠ ವೇತನ ಪರಿಷ್ಕರಣೆ 2016ರಲ್ಲಿ ಆಗಿತ್ತು. ಇದೀಗ ಪರಿಷ್ಕರಣೆಯ ಪ್ರಸ್ತಾಪ ಆಗಿದೆಯಾದರೂ ಇದು ಅವೈಜ್ಞಾನಿಕವಾಗಿ ಕೂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜೂ.21ರಂದು ನಡೆದ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯಲ್ಲಿ ಮಂಡಳಿ ಅಧ್ಯಕ್ಷರು ಆಹಾರ, ಬಟ್ಟೆ, ವಸತಿ, ಇಂಧನ, ನೀರು ಮತ್ತು ಮಕ್ಕಳ ಶಿಕ್ಷಣವನ್ನು ಪರಿಷ್ಕರಣೆಯಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂದು ಹೇಳಿದರು. ಜೊತೆಗೆ ಕೇವಲ ಶೇ.10ರಷ್ಟು ಮಾತ್ರ ಪರಿಷ್ಕರಿಸುವ ಪ್ರಸ್ತಾಪ ಮಂಡಿಸಿದರು. ಈ ಪ್ರಸ್ತಾಪವು ಏಕಪಕ್ಷೀಯವಾಗಿದೆ ಎಂದು ಆರೋಪಿಸಿದರು.

ಕಳೆದ 2 ವರ್ಷಗಳಲ್ಲಿ ಹಣದುಬ್ಬರ ಪ್ರಮಾಣ ಶೇ.7ಕ್ಕೂ ಅಧಿಕವಾಗಿದೆ. ಅಲ್ಲದೆ, ಹಿಂದೆಂದೂ ಕಾಣದ ರೀತಿಯಲ್ಲಿ ಬೆಲೆ ಏರಿಕೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಶೇ.10ರಷ್ಟು ಹೆಚ್ಚಳ ಪ್ರಸ್ತಾಪ ನ್ಯಾಯಸಮ್ಮತವಲ್ಲ. ಜೊತೆಗೆ ಸದರಿ ಸಭೆಗೆ ಕಾರ್ಮಿಕರ ಪರವಾದ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಸಿಐಟಿಯು ಸಂಘಟನೆಯನ್ನು ಆಹ್ವಾನಿಸದೇ ದೂರ ವಿಟ್ಟಿರುವುದು ಪಾರದರ್ಶಕ ನಡೆಯಲ್ಲ ಎಂದು ಖಂಡಿಸಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಜಯರಾಮ್, ಸಂಘಟನೆ ಮುಖಂಡರಾದ ಬಾಲಾಜಿ, ಅಣ್ಣಪ್ಪ ಜಗದೀಶ್, ನಾಗರಾಜ್, ಬಸವಯ್ಯ, ಕೃಷ್ಣೇಗೌಡ, ರಾಜಶೇಖರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಂಚಾರ ನಿಯಮ ಉಲ್ಲಂಘನೆ
ಬರೀ ಆರು ತಿಂಗಳಲ್ಲಿ 6,49,270 ಪ್ರಕರಣ ದಾಖಲು
3,35,27,900 ದಂಡ ವಸೂಲಿ

ಮೈಸೂರು, ಜು.14(ಜಿಎ)– ಪ್ರಸಕ್ತ ವರ್ಷದ ಆರು ತಿಂಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಸಂಬಂಧ 6,49,270 ಪ್ರಕರಣ ದಾಖಲಾಗಿದ್ದು, ಬರೋಬ್ಬರಿ 3,35,27,900 ರೂ. ದಂಡ ಸಂಗ್ರಹವಾಗಿದೆ.



ಸಂಚಾರ ನಿಯಮ ಉಲ್ಲಂಘನೆ ಮಾಡಿರುವವರಿಗೆ ಸ್ಥಳದಲ್ಲಿಯೇ ದಂಡ ವಿಧಿಸುವ ಮೂಲಕ 1,43,45,500 ರೂ., ಅಂಚೆ ಮೂಲಕ ಮನೆಗೆ ನೋಟಿಸ್ ನೀಡುವ ಮೂಲಕ 1.16.62.800 ರೂ. ಹಾಗೂ ನ್ಯಾಯ್ಯಾಲಯದಲ್ಲಿ 75,19,600 ರೂ. ಹೀಗೆ ಒಟ್ಟಾರೆ ಜೂನ್ ಅಂತ್ಯಕ್ಕೆ ಬರೋಬ್ಬರಿ 3,35,27,900 ರೂ. ದಂಡ ಸಂಗ್ರಹವಾಗಿದೆ.

2020ರ ಅವಧಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವವರಿಗೆ ಸ್ಥಳದಲ್ಲಿಯೇ ದಂಡ ವಿಧಿಸುವ ಮೂಲಕ 2,31,32,00 ರೂ., ನೋಟಿಸ್ ಮೂಲಕ 6,30,05,700 ರೂ. ಹಾಗೂ ನ್ಯಾಯಾಲಯದಲ್ಲಿ 38,200 ರೂ. ಒಟ್ಟು 8,61,75,900 ರೂ. ದಂಡ ಸಂಗ್ರಹವಾಗಿತ್ತು. 2021ರಲ್ಲಿ ಸ್ಥಳದಲ್ಲಿಯೇ 1,99,55,800 ರೂ., ನೋಟಿಸ್ ಮೂಲಕ 3,75,09,00 ರೂ. ಹಾಗೂ ನ್ಯಾಯಾಲಯದಲ್ಲಿ 2,67,850 ರೂ. ಒಟ್ಟು 5,77,32,650 ರೂ. ದಂಡ ಸಂಗ್ರವಾಗಿತ್ತು.

ಪೊಲೀಸ್ ಇಲಾಖೆ ಹಾಗೂ ಇತರೇ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸಂಚಾರ ನಿಯಮ ಪಾಲನೆ ಬಗ್ಗೆ ವಿವಿಧ ರೀತಿಯಲ್ಲಿ ಅರಿವು ಮೂಡಿಸುತ್ತಿದ್ದರೂ 2020ರಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ 10.90.841, 2021ರಲ್ಲಿ 2.67.850 ಹಾಗೂ 2022ರ ಜೂನ್ ಅಂತ್ಯದವರೆಗೆ 6.49.270 ಪ್ರಕರಣಗಳು ದಾಖಲಾಗಿವೆ. ಪ್ರಮುಖವಾಗಿ ಓವರ್ ಸ್ಪೀಡ್–2100, ಮದ್ಯಪಾನ ಮಾಡಿ ವಾಹನ ಚಾಲನೆ–913, ದ್ವಿಚಕ್ರ ವಾಹನಗಳಲ್ಲಿ ಹೆಲ್ಮೆಟ್ ಧರಿಸದೆ ಚಾಲನೆ–11.575, ಹಿಂಬದಿ ಸವಾರ ಹೆಲ್ಮೆಟ್ ಧರಿಸದೆ ಚಾಲನೆ–18.911, ತ್ರಿಬಲ್ ರೈಡಿಂಗ್–859, ದೋಷ ಪೂರಿತ ನಂಬರ್ ಪ್ಲೇಟ್–846, ನೋ ಪಾರ್ಕಿಂಗ್–1204, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ–84, ಸೀಟ್ ಬೆಲ್ಟ್ ಧರಿಸದೆ ಇರುವುದು–2.185, ಪರವಾನಿಗೆ ಇಲ್ಲದೆ ವಾಹನ ಚಾಲನೆ–621, ಇತರೆ–1044 ಸೇರಿದಂತೆ 6.49.270 ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ದಾಖಲಾಗಿವೆ.

ಸಿಪಿಸಿ ಪಾಲಿಟೆಕ್ನಿಕ್ ಹಿರಿಯ ವಿದ್ಯಾರ್ಥಿಗಳ ಮಹಾ ಸಭೆ

ಮೈಸೂರು, ಜು.14– ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಹಿರಿಯ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯನ್ನು ಭಾನುವಾರ (ಜು.17) ಸಿಪಿಸಿ ಪಾಲಿಟೆಕ್ನಿಕ್ ಆವರಣದ ಹಿರಿಯ ವಿದ್ಯಾರ್ಥಿಗಳ ಸಂಘದ ಕಟ್ಟಡದ ಸಭಾಂಗಣ ಬೆಳಗ್ಗೆ 10.30 ಗಂಟೆಗೆ ಆಯೋಜಿಸಲಾಗಿದೆ. ಅಂದು ಸಭೆಯನ್ನು ಉಪ ಸಾರಿಗೆ ನಿವೃತ್ತ ಆಯುಕ್ತ ಹೆಚ್.ವಿ. ತಿಮ್ಮಯ್ಯ ಮತ್ತು ಚೆಸ್ಕಾಂ ಕಾರ್ಯಪಾಲಕ ಎಲ್. ಲೋಕೇಶ್ ಅವರು ಉದ್ಘಾಟಿಸಲಿದ್ದಾರೆ. ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಂಎಫ್‌ಎಂಇ ಅಡಿ ಫಲಾನುಭವಿಗಳ ಆಯ್ಕೆ

ಮೈಸೂರು, ಜು.14(ಎಂಕೆ)– ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆ (ಪಿಎಂಎಫ್‌ಎಂಇ) ಯಡಿ 850 ಮಂದಿ ಫಲಾನುಭವಿಗಳ ಆಯ್ಕೆಗೆ ಗುರಿ ನಿಗಧಿಪಡಿಸಲಾಗಿದೆ. ಪಾಲಿಕೆಯ ಡೇ–ನಲ್ಮ್ ಅಭಿಯಾನದಡಿ ಕಿರು ಆಹಾರ ಸಂಸ್ಕರಣಾ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವ ಸ್ವ–ಸಹಾಯ ಸಂಘದ ಸದಸ್ಯರು ಸ್ವಂತ ಉದ್ದಿಮೆ ಆರಂಭಿಸಲು ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆಯಡಿ ಪ್ರಾಥಮಿಕ ಬಂಡವಾಳವಾಗಿ 40 ಸಾವಿರ ರೂ., ಆರ್ಥಿಕ ನೆರವು ಪಡೆದು ಕೊಳ್ಳಬಹುದಾಗಿದೆ. ಆಹಾರ ಸಂಸ್ಕರಣೆಯಲ್ಲಿ ತೊಡಗಿಕೊಂಡಿರುವ ಸ್ವ–ಸಹಾಯ ಸದಸ್ಯರಿಗೆ ಮಾತ್ರವೇ ಮೀಸಲಿದ್ದು, ನೆರವಿನ ಮೊತ್ತವನ್ನು ಕಾರ್ಯನಿರತ ಉದ್ಯಮಕ್ಕೆ ಬಂಡವಾಳ ಮತ್ತು ಸಣ್ಣಪರಿಕರಗಳ ಖರೀದಿಗೆ ಬಳಸಿಕೊಳ್ಳಬಹುದಾಗಿದೆ.

1165 ಸ್ವ-ಸಹಾಯ ಸಂಘಗಳು: ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 1165 ಸ್ವ-ಸಹಾಯ ಸಂಘಗಳಿದ್ದು, 10 ಸ್ವ-ಸಹಾಯ ಸಂಘಗಳನ್ನು ಒಳಗೊಂಡ 53 ಪ್ರದೇಶ ಮಟ್ಟದ ಒಕ್ಕೂಟಗಳಿವೆ. ಕೇಂದ್ರ ಸರ್ಕಾರದಿಂದ ಪ್ರದೇಶ ಮಟ್ಟದ ಒಕ್ಕೂಟಗಳಿಗೆ ಹಣ ಬಿಡುಗಡೆಯಾಗಲಿದ್ದು, ಒಕ್ಕೂಟದಿಂದ ಸ್ವ-ಸಹಾಯ ಸಂಘದ ಸದಸ್ಯರ ಖಾತೆಗೆ ಹಣ ವರ್ಗಾವಣೆಯಾಗಲಿದೆ.

ಅರಿವು: ಪಾಲಿಕೆಯು ಡೇ–ನಲ್ಮ್ ವಿಭಾಗದ ವತಿಯಿಂದ ಎಲ್ಲಾ ವಲಯ ಕಚೇರಿಗಳ ವ್ಯಾಪ್ತಿಯಲ್ಲಿರುವ ಸ್ವ-ಸಹಾಯ ಸಂಘದ ಸದಸ್ಯರುಗಳಿಗೆ ಸದರಿ ಯೋಜನೆ ಕುರಿತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ 200ಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	123.65 ಅಡಿ
ಒಳಹರಿವು	71203 ಕ್ಯೂಸೆಕ್
ಹೊರಹರಿವು	85859 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಗುರುವಾರ	2282.00 ಅಡಿ
ಒಳ ಹರಿವು	33000 ಕ್ಯೂಸೆಕ್
ಹೊರ ಹರಿವು	32000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2854.37 ಅಡಿ
ಒಳ ಹರಿವು	13988 ಕ್ಯೂಸೆಕ್
ಹೊರ ಹರಿವು	13166 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಗುರುವಾರ	2920.50 ಅಡಿ
ಒಳ ಹರಿವು	33164 ಕ್ಯೂಸೆಕ್
ಹೊರ ಹರಿವು	35350 ಕ್ಯೂಸೆಕ್

ಒಂದನೇ ಪುಟದಿಂದ

ಇದು ಅಂತ್ಯವಲ್ಲ, ಆರಂಭ!

ಡಾ.ಭೈರಪ್ಪನವರು, 'ಪರ್ವ' ಕಾದಂಬರಿಯ ರಂಗ ಪ್ರಯೋಗಕ್ಕೆ ಪ್ರಕಾಶ್ ಬೆಳವಾಡಿ ಅವರಿಗೆ ನಿರ್ದೇಶನದ ಜವಾಬ್ದಾರಿ ನೀಡಿದ್ದು ಉತ್ತಮ ಕೆಲಸ. ಬೆಳವಾಡಿ ಅವರು ಬಹಳ ಕ್ರೀಯಾಶೀಲತೆ ಹೊಂದಿರುವ ನಿರ್ದೇಶಕರು. ಅವರು ರಂಗ ಪ್ರಯೋಗದ ಸ್ಕ್ರೀಪ್ಟ್ ಬರೆದು ತೋರಿಸಿದಾಗ, ಅದನ್ನು ನೋಡಿ ಬಹಳ ಸಂತೋಷವಾಯಿತು. ಏಕೆಂದರೆ ತಿದ್ದುವಂತಹ ಯಾವುದೇ ಅಂಶ ಅಲ್ಲಿ ಇರಲಿಲ್ಲ. ಏಕೆಂದರೆ ನಾನು ಪರ್ವ ಬರೆದಾಗ, ಅದನ್ನು ನಾಟಕವಾಗಲಿ ಎಂಬ ದೃಷ್ಟಿಯಲ್ಲಿ ಬರೆದಿರಲಿಲ್ಲ. ಆದರೆ ನಾನು ಸಾಕಷ್ಟು ನಾಟಕ ಅಧ್ಯಯನ ಮಾಡಿದ್ದ ಹಿನ್ನೆಲೆಯಲ್ಲಿ ನನ್ನ ಬರವಣಿಗೆಯೊಳಗೇ ನಾಟಕಕ್ಕೆ ಅಳ ವಡಿಸುವ ಶೈಲಿ ಇದೆ ಎಂದು ಹೇಳಿದರು.

> **ಸುಮಾರು 40 ಲಕ್ಷ ಆದಾಯ**
> ಸರ್ಕಾರ ಕೊಟ್ಟ ಅನುದಾನವನ್ನು ಪಾರದರ್ಶಕವಾಗಿ ವಿನಿಯೋಗಿಸಿದ್ದೇವೆ. ಈ ದೊಡ್ಡ ಸಂಖ್ಯೆಯ ಕಲಾವಿದರಿಗೆ 20ರಿಂದ 22 ಸಾವಿರ ರೂ. ಮಾಸಿಕ ಗೌರವ ಧನವನ್ನು ಕಳೆದ 2 ವರ್ಷಗಳಿಂದ ನೀಡುತ್ತಾ ಬಂದಿದ್ದೇವೆ. ಪರ್ವದ 39 ಪ್ರದರ್ಶನಗಳಿಂದ ಸುಮಾರು 40 ಲಕ್ಷ ರೂ. ಆದಾಯ ಬಂದಿದೆ. –ಅಡ್ಡಂಡ ಕಾರ್ಯಪ್ಪ, ರಂಗಾಯಣ ನಿರ್ದೇಶಕ

ಹಾಗಾಗಿ ಪರ್ವ ನಾಟಕದಲ್ಲಿ ಕಾದಂಬರಿಯಲ್ಲಿರುವ ಸಂಭಾಷಣೆಗಳನ್ನೇ ಉಪಯೋಗಿಸಿದ್ದಾರೆ. ಆದರೆ ನಾಟಕಕ್ಕೆ ಪೂರಕವಾಗಿ ಸಂಭಾಷಣೆಗಳನ್ನು ಯಾವ್ಯಾವ ಕಡೆಗೆ ತರ ಬೇಕೆಂಬ ಬಗ್ಗೆ ಪ್ರಕಾಶ್ ಬೆಳವಾಡಿ ಜಾಣ್ಮೆ ಮೆರೆದಿದ್ದಾರೆ. ಆರಂಭದ ತಾಲೀಮು ನಡೆಯುವ ವೇಳೆ ಬಂದು ನೋಡಿದ್ದೆ. ಬಹಳ ಚೆನ್ನಾಗಿ ಮೂಡಿಬಂದಿದೆ ಎಂದು ಆಗಲೇ ಅನ್ನಿಸಿತ್ತು. ನಾನು ಮೊದಲನೇ ಪ್ರದರ್ಶನ ನೋಡಿದಾಗ, ತುಂಬ ಸಂತೋಷವಾಯಿತು ಎಂದು ಹರ್ಷ ವ್ಯಕ್ತಪಡಿಸಿದರು. ಪ್ರಕಾಶ್ ಬೆಳವಾಡಿ ಮಾಡಿದ ಸ್ಕ್ರೀಪ್ಟ್, ರಂಗಸಜ್ಜಿಕೆ ಸೇರಿ ದಂತೆ ಪ್ರತಿಯೊಂದು ಇಲ್ಲಿ ಸಮಷ್ಟಿ ಪ್ರಜ್ಞೆಯಲ್ಲಿ ಕೆಲಸವಾಗಿದೆ. ನಾನು ನಾಟಕ ನೋಡುತ್ತಿರುವುದು ಇದು 4ನೇ ಬಾರಿ. ಇದು ನನ್ನದೇ ಕಾದಂಬರಿಯಾದರೂ 4ನೇ ಬಾರಿ ನೋಡುತ್ತಿದ್ದೇನೆ ಎಂದರೆ ಈ ನಾಟಕದಲ್ಲಿ ನಿಜವಾಗಲೂ ಒಂದು ಶಕ್ತಿ ಇದೆ. ಎಷ್ಟೋ ಜನ ಬೇರೆಡೆ ಈ ನಾಟಕ ನೋಡಿದವರು ನನಗೆ ಕಾಗದ ಬರೆದು ಅಭಿನಂದಿಸಿದ್ದಾರೆ. ಜೊತೆಗೆ ಇದರಲ್ಲಿ ಕಾರ್ಯಪ್ಪನವರ ಶ್ರಮ ತುಂಬನೇ ಇದೆ. ಅವರು ಬಹಳ ಪ್ರತಿಭಾವಂತರು. ಇವರಂತಹವರಿಂದ ಮಾತ್ರವೇ ಇಂತಹ ಮಹತ್ವದ ಕೆಲಸ ಆಗಲು ಸಾಧ್ಯ ಎಂದು ಪ್ರಶಂಸಿಸಿದರು. ಇಂದಿನ ಪ್ರದರ್ಶನ ವೀಕ್ಷಿಸಲು ಬಂದಿರುವವರು ಬಹು ತೇಕ ಕಲಾವಿದರೇ ಆಗಿದ್ದಾರೆ. ಜೊತೆಗೆ ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ ಅವರು ನಾಟಕ ನೋಡಲು ಬಂದಿದ್ದಾರೆ. ಅವರಂತಹ ವಿದ್ವಾಂಸರು ಪ್ರಸ್ತುತ ಕರ್ನಾಟಕ ದಲ್ಲಂತೂ ಮತ್ತೊಬ್ಬರಿಲ್ಲ. ರಾಜ್ಯದ ಹೊರಭಾಗದಲ್ಲಿ ಕೂಡ ಇವರಂತಹ ವಿದ್ವಾಂಸರು ಇಲ್ಲ. ಏಕೆಂದರೆ ಇವರಿಗೆ ಇರು ವಂತಹ ವಿದ್ವತ್ ಕೇವಲ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಭಾರತದ ಯಾವುದೇ ತತ್ವಶಾಸ್ತ್ರ ಮತ್ತು ಕಲೆ ಬಗ್ಗೆ ಅವರು ಅಪಾರ ವಿದ್ವತ್ತು ಹೊಂದಿದ್ದಾರೆ ಎಂದು ಹೇಳಿದರು.

'ಪರ್ವ' ಸೇರಿದಂತೆ ನನ್ನ ಎಲ್ಲಾ ಕಾದಂಬರಿಗಳನ್ನು ಅವ ರಷ್ಟು ಅರ್ಥ ಮಾಡಿಕೊಂಡಿರುವವರು ಬೇರೊಬ್ಬರಿಲ್ಲ. ಅಂತ ಹವರು ಪರ್ವ ನಾಟಕವನ್ನೇ ನೋಡಿರಲಿಲ್ಲ. ಹಾಗಾಗಿ ಅವರು ಇಂದು ನಾನು ಬರುತ್ತೇನೆಂದು ಬಂದಿದ್ದಾರೆ. ಇದು ನನಗೆ ತುಂಬ ಸಂತಸ ಉಂಟು ಮಾಡಿದೆ ಎಂದರು.

ವಿವಿಧೆಡೆ ಪ್ರದರ್ಶನ: 8 ಗಂಟೆ ಅವಧಿಯ ಪರ್ವ ನಾಟ ಕವು ರಾಜ್ಯದ ದಾವಣಗೆರೆ, ಧಾರವಾಡ, ಬೆಳಗಾವಿ, ವಿಜಯಪುರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮಂಗಳೂರು ಮಾತ್ರ ವಲ್ಲದೆ, ಹೊರರಾಜ್ಯದ ಮುಂಬೈ ಮತ್ತು ಪುಣೆಯಲ್ಲಿಯೂ ಯಶಸ್ವಿ ಪ್ರದರ್ಶನ ಕಂಡಿದೆ. ಇಂದು ನಡೆದ ಸಮಾರೋಪ ಪ್ರದರ್ಶನದಲ್ಲಿ ಆಹ್ವಾನಿತರಿಗೆ ಉಚಿತ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು. ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್, ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಬಿ.ವಿ.ರಾಜಾರಾಂ, ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಭೈರಪ್ಪ ನವರ ಪತ್ನಿ ಸರಸ್ವತಿ ಮತ್ತು ಪುತ್ರ ಡಾ.ವಿದ್ಯಾಸಾಗರ್ ಸೇರಿದಂತೆ ಹಲವು ಆಹ್ವಾನಿತರು ನಾಟಕ ವೀಕ್ಷಿಸಿದರು. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಉಪನಿರ್ದೇಶಕ ನಿರ್ಮಲ ಮಠಪತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮತ್ತಿತರರು ಹಾಜರಿದ್ದರು.

ಭಾರೀ ಗಾಳಿ ಮಳೆ

ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಶುಕ್ರವಾರ ಬೆಳಗಿನಿಂದ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಈ ಅವಧಿಯಲ್ಲಿ 155.6 ಮಿಮೀನಿಂದ 204.4 ಮಿಮೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಸುರಿಯುತ್ತಿರುವ ಮಳೆಯ ನಡುವೆಯೇ ಕಂಬಗಳನ್ನು ಬದಲಿಸಿ ವಿದ್ಯುತ್ ಪೂರೈಕೆ ಮರು ಸ್ಥಾಪಿಸಲು ಸೆಸ್ಕ್ ಮುಂದಾಗಿದೆ. ಆದರೆ ಭಾರೀ ಮಳೆ ಸುರಿಯುತ್ತಿರುವ ಕಾರಣ ನಿರಂತರ ವಿದ್ಯುತ್ ಪೂರೈಕೆ ಅಸಾಧ್ಯವಾಗಿ ಪರಿಣಮಿಸಿದೆ. ಮುಖ್ಯ ರಸ್ತೆಗಳಿಗೆ ಬೃಹತ್ ಮರಗಳು ಬಿದ್ದಿದ್ದು ಅರಣ್ಯ ಇಲಾಖೆ, ಸೆಸ್ಕ್, ಎನ್‌ಡಿಆರ್‌ಎಫ್, ಗ್ರಾಪಂ ಸಿಬ್ಬಂದಿ ಸಾರ್ವಜನಿಕರ ಸಹಕಾರದೊಂದಿಗೆ ತೆರವು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಜಿಲ್ಲೆಯ ಬಹುತೇಕ ಎಲ್ಲಾ ರಸ್ತೆಗಳಲ್ಲೂ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ಸೋಮವಾರಪೇಟೆ ತಾಲೂಕಿನ ಶಾಂತಳ್ಳಿಯಲ್ಲಿ ಕಳೆದ 24 ಗಂಟೆಯಲ್ಲಿ ದಾಖಲೆಯ 284 ಮಿ.ಮೀ ಮಳೆಯಾಗಿದ್ದರೆ, ಭಾಗಮಂಡಲ ವ್ಯಾಪ್ತಿಯಲ್ಲಿ 195.2 ಹಾಗೂ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ವ್ಯಾಪ್ತಿಯಲ್ಲಿ 100 ಮೀ.ಮೀ ಮಳೆ ದಾಖಲಾಗಿದೆ. ಕಾವೇರಿ, ಲಕ್ಷ್ಮಣ ತೀರ್ಥ ನದಿಗಳಲ್ಲಿ ಪ್ರವಾಹ ಕಂಡು ಬಂದಿದೆ. ಲಕ್ಷ್ಮಣ ತೀರ್ಥ ನದಿಯಲ್ಲಿ ಪ್ರವಾಹ ಉಕ್ಕೇರಿದ್ದು, ಬಾಳಲೆ, ನಿಟ್ಟೂರು, ನಾಲ್ಕೇರಿ, ಕುಟ್ಟ ಹನಗೋಡು ಕಡೆಗಳಲ್ಲಿ ಪ್ರವಾಹ ಎದುರಾಗಿದೆ. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಭತ್ತದ ಗದ್ದೆಗಳು ಸಮುದ್ರದಂತಾಗಿದೆ. ಸೋಮವಾರಪೇಟೆ ಮತ್ತು ದಕ್ಷಿಣ ಕೊಡಗಿನ ವಿವಿಧ ಕಡೆಗಳಲ್ಲಿ ಅಂಗನವಾಡಿ ಮತ್ತು ಶಾಲಾ ಕಾಲೇಜುಗಳಿಗೆ ಆಡಳಿತ ಮಂಡಳಿಗಳು ರಜೆ ನೀಡಿರುವ ಕುರಿತು ವರದಿಯಾಗಿದೆ.

ಮಡಿಕೇರಿ–ಚೆಟ್ಟಳ್ಳಿ ರಸ್ತೆಯಲ್ಲಿ ಭೂ ಕುಸಿತವಾಗಿದ್ದು, ಮರಗಳು ರಸ್ತೆಗೆ ಉರುಳಿ ಬಿದ್ದಿವೆ. ಅರಣ್ಯ ಇಲಾಖೆ ಮರ ತೆರವು ಮಾಡಿದ್ದು, ಸ್ಥಳೀಯ ಆಡಳಿತ ಮಣ್ಣನ್ನು ತೆರವುಗೊಳಿಸಿದೆ. ಗಾಳಿಬೀಡು ರಸ್ತೆ ಜಂಕ್ಷನ್ ಬಳಿ ಬೃಹತ್ ಗಾತ್ರದ ಮರಗಳು ಬಿದ್ದಿವೆ. ಮಡಿಕೇರಿ– ಸೋಮವಾರಪೇಟೆ ರಸ್ತೆ ಹಾಗೂ ಶನಿವಾರಸಂತೆ ವ್ಯಾಪ್ತಿ, ಭಾಗಮಂಡಲ, ತಲಕಾವೇರಿ ರಸ್ತೆಯಲ್ಲೂ ಮರಗಳು ಧರೆಗುರುಳಿವೆ. ಮರಗಳು ಬಿದ್ದು ಹಲವು ಮನೆಗಳಿಗೆ ಹಾನಿಯಾಗಿರುವ ಬಗ್ಗೆಯೂ ವರದಿಯಾಗಿದೆ.

ಗಾಳಿಬೀಡು ಗ್ರಾಮ, ಮಡಿಕೇರಿಯ ಗದ್ದಿಗೆ, ಕನ್ನಂಡಬಾಣೆ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಪೆರಾಜೆ ಗ್ರಾಮದ ಕುಂದಲ್ಪಾಡಿ ಪ್ರದೇಶದಲ್ಲಿ ಬರೆ ಕುಸಿದು ಟ್ರಾನ್ಸ್‌ಫಾರ್ಮರ್ ಮುರಿದು ಬಿದ್ದಿದ್ದು, ಬೇರೆ ಮಾರ್ಗದ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ವ್ಯಾಪಕ ಮಳೆ ಸುರಿಯುತ್ತಿದ್ದು, ಭಾಗಮಂಡಲ–ಅಯ್ಯಂಗೇರಿ ರಸ್ತೆಯಲ್ಲಿ ಮತ್ತೆ ಪ್ರವಾಹ ನೀರು ಹರಿಯುತ್ತಿದೆ. ಈ ರಸ್ತೆಯ ಮೇಲೆ ಅಡಿ ಅಡಿಗೂ ಹೆಚ್ಚು ಕಾವೇರಿ ನದಿ ಪ್ರವಾಹ ನೀರು ಹರಿಯುತ್ತಿದ್ದು ವಾಹನ ಸಂಚಾರ ಬಂದ್ ಮಾಡಲಾಗಿದೆ. ಸಾರ್ವಜನಿಕರ ಸಂಚಾರಕ್ಕಾಗಿ ಬೋಟ್‌ಗಳನ್ನು ಬಳಸಲಾಗುತ್ತಿದೆ. ಮಡಿಕೇರಿ–ಭಾಗಮಂಡಲ ರಸ್ತೆಯ ಮೇಲೆ 1 ಅಡಿ ನೀರು ಹರಿಯುತ್ತಿದ್ದು, ವಾಹನ ಸಂಚಾರಕ್ಕೆ ತೊಡಕಾಗಿಲ್ಲ. ಸ್ಥಳದಲ್ಲಿ ಗೃಹ ರಕ್ಷಕ ದಳದ ನುರಿತ ಈಜುಗಾರರನ್ನು ನಿಯೋಜಿಸಲಾಗಿದೆ. ಕಾವೇರಿ ಸೇರಿದಂತೆ ಜಿಲ್ಲೆಯ ನದಿಗಳಲ್ಲಿ ಪ್ರವಾಹದ ಪರಿಸ್ಥಿತಿ ಎದುರಾಗಿದ್ದು, ನದಿ ತೀರ ಹಾಗೂ ಬೆಟ್ಟ ಗುಡ್ಡಗಳ ವ್ಯಾಪ್ತಿಯ ನಿವಾಸಿಗಳಿಗೆ ಸುರಕ್ಷಿತ ಸ್ಥಳಗಳಿಗೆ ತೆರಳಲು ಈಗಾಗಲೇ ಸೂಚಿಸಲಾಗಿದೆ.

ಕಳೆದ 24 ಗಂಟೆಗಳ ಅವಧಿಯಲ್ಲಿ ಭಾರೀ ಮಳೆಗೆ 1 ಮನೆಗೆ ಬಹುತೇಕ ಹಾನಿಯಾಗಿದ್ದರೆ, 15 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ವಿಕೋಪ ಸಂಭವಿಸುವ ಸಾಧ್ಯತೆ ಇರುವ ಪ್ರದೇಶಗಳಿಂದ ಕಳೆದ 24 ಗಂಟೆಗಳ ಅವಧಿಯಲ್ಲಿ 20 ಕುಟುಂಬಗಳ 95 ಮಂದಿಯನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ಮಡಿಕೇರಿ ರೆಡ್ ಕ್ರಾಸ್ ಕಟ್ಟಡದಲ್ಲಿ 5 ಕುಟುಂಬಗಳ 17 ಮಂದಿ ಆಶ್ರಯ ಪಡೆದಿದ್ದಾರೆ. ವಿರಾಜಪೇಟೆಯ ತೋಮರ ಸರಕಾರಿ ಶಾಲೆಯಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರದಲ್ಲಿ 15 ಕುಟುಂಬಗಳ 36 ಮಂದಿ, ಸಂತ ಅಣ್ಣಮ್ಮ ಶಾಲೆಯಲ್ಲಿ 10 ಕುಟುಂಬಗಳ 35 ಮಂದಿ ಆಶ್ರಯ ಪಡೆದಿದ್ದಾರೆ. ಕುಶಾಲನಗರ ತಾಲೂಕಿನ ಸುಂಟಿಕೊಪ್ಪ ಹೋಬಳಿಯ ಪೊನ್ನತ್‌ಮೊಟ್ಟೆ ಸರಕಾರಿ ಶಾಲೆಯಲ್ಲಿ 7 ಕುಟುಂಬಗಳ 29 ಮಂದಿ ಆಶ್ರಯ ಪಡೆದಿದ್ದಾರೆ. ಗಾಳಿಗೆ ಮುರಿದು ಬಿದ್ದ ಮರಗಳಿಂದ 36 ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ಚೆಸ್ಕಾಂಗೆ 1.30 ಲಕ್ಷ ರೂ. ಹಾನಿಯಾಗಿದೆ ಎಂದು ಜಿಲ್ಲಾ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ.

ಬಿಜೆಪಿ ಚುನಾವಣಾ ಅಸ್ತ್ರ

ಪರಿವಾರದ ಕಾರ್ಯಕರ್ತರು ನೀಡಿರುವ ವರದಿಯನ್ನೇ ಆಧಾರವಾಗಿಟ್ಟುಕೊಂಡು ಎರಡು ದಿನಗಳ ಬೈಠಕ್ ನಡೆಯಲಿದೆ. ಸಭೆಯಲ್ಲಿ ಆರ್‌ಎಸ್‌ಎಸ್ ನಾಯಕರು ಚುನಾವಣೆ, ಸರ್ಕಾರದ ಕಾರ್ಯಕ್ರಮಗಳು, ಕೆಲವು ಸಚಿವರ ಮೇಲೆ ಬಂದಿ ರುವ ಭ್ರಷ್ಟಾಚಾರದ ಆರೋಪ ಸೇರಿದಂತೆ ಹಲವು ವಿಚಾರಗಳ ಬಗ್ಗೆಯು ಸಮಾಲೋಚನೆ ಮಾಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ರಾಜ್ಯ ಉಸ್ತುವಾರಿ ನೋಡಿ ಕೊಳ್ಳುವ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಕೂಡ ಸಭೆಯಲ್ಲಿ ಭಾಗವಹಿಸಲಿದ್ದು, ನಾಳೆಯಿಂದ ನಡೆಯಲಿರುವ ಎರಡು ದಿನಗಳ ಬೈಠಕ್‌ನಲ್ಲೇ ಮುಂಬರುವ ಚುನಾವಣೆಯ ಕಾರ್ಯಸೂಚಿಗಳು ಸಿದ್ಧವಾಗಲಿವೆ.

ಇದುವರೆಗೂ ಕರ್ನಾಟಕದಲ್ಲಿ ವ್ಯಕ್ತಿ ಆಧಾರದ ಮೇಲೆ ಚುನಾವಣೆ ನಡೆಯುತ್ತಿತ್ತು, ಆದರೆ ಮುಂದಿನ ಚುನಾವಣೆ ಹಿಂದುತ್ವ ಹಾಗೂ ಸಿದ್ಧಾಂತದ ಮೇಲೆ ನಡೆಯಬೇಕು. ಜನರ ನಾಡಿಮಿಡಿತದಿಂದಲೂ ಹಿಂದುತ್ವದ ಬಗ್ಗೆ ಹೆಚ್ಚು ಒತ್ತು ಬಂದಿದೆ. ಇದನ್ನೇ ಆಧಾರವಾಗಿಟ್ಟುಕೊಂಡು ಚುನಾವಣೆ ನಡೆಸಲು ಆರ್‌ಎಸ್‌ಎಸ್ ಮುಂದಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೆರೆಪೀಡಿತ ಪ್ರದೇಶಗಳಿಗೆ ಪ್ರವಾಸ ತೆರಳುವುದಕ್ಕೂ ಮುನ್ನ ಆರ್‌ಎಸ್‌ಎಸ್ ಪ್ರಮುಖ ನಾಯಕರೊಬ್ಬರು, ಮುಖ್ಯಮಂತ್ರಿಗಳನ್ನು ನಗರದ ಕೇಶವಕೃಪಾಕ್ಕೆ ಕರೆಸಿಕೊಂಡು ಸುಮಾರು ನಾಲ್ಕು ತಾಸು ಚರ್ಚೆ ಮಾಡಿದ್ದರು. ಈಗಾಗಲೇ ಆರ್‌ಎಸ್‌ಎಸ್‌ನ ಮುಖ್ಯಸ್ಥ ಭಾಗವತ್ ಅವರು ಕಳೆದ ಮೂರು ನಾಲ್ಕು ದಿನದಿಂದ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದಾರೆ.

ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ

ಮೈಸೂರು ಜಿಲ್ಲೆಗೆ 5 ಸುಸಜ್ಜಿತ ಆಂಬುಲೆನ್ಸ್ ವಿತರಣೆ



ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಐದು ಸುಸಜ್ಜಿತ ಆಂಬುಲೆನ್ಸ್‌ಗಳನ್ನು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಜಿಲ್ಲಾ ಆರೋಗ್ಯ ಇಲಾಖೆಗೆ ಹಸ್ತಾಂತರಿಸಿದರು. ಚಿತ್ರದಲ್ಲಿ ಶಾಸಕ ಎಲ್.ನಾಗೇಂದ್ರ, ಕಾರ್ಪೋರೇಟರ್ ಎಂ.ಯು.ಸುಬ್ಬಯ್ಯ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್, ಎಂಎಂಸಿ–ಆರ್‌ಐ ಡೀನ್ ಡಾ.ದಿನೇಶ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ನಂಜುಂಡಸ್ವಾಮಿ ಇನ್ನಿತರರನ್ನು ಕಾಣಬಹುದು.

ಮೈಸೂರು, ಜು.14(ಆರ್‌ಕೆಬಿ)– ಮೈಸೂರು ಜಿಲ್ಲೆಯ ನಾಗರಿಕರ ಆರೋಗ್ಯ ದೃಷ್ಟಿಯಲ್ಲಿಟ್ಟುಕೊಂಡು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ತಮ್ಮ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 1.42 ಕೋಟಿ ಅನುದಾನದಲ್ಲಿ ಮೈಸೂರು ಜಿಲ್ಲೆಗೆ ಐದು ಸುಸಜ್ಜಿತ ಆಂಬುಲೆನ್ಸ್ ನೀಡಿದ್ದಾರೆ.

ತಲಾ 22,50,000 ಮೌಲ್ಯದ ಮೂರು ಬಿಎಲ್‌ಎಸ್ (ಬೇಸಿಕ್ ಲೈಫ್ ಸಪೋರ್ಟ್) ಆಂಬುಲೆನ್ಸ್, ತಲಾ 37 ಲಕ್ಷ ಮೌಲ್ಯದ ಎರಡು ಎಎಲ್‌ಎಸ್ (ಅಡ್ವಾನ್ಸ್‌ಡ್ ಲೈಫ್ ಸಪೋರ್ಟ್) ಆಂಬುಲೆನ್ಸ್‌ಗಳನ್ನು ಸಂಸದ ಪ್ರತಾಪ್‌ಸಿಂಹ ಗುರುವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಆರೋಗ್ಯ ಇಲಾಖೆಗೆ ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ಅವರು, ಈಗ ನೀಡಲಾಗಿರುವ ಐದು ಆಂಬುಲೆನ್ಸ್‌ಗಳನ್ನು ಅಗತ್ಯಕ್ಕೆ ತಕ್ಕಂತೆ ಮೈಸೂರಿನ ಕೆ.ಆರ್.ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆಗಳಿಗೆ ಹಂಚಿಕೆ ಮಾಡಲಾಗಿದೆ ಎಂದರು.

2020ರಲ್ಲಿ ಕೋವಿಡ್ ಮಹಾಮಾರಿ ವ್ಯಾಪಕವಾಗಿದ್ದ ಸಂದರ್ಭದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವ ಕೆಲಸ ಸರ್ಕಾರದಿಂದ ಆಯಿತು. ಪ್ರಧಾನಿ ನರೇಂದ್ರ ಮೋದಿಯವರು ಸಹ ಆಸ್ಪತ್ರೆಗಳ ಉನ್ನತೀಕರಣಕ್ಕಾಗಿ ಒತ್ತು ನೀಡಿ ಹಣ ನೀಡಿದ್ದರು. ಈಗ ಸಂಸದರ ನಿಧಿಯಿಂದ 1,42,5000 ರೂ. ವೆಚ್ಚದಲ್ಲಿ ಐದು ಆಂಬುಲೆನ್ಸ್ ವಾಹನಗಳನ್ನು ನೀಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್, ಎಂಎಂಸಿ–ಆರ್‌ಐ ಡೀನ್ ಡಾ.ದಿನೇಶ್, ಕೆಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ನಂಜುಂಡ ಸ್ವಾಮಿ, ಕಾರ್ಪೋರೇಟರ್ ಎಂ.ಯು. ಸುಬ್ಬಯ್ಯ ಇನ್ನಿತರರು ಉಪಸ್ಥಿತರಿದ್ದರು.

ಕೊಡಗಲ್ಲಿ ಮಳೆ ತೀವ್ರತೆ, ಪ್ರವಾಹ ಪರಿಸ್ಥಿತಿ ನಿಯಂತ್ರಣದಲ್ಲಿದೆ: ಪ್ರತಾಪ್‌ಸಿಂಹ

ಕೊಡಗು ಜಿಲ್ಲೆಯಲ್ಲಿ ಮಳೆ ತೀವ್ರತೆ ಮತ್ತು ಪ್ರವಾಹ ಕಡಿಮೆಯಾಗಿದೆ. ಹಿಂದಿನ ವರ್ಷಗಳಿಗಿಂತ ಈ ವರ್ಷ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಸಣ್ಣಪುಟ್ಟ ಅವಘಡಗಳು ಸಂಭವಿಸಿವೆ. 53 ಮನೆಗಳು ಭಾಗಶಃ ಕುಸಿತವಾಗಿವೆ. ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾನಿಗೀಡಾದ ಪ್ರದೇಶಗಳಿಗೆ ಭೇಟಿ ನೀಡಿ ತಕ್ಷಣಕ್ಕೆ ಪರಿಹಾರ ಕಾರ್ಯಕ್ಕೆ ಸೂಚನೆಯನ್ನೂ ನೀಡಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ತಿಳಿಸಿದರು.

ಮೈಸೂರಿನಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮನೆಗೆ ನೀರು ನುಗ್ಗಿದವರಿಗೆ 3800 ರೂ. ನೀಡಲಾಗುತ್ತಿತ್ತು. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅದನ್ನು 10 ಸಾವಿರಕ್ಕೆ ಏರಿಸಿದ್ದರು. ತಕ್ಷಣಕ್ಕೆ 10 ಸಾವಿರ ರೂ. ಪರಿಹಾರ ನೀಡುತ್ತಿದ್ದೇವೆ. ಮನೆ ಕುಸಿತಗೊಂಡವರಿಗೆ ಎನ್‌ಡಿಆರ್‌ಎಫ್‌ನಲ್ಲಿ ರೂ. 95 ಸಾವಿರ ನೀಡಲಾಗುತ್ತಿತ್ತು ಅದಕ್ಕೆ ಉಳಿದ ಹಣ ಸೇರಿಸಿ 5 ಲಕ್ಷ ನೀಡುವುದಾಗಿ ಘೋಷಿಸಿದ್ದರು. ಅದನ್ನೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದುವರಿಸಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ

ಮುಖ್ಯಮಂತ್ರಿ ಯಾರೆಂಬುದು ಈಗ ಅಪ್ರಸ್ತುತ

ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ



ಮೈಸೂರು, ಜು.14(ಎಂಟಿವೈ)– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಆದರೆ, ಯಾರು ಮುಖ್ಯಮಂತ್ರಿ ಆಗಬೇಕೆಂಬುದು ಈಗ ಅಪ್ರಸ್ತುತ. ಚುನಾವಣೆ ಮುಗಿದ ಬಳಿಕ ಇದಕ್ಕೆ ಉತ್ತರ ಸಿಗಲಿದೆ. ಈಗ ಎಲ್ಲರೂ ಒಗ್ಗಟ್ಟಿನಿಂದ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಹೇಳಿದರು.

ಇಂದಿಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರದ ವೈಫಲ್ಯಗಳ ಸರಮಾಲೆಯೇ ಇದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ಕಂಗಾ ಲಾಗಿದ್ದಾರೆ. ಭ್ರಷ್ಟಾಚಾರ ಮಿತಿಮೀರಿದೆ. ಕೇಂದ್ರ, ರಾಜ್ಯ ಸರ್ಕಾರಗಳ ವೈಫಲ್ಯಗಳು ಕಾಂಗ್ರೆಸ್ ಪಕ್ಷಕ್ಕೆ ಪೂರಕ ವಾತಾವರಣ ನಿರ್ಮಿಸಿವೆ ಎಂದರು. ರಾಜ್ಯ ವಿಧಾನಸಭೆಗೆ ಅವಧಿಗೂ ಮುನ್ನಾ ಚುನಾವಣೆ ನಡೆದರೂ ಎದುರಿಸಲು ಕಾಂಗ್ರೆಸ್ ಸನ್ನದ್ಧವಾಗಿದೆ. ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ. ಮುಂಬರುವ ಚುನಾವಣೆ ದೃಷ್ಟಿಯಿಂದ ರಾಜ್ಯಾದ್ಯಂತ ಪಕ್ಷವನ್ನು ಸಂಘಟಿಸಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಿದ್ದರಾಮೋತ್ಸವ ಅಂದರೆ ಸಿದ್ದರಾಮಯ್ಯನವರ 75ನೇ ವರ್ಷದ ಅಮೃತ ಮಹೋತ್ಸವ. ಇದಕ್ಕಾಗಿ ಭರದ ಸಿದ್ಧತೆ ನಡೆಯುತ್ತಿದೆ. ಅಮೃತ ಮಹೋತ್ಸವ ಸಮಿತಿಗೆ ಮಾಜಿ ಸಚಿವ ಆರ್.ವಿ.ದೇಶಪಾಂಡೆ ಅಧ್ಯಕ್ಷರಾಗಿದ್ದು, ಸಂಸದ ಡಿ.ಕೆ.ಸುರೇಶ್ ಉಪಾಧ್ಯಕ್ಷರಾಗಿದ್ದಾರೆ. ಈ ಕಾರ್ಯಕ್ರಮಕ್ಕೆ ಕಾಂಗ್ರೆಸ್‌ನಲ್ಲಿ ವಿರೋಧ ವ್ಯಕ್ತವಾಗಿಲ್ಲ. ಆದರೆ ನಮ್ಮ ವಿರೋಧಿಗಳು ಈ ರೀತಿ ಬಿಂಬಿಸುತ್ತಿದ್ದಾರೆ ಎಂದು ಹೇಳಿದರು

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ದೆಹಲಿ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ರಾಹುಲ್ ಗಾಂಧಿಯವರ ನೇತೃತ್ವದಲ್ಲಿ 'ಭಾರತ್ ಜೋಡೊ' ಹೆಸರಿನಲ್ಲಿ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಈ ಪಾದಯಾತ್ರೆ ಸಾಗಲಿದೆ. ಕರ್ನಾಟಕದಲ್ಲೂ ರಾಹುಲ್ ಗಾಂಧಿ ಪಾದಯಾತ್ರೆ ಮಾಡಲಿದ್ದಾರೆ. ಹೀಗಾಗಿ ಕರ್ನಾಟಕದಲ್ಲಿ ಯಾವ ಮಾರ್ಗದಲ್ಲಿ ಪಾದಯಾತ್ರೆ ಸಾಗಬೇಕು ಎಂದು ಚರ್ಚಿಸುವ ಸಲುವಾಗಿ ಡಿ.ಕೆ.ಶಿವಕುಮಾರ್ ದೆಹಲಿಗೆ ಹೋಗಿದ್ದಾರೆ ಎಂದು ತಿಳಿಸಿದರು.

> ಸಾಹಿತಿ ದೇವನೂರ ಮಹಾದೇವ ಬರೆದಿರುವ **'ಆರ್‌ಎಸ್‌ಎಸ್: ಆಳ ಮತ್ತು ಅಗಲ' ಕೃತಿಯು ವಾಸ್ತವಾಂಶವನ್ನು ತೆರೆದಿಟ್ಟಿದೆ. ಗೋಲ್ವಾಲ್ಕರ್ ಕುರಿತು ದಿನಾಂಕಗಳ ಸಮೇತ ಉಲ್ಲೇಖಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಟೀಕೆ ಟಿಪ್ಪಣಿಗಳು ಸಹಜ. ಇವರು ವಾಸ್ತವಾಂಶವನ್ನು ಅನಾವರಣಗೊಳಿಸುವ ಕೆಲಸ ಮಾಡಿದ್ದಾರೆ. ಈ ಬಗ್ಗೆ ಸಂಸದ ವಿ.ಶ್ರೀನಿವಾಸಪ್ರಸಾಸ್ ನೀಡಿರುವ ಹೇಳಿಕೆಗೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ.**
> **- ಆರ್.ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷ**

ಮದುವೆಯಾಗುವುದಾಗಿ ನಂಬಿಸಿ ಮಹಿಳೆಗೆ 6 ಲಕ್ಷ ರೂ.ವಂಚನೆ

ಸಾರ್ವಜನಿಕರ ಸಹಕಾರದಿಂದ ಆರೋಪಿಗಳ ಹಿಡಿದು ಪೋಲೀಸರಿಗೆ ಒಪ್ಪಿಸಿದ ಸಂತ್ರಸ್ತ ಮಹಿಳೆ


ಮಂಡ್ಯ, ಜು.14– ಮದುವೆಯಾಗುವುದಾಗಿ ನಂಬಿಸಿ 6 ಲಕ್ಷರೂ. ವಂಚಿಸಿದ ವಂಚಕ ಹಾಗೂ ಆತನ ಸ್ನೇಹಿತನನ್ನು ವಿಧವಾ ಮಹಿಳೆಯೋರ್ವಳು ಸಾರ್ವಜನಿಕರ ಸಹಕಾರದಿಂದ ಹಿಡಿದು ಪೋಲೀಸರಿಗೆ ಒಪ್ಪಿಸಿದ ಘಟನೆ ಮಂಡ್ಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ವಿವರ: ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಕೊರೊನಾದಿಂದ ಮೃತಪಟ್ಟಿದ್ದು, ಅನುಕಂಪದ ಆಧಾರದ ಮೇಲೆ ಅವರ ಪತ್ನಿಗೆ ಆ ಕೆಲಸ ದೊರೆತಿದೆ. ಈ ಮಹಿಳೆಗೆ ಫೇಸ್‌ಬುಕ್ ಮೂಲಕ ಪರಿಚಯವಾದ ಚಂದಗಾಲು ಗ್ರಾಮದ ರಂಜನ್ ಎಂಬಾತ ಈಕೆಯನ್ನು ಮದುವೆಯಾಗಿ, ಆಕೆಯ ಮಕ್ಕಳನ್ನು ನೋಡಿಕೊಳ್ಳುವುದಾಗಿ ನಂಬಿಸಿ, ವಿಶ್ವಾಸ ಗಳಿಸಿದ್ದಾನೆ. ನಂತರ ಹಲವಾರು ನೆಪಗಳನ್ನು ಹೇಳಿ ತನ್ನ ಸ್ನೇಹಿತರಾದ ಯತೀಶ್, ನಾಗೇಶ್, ಬಾಲರಾಜು, ಧನುಷ್ ಹಾಗೂ ತನ್ನ ಫೋನ್ ಪೇಗೆ ಹಂತ– ಹಂತವಾಗಿ 6 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡಿದ್ದಲ್ಲದೇ, ಮಹಿಳೆಯಿಂದ 5 ಗ್ರಾಂ ತೂಕದ ಚಿನ್ನದ ಓಲೆಯನ್ನು ಕೂಡ ಪಡೆದುಕೊಂಡಿದ್ದಾನೆ.

ಆ ನಂತರ ಮದುವೆಯೂ ಆಗದೆ, ಹಣವನ್ನು ವಾಪಸ್ ಕೊಡದೆ, ಮಹಿಳೆಯ ಸಂಪರ್ಕಕ್ಕೂ ಸಿಗದೆ ವಂಚಿಸಿದ್ದ ಎನ್ನಲಾಗಿದ್ದು, ಈಕೆ ಜು.12ರಂದು ಸಂಜೆ ಕೆಲಸ ಮುಗಿಸಿಕೊಂಡು ಸ್ವಗ್ರಾಮಕ್ಕೆ ಹೋಗಲು ಕೆಎಸ್‌ಆರ್‌ಟಿಸ್ ಬಸ್ ನಿಲ್ದಾಣಕ್ಕೆ ಬಂದಾಗ ಅಲ್ಲಿ ವಂಚಕ ರಂಜನ್ ಮತ್ತು ಆತನ ಸ್ನೇಹಿತ ಕಂಚಿಕೇರೆ ಗ್ರಾಮದ ನಾಗೇಶ್ ಮಹಿಳೆಗೆ ಸಿಕ್ಕಿಬಿದ್ದಿದ್ದಾರೆ. ತಕ್ಷಣವೇ ಆಕೆ ಸಾರ್ವಜನಿಕರಿಗೆ ವಿಷಯ ತಿಳಿಸಿ, ಇಬ್ಬರನ್ನು ಹಿಡಿದು ಮಂಡ್ಯ ಪಶ್ಚಿಮ ಠಾಣಾ ಪೋಲೀಸರಿಗೆ ಒಪ್ಪಿಸಿದ್ದಾಳೆ. ಈತ ತನಗೆ ಮಾತ್ರವಲ್ಲದೆ ಮಂಡ್ಯದ ಗಾಂಧಿನಗರ, ಎತ್ತಗದಹಳ್ಳಿ ಹಾಗೂ ಕುಂಬಳಗೋಡಿನ ಯುವತಿಯರನ್ನೂ ನಂಬಿಸಿ ಹಣ ಮತ್ತು ಚಿನ್ನಾಭರಣಗಳ ಪಡೆದು ಮೋಸ ಮಾಡಿದ್ದಾನೆ ಎಂದು ಪೋಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಮಂಡ್ಯ ಪಶ್ಚಿಮ ಠಾಣೆಯ ಪೋಲೀಸರು ಇಬ್ಬರನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

---

18 ರಿಂದ 59 ವರ್ಷದವರಿಗೆ ಉಚಿತವಾಗಿ ಬೂಸ್ಟರ್ ಡೋಸ್



ಮೈಸೂರು, ಜು.14(ಆರ್‌ಕೆ)– ನಾಳೆ(ಜು.15)ಯಿಂದ 18 ರಿಂದ 59 ವರ್ಷ ವಯಸ್ಸಿನವರಿಗೆ ಉಚಿತವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಬೂಸ್ಟರ್ ಡೋಸ್ ಲಸಿಕೆ ನೀಡುವುದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಪ್ರಕಟಿಸಿವೆ.

75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಶುಕ್ರವಾರದಿಂದ 75 ದಿನಗಳವರೆಗೆ ಸಾರ್ವಜನಿಕರಿಗೆ ಬೂಸ್ಟರ್ ಡೋಸ್ ನೀಡಬೇಕೆಂದು ತಿಳಿಸಲಾಗಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲೂಕು ಹಾಗೂ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಉಚಿತವಾಗಿ ಬೂಸ್ಟರ್ ಡೋಸ್ ನೀಡಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ಎರಡನೇ ಡೋಸ್ ಲಸಿಕೆ ಪಡೆದು 6 ತಿಂಗಳು ಪೂರ್ಣಗೊಂಡಿರುವ ಆರೋಗ್ಯ ಕಾರ್ಯಕರ್ತರು, ಪೊಲೀಸ್ ಸಿಬ್ಬಂದಿ, ಫ್ರಂಟ್‌ಲೈನ್ ವರ್ಕರ್‌ಗಳು ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮಾತ್ರ ಈವರೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಬೂಸ್ಟರ್ ಡೋಸ್ ಲಸಿಕೆ ನೀಡಲಾಗುತ್ತಿತ್ತು ಇದೀಗ ಎಲ್ಲೆಡೆ ಅಲ್ಲಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳು ಕಾಣಿಸಿಕೊಳ್ಳುತ್ತಿರುವುದರಿಂದ ಸರ್ಕಾರವು 2ನೇ ಡೋಸ್ ಲಸಿಕೆ ಪಡೆದು 6 ತಿಂಗಳು ಪೂರೈಸಿರುವ 18 ರಿಂದ 59 ವರ್ಷ ವಯಸ್ಸಿನ ಎಲ್ಲರಿಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ 3ನೇ ಡೋಸ್ (ಬೂಸ್ಟರ್ ಡೋಸ್) ನೀಡಲಾಗುತ್ತಿದೆ.

ಈ ಕುರಿತು ಬೆಂಗಳೂರಲ್ಲಿ ಆರೋಗ್ಯ ಸಚಿವರು ಹೇಳಿಕೆ ನೀಡಿದ್ದರು. ನಾಳೆ (ಜು.15)ಯಿಂದ ಬೂಸ್ಟರ್ ಡೋಸ್ ನೀಡುವ ಬಗ್ಗೆ ಸರ್ಕಾರದಿಂದ ಸುತ್ತೋಲೆ ಬಂದಿಲ್ಲ. ನಾಳೆ (ಶುಕ್ರವಾರ) ನಿರ್ದೇಶನ ಬರಬಹುದೆಂದು ನಿರೀಕ್ಷಿಸಲಾಗಿದೆ. ಬಂದಲ್ಲಿ ಶನಿವಾರದಿಂದ 18 ರಿಂದ 59 ವರ್ಷ ವಯಸ್ಸಿನವರಿಗೂ ಬೂಸ್ಟರ್ ಡೋಸ್, ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ನೀಡುತ್ತೇವೆ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜುಲೈ 15 ರಿಂದಲೇ ಬೂಸ್ಟರ್ ಡೋಸ್ ನೀಡುವ ಬಗ್ಗೆ ಸಚಿವರು ಬೆಂಗಳೂರಲ್ಲಿ ಹೇಳಿಕೆ ನೀಡಿರುವುದನ್ನು ಹೊರತು ಪಡಿಸಿದರೆ, ಈವರೆಗೆ ಸರ್ಕಾರದಿಂದ ನಮಗೆ ಯಾವುದೇ ಅಧಿಕೃತ ನಿರ್ದೇಶನ ಬಂದಿಲ್ಲ. ಇಂದು ಇಲಾಖೆ ಪ್ರಧಾನ ಕಾರ್ಯದರ್ಶಿಗಳು ನಡೆಸಿದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲೂ ಈ ಕುರಿತು ಪ್ರಸ್ತಾಪಿಸಲಿಲ್ಲ. ನಾಳೆ (ಜು.15) ಲಿಖಿತ ಸೂಚನೆ ಬರಬಹುದು. ಲಸಿಕೆಯೂ ಬಂದಲ್ಲಿ ಸಿದ್ಧತೆ ಮಾಡಿಕೊಂಡು ಜುಲೈ 16 ರಿಂದ ಬೂಸ್ಟರ್ ಡೋಸ್ ಅನ್ನು 18 ವರ್ಷ ಮೇಲ್ಪಟ್ಟವರಿಗೂ ನೀಡುತ್ತೇವೆ ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್ ತಿಳಿಸಿದರು.

ಎಟಿಎಂ ಕಾರ್ಡ್ ನವೀಕರಿಸುವ ನೆಪದಲ್ಲಿ ಉಪನ್ಯಾಸಕಿ ಖಾತೆಗೆ ಕನ್ನ

99 ಸಾವಿರ ಡ್ರಾ ಮಾಡಿ ವಂಚನೆ

ಮಂಡ್ಯ, ಜು.14– ಎಟಿಎಂ ಕಾರ್ಡ್‌ನ ನವೀಕರಿಸಬೇಕೆಂದು ಬ್ಯಾಂಕ್ ಮ್ಯಾನೇಜರ್ ಹೆಸರಿನಲ್ಲಿ ಕರೆ ಮಾಡಿ, ಒಟಿಪಿ ಪಡೆದು ಉಪನ್ಯಾಸಕರೊಬ್ಬರ ಖಾತೆಯಿಂದ 99 ಸಾವಿರ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ.

ನಾಗಮಂಗಲ ತಾಲೂಕು ಬೆಳ್ಳೂರು ಕ್ರಾಸ್‌ನ ಬಿ.ಜಿ.ನಗರ ಆಸ್ಪತ್ರೆ ಕ್ವಾರ್ಟರ್ಸ್‌ನಲ್ಲಿ ವಾಸವಿರುವ ಉಪನ್ಯಾಸಕಿ ಎನ್.ಹೆಚ್.ವೀಣಾ(47) ಅವರ ಮೊಬೈಲ್‌ಗೆ 9348860498 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತನ್ನನ್ನು ಕೆನರಾ ಬ್ಯಾಂಕ್‌ನ ಅಸಿಸ್ಟೆಂಟ್ ಮ್ಯಾನೇಜರ್ ಎಂದು ಪರಿಚಯಿಸಿಕೊಂಡು ಕೆನರಾ ಬ್ಯಾಂಕ್ ಈಗ ಆಕ್ಸಿಸ್ ಬ್ಯಾಂಕ್ ಆಗಿದೆ. ಹೀಗಾಗಿ, ನಿಮ್ಮ ಎಟಿಎಂ ಕಾರ್ಡ್ ಬ್ಲಾಕ್ ಆಗಿದ್ದು, ಅದನ್ನು ರಿನೀವಲ್ ಮಾಡಬೇಕು. ನಿಮ್ಮ ಮೊಬೈಲ್‌ಗೆ ಬರುವ ಒಟಿಪಿ ತಿಳಿಸಿ ಎಂದು ಕೇಳಿದ್ದಾನೆ. ಅದನ್ನು ನಂಬಿದ ವೀಣಾ ಅವರು ಒಟಿಪಿ ಹೇಳಿದಾಗ ಅವರ ಖಾತೆಯಿಂದ ಹಂತ–ಹಂತವಾಗಿ 99,485 ರೂ. ಕಡಿತಗೊಂಡಿದೆ ಈ ಸಂಬಂಧ ಮಂಡ್ಯ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಯಾಂಕ್‌ನ ಜನರೇಟರ್, ಕ್ಯಾಮರಾ ಕಳವು

ಮಳವಳ್ಳಿ, ಜು.14– ಬ್ಯಾಂಕ್‌ನ ಮೆಟ್ಟಿಲಿನ ಕೆಳಗೆ ಅಳವಡಿಸಿದ್ದ ಜನರೇಟರ್ ಮತ್ತು ಸಿಸಿ ಕ್ಯಾಮರಾಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಕರ್ನಾಟಕ ಬ್ಯಾಂಕ್ ಮಳವಳ್ಳಿ ಶಾಖೆಯ ಮೆಟ್ಟಿಲಿನ ಕೆಳಗೆ ಕಬ್ಬಿಣದ ಗೇಟ್‌ಗೆ ಹಾಕಿದ್ದ ಬೀಗ ಮುರಿದು ಜನರೇಟರ್ ಕಳವು ಮಾಡಿರುವುದನ್ನು ಬ್ಯಾಂಕ್ ಸಿಬ್ಬಂದಿ ಜು.13ರಂದು ಬೆಳಗ್ಗೆ ಗಮನಿಸಿದ್ದಾರೆ. ಖದೀಮರು ಬ್ಯಾಂಕ್‌ನ ಮುಂಭಾಗ ಅಳವಡಿಸಿದ್ದ ಸಿಸಿ ಕ್ಯಾಮರವನ್ನು ಕೂಡ ಕದ್ದೊಯ್ದಿದ್ದಾರೆ. ಈ ಸಂಬಂಧ ಬ್ಯಾಂಕ್ ಮ್ಯಾನೇಜರ್ ಎಸ್.ಡಿ.ಚಿಕ್ಕಣ್ಣ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಳವಳ್ಳಿ ಟೌನ್ ಠಾಣೆಯ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಮಹಾರಾಜ ಪ್ರೌಢಶಾಲಾ ಕಟ್ಟಡ ದುರಸ್ತಿಗೆ ಆಗ್ರಹಿಸಿ ಅ.2ರಿಂದ ಉಪವಾಸ



ಮುಮ್ಮಡಿ ಕೃಷ್ಣರಾಜ ಒಡೆಯರ್ ಜನ್ಮದಿನದ ಹಿನ್ನೆಲೆಯಲ್ಲಿ ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಗೆ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಲಾಯಿತು.

ಮೈಸೂರು,ಜು.14(ಎಂಟಿವೈ)– ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಮಹಾರಾಜ ಪ್ರೌಢಶಾಲೆ ಶಿಥಿಲಗೊಳ್ಳುತ್ತಿದ್ದು, ಕಟ್ಟಡದ ದುರಸ್ತಿಗಾಗಿ ಆಗ್ರಹಿಸಿ ಮಹಾತ್ಮಗಾಂಧಿ ಜಯಂತಿ ದಿನ(ಅ.2)ದಂದು ಕಾಲೇಜಿನ ಮುಂದೆ ಉಪವಾಸ ಸತ್ಯಾಗ್ರಹ ಆರಂಭಿಸಲು ನಿರ್ಧರಿಸಿರುವುದಾಗಿ ಮಹಾರಾಜ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬಿ.ಎಸ್. ಶ್ರೀಧರ್ ರಾಜ ಅರಸ್ ತಿಳಿಸಿದ್ದಾರೆ.

ಯದುವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಪ್ರೌಢಶಾಲೆಯ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಗೆ ಹಳೆಯ ವಿದ್ಯಾರ್ಥಿಗಳ ಸಂಘ, ಮಹಾರಾಜ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಮಾಲಾರ್ಪಣೆ ಮಾಡಿ ಗೌರವಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದರು.

ಮೈಸೂರು ಮಹಾರಾಜರ ಕಾಲದಲ್ಲಿ ಸ್ಥಾಪಿತವಾದ ಮಹಾರಾಜ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜಿಗೆ 189 ವರ್ಷದ ಇತಿಹಾಸವಿದೆ. ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿ, ಲಕ್ಷಾಂತರ ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಮೈಸೂರು ಅರಸರು ನೀಡಿದ ಕೊಡುಗೆ ಸ್ಮರಿಸುವ ನಿಟ್ಟಿನಲ್ಲಿ ಮಹಾರಾಜ ಪದವಿ ಪೂರ್ವ ಕಾಲೇಜಿನ ಮುಂಭಾಗದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ ಸ್ಥಾಪಿಸಲಾಗಿದೆ. ಮೈಸೂರಲ್ಲಿ ಬೇರೆ ಯಾವ ಸ್ಥಳದಲ್ಲೂ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ ಇಲ್ಲ. ಇಂದು ಅವರ 228ನೇ ಜನ್ಮದಿನವಾಗಿದ್ದು, ಈ ಹಿನ್ನೆಲೆಯಲ್ಲಿ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ಮಾಲಾರ್ಪಣೆ ಮಾಡಿ ಗೌರವ ಸಮರ್ಪಿಸಲಾಗಿದೆ ಎಂದರು.

ಈ ಕಾಲೇಜಿನ ಕಟ್ಟಡ ಶಿಥಿಲಾವಸ್ಥೆ ತಲುಪಿತ್ತು. ಹಲವು ವರ್ಷಗಳ ಹೋರಾಟದ ಬಳಿಕ ನಾಲ್ಕು ಕೋಟಿ ರೂ. ವೆಚ್ಚದಲ್ಲಿ ಕಾಲೇಜಿನ ಮುಂಭಾಗದ ಕಟ್ಟಡವನ್ನು ದುರಸ್ತಿ ಮಾಡಲಾಗಿದೆ. ಆದರೆ ಪ್ರೌಢಶಾಲೆ ಕಟ್ಟಡ ಶಿಥಿಲಗೊಂಡಿದ್ದು, ಅದರ ದುರಸ್ತಿಗಾಗಿ 2018ರಿಂದಲೂ ಮನವಿ ಸಲ್ಲಿಸಲಾಗುತ್ತಿದೆ. ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಸೂಚನೆಯ ಮೇರೆಗೆ ಸಾರ್ವಜನಿಕ ಕೆಲಸಗಳ ಇಲಾಖೆಯ ಅಧಿಕಾರಿಗಳ ತಂಡ ಕಟ್ಟಡವನ್ನು ಪರಿಶೀಲಿಸಿ, ದುರಸ್ತಿ ಮಾಡಿ, ಬಣ್ಣ ಬಳಿಯುವುದಕ್ಕೆ 1.4 ಕೋಟಿ ರೂ.ಗಳ ಅಂದಾಜು ಪಟ್ಟಿ ಸಲ್ಲಿಸಿದೆ. ಆದರೆ, ಇದುವರೆಗೂ ದುರಸ್ತಿ ಕಾರ್ಯ ಆರಂಭಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವಿಷಾದಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಲ್. ನಾಗೇಂದ್ರ ಶಾಲೆಯ ಕಟ್ಟಡ ಪರಿಶೀಲಿಸಬೇಕು. ಕಟ್ಟಡ ವಾಸ್ತವ ಸಂಗತಿ ಅರಿತು, ತುರ್ತಾಗಿ ದುರಸ್ತಿ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹಾರಾಜ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ಗೌರವಾಧ್ಯಕ್ಷ ಡಾ.ಎನ್.ಚಂದ್ರಶೇಖರ್, ಕಾರ್ಯದರ್ಶಿ ಎಂ.ಆರ್.ಸುರೇಶ್, ಖಜಾಂಚಿ ರಂಗಸ್ವಾಮಿ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಉದಯ್ ಕುಮಾರ್, ಉಪಪ್ರಾಂಶುಪಾಲ ಮಹೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಬಸವಣ್ಣನವರ ಅನುಭವ ಮಂಟಪದ ಕಲ್ಪನೆ ಕಟ್ಟಿಕೊಡುವ ಸ್ಥಳವಿದ್ದರೆ ಅದು

ಡಿ.ದೇವರಾಜ ಅರಸರ ಜನ್ಮಭೂಮಿ ಹುಣಸೂರು

ಬಸವ ಜಯಂತಿ ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಭಕ್ತಿ ನುಡಿ



ಹುಣಸೂರು, ಜು.14– ಕರ್ನಾಟಕದಲ್ಲಿ ಬಸವಣ್ಣನವರ ಅನುಭವ ಮಂಟಪದ ಕಲ್ಪನೆ ಕಟ್ಟಿಕೊಡುವ ಸ್ಥಳ ಯಾವುದಾದರೂ ಇದ್ದರೆ ಅದು ದೇವರಾಜ ಅರಸರ ಜನ್ಮ ಭೂಮಿ ಹುಣಸೂರು ಮಾತ್ರ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ನುಡಿದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ಹುಣಸೂರಿನ ಬಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಗುರುವಾರ ನಡೆದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲೇ ಹುಣಸೂರು ಪ್ರತಿಷ್ಠಿತ ಕ್ಷೇತ್ರವಾಗಿದ್ದು, ಅನುಭವ ಮಂಟಪದ ಕಲ್ಪನೆಯ ಎಲ್ಲಾ ಶರಣರ ಸಮುದಾಯಗಳೂ ಹುಣಸೂರಿನಲ್ಲಿವೆ. ಅದರಲ್ಲೂ ಕಾಯಕ ಸಮುದಾಯಗಳು, ಆದಿವಾಸಿ ಸಮುದಾಯ ಹಾಗೂ ಅಲೆಮಾರಿ ಸಮುದಾಯಗಳು ಈ ತಾಲೂಕಿನಲ್ಲಿರುವುದರಿಂದ ಹುಣಸೂರು ಅಣ್ಣ ಬಸವಣ್ಣನವರ ಕಲ್ಪನೆಯ ಅನುಭವ ಮಂಟಪ ಎಂದು ನಾನು ಕರೆಯುತ್ತಿದ್ದೇನೆ. ಬಹುಶಃ ಇದರ ಪ್ರೇರಣೆಯೇ ದಿವಂಗತ ದೇವರಾಜ ಅರಸರಿಗೆ ದೊರೆತಿರಬೇಕೆಂಬುದು ನನ್ನ ಭಾವನೆ. ಆ ಕಾರಣಕ್ಕಾಗಿಯೇ ಬಸವಣ್ಣನವರ ಸಾಮಾಜಿಕ ಕ್ರಾಂತಿಯನ್ನು ಅರಸರು ಅವರ ಆಡಳಿತದಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆ ಎಂದರು.

ಇಂದು ಅರಸರ ಚಿಂತನೆ ಹಾಗೂ ಬಸವಣ್ಣನವರ ತತ್ವದ ಅನುಸರಣೆ ಕಾಣುವುದು ಬಲು ಅಪರೂಪ. ಬಸವಣ್ಣನವರು ಅಂದಿಗೂ, ಇಂದಿಗೂ, ಎಂದೆಂದಿಗೂ ವಿಶ್ವಗುರುವಾಗಿ ಏಕೆ ನಿಲ್ಲುತ್ತಾರೆ ಎಂದರೆ ಅವರ ಕಾಯಕ ಕ್ರಾಂತಿ, ಅನುಸರಿಸಿದವರು ಸ್ವಾಭಿಮಾನಿಗಳಾಗಿ ಎದ್ದು ನಿಲ್ಲುತ್ತಾರೆ. ಜನರ ಕಲ್ಯಾಣಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ. ಇವತ್ತು ಯಡಿಯೂರಪ್ಪನವರಲ್ಲಿ ಜನಕಲ್ಯಾಣದ ಬದ್ಧತೆ ಬಂದಿದ್ದರೆ, ಸ್ವಾಭಿಮಾನದ ಕಿಚ್ಚು ಅವರ ರಕ್ತದ ಕಣ ಕಣದಲ್ಲಿ ತುಂಬಿಕೊಂಡಿದ್ದರೆ ಅದಕ್ಕೆ ಕಾರಣವೇ ಅವರು ಬಸವತತ್ವ ಅನುಸರಿಸಿದ್ದು ಎಂದು ನುಡಿದರು.

ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಮಾತನಾಡಿ, ಹುಣಸೂರು ರಾಜ್ಯದಲ್ಲೇ ವಿಶಿಷ್ಟ ಕ್ಷೇತ್ರವಾಗಿದೆ. ಕ್ಷೇತ್ರದಲ್ಲಿ ಎಲ್ಲಾ ಸಮಾಜವನ್ನು ಒಗ್ಗೂಡಿಸಿ ಬಸವ ಜಯಂತಿ ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಪ್ರಧಾನಿ ಮೋದಿ ಅವರು, ಇಂಗ್ಲೆಂಡಿನಲ್ಲಿ ಬಸವಣ್ಣನವರ ಪ್ರತಿಮೆ ಉದ್ಘಾಟಿಸಿರುವುದು ಶ್ಲಾಘನೀಯ ಎಂದರು. ಶಾಸಕ ಎಸ್. ನಿರಂಜನ್ ಕುಮಾರ್ ಮಾತನಾಡಿ, ವಿಶ್ವಗುರು ಬಸವಣ್ಣನವರ ತತ್ವ ಸಿದ್ಧಾಂತಗಳು ಸರ್ವಕಾಲಕ್ಕೂ ಸಮಾಜದ ಮಾರ್ಗದರ್ಶಕಗಳಾಗಿವೆ. ಬಸವಣ್ಣನವರ ಕಾಯಕವೇ ಕೈಲಾಸ ನುಡಿಯನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ನೈತಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಬಸವಣ್ಣನವರು ಕಲ್ಯಾಣ ಕ್ರಾಂತಿ ನಡೆಸಿದರು. ಇವನಾರವ ಇವನಾರವ ಎನ್ನದಿರು, ಇವ ನಮ್ಮವ ಇವ ನಮ್ಮವ ಎನ್ನುವ ಬಸವಣ್ಣನವರ ತತ್ವ ನೀತಿ ಜಗತ್ತಿಗೆ ಸಾರಿದ ಸಾಮಾಜಿಕ ಸಂದೇಶವಾಗಿದೆ. ಶರಣರ–ದಾಸರ ತವರೂರಾದ ನಮ್ಮ ನಾಡಿನಲ್ಲಿ ಬಸವಣ್ಣನವರು ಸಾಮಾಜಿಕ ಕ್ರಾಂತಿ ಮೂಲಕ ಜಾತಿ ಭೇದವಿಲ್ಲದೆ ಎಲ್ಲರನ್ನು ಒಟ್ಟುಗೂಡಿಸಿದ ಮಹಾಪುರುಷ ಬಸವಣ್ಣ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಚ್. ವಿಜಯ್‌ಶಂಕರ್, ಹೆಚ್.ಪಿ.ಮಂಜುನಾಥ್ ಮಾತನಾಡಿದರು. ನಂದೀಶ್ ಹಂಚೆ ಬಸವಣ್ಣನವರ ಕುರಿತು ಪ್ರಧಾನ ಭಾಷಣ ಮಾಡಿದರು. ಸುತ್ತೂರಿನ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗಾವಡಗೆರೆ ಮಠದ ನಟರಾಜ ಸ್ವಾಮಿ, ಮಾದಳ್ಳಿ ಮಠದ ಸಾಂಬಸದಾಶಿವ ಸ್ವಾಮೀಜಿ ಆಶೀರ್ವಚನ ನೀಡಿದರು. ಕೌಟಿಲ್ಯ ರಘು, ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್, ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಒಳಚರಂಡಿ ಇಲಾಖೆ ಆರ್.ಟಿ.ಸತೀಶ್, ರಮೇಶ್, ಚೆಸ್ಕಾಂ ಎಇಇ ಸಿದ್ದಪ್ಪ, ವಸ್ತು ಪ್ರದರ್ಶನ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಮಹದೇವಸ್ವಾಮಿ, ಜಿಪಂ ಮಾಜಿ ಉಪಾಧ್ಯಕ್ಷೆ ಗೌರಮ್ಮ, ಸಂವಿಧಾನ ಚಿಂತಕರು ಹಾಗೂ ನಿವೃತ್ತ ಪ್ರಾಂಶುಪಾಲ ಮಹೇಶ್ ಆರಾಧ್ಯ, ನಾಗರಾಜ್ ಮಲ್ಲಾಡಿ, ಅಣ್ಣಯ್ಯ ನಾಯ್ಕ ಸುಮ ಇನ್ನಿತರರಿದ್ದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನಾ ಬಸವಣ್ಣನವರ ಭಾವಚಿತ್ರವನ್ನು ನಗರದ ಮಂಜುನಾಥ ಬಡಾವಣೆ ಶ್ರೀಆಂಜನೇಯಸ್ವಾಮಿ ದೇವಸ್ಥಾನದಿಂದ ಮುನೇಶ್ವರ ಕಾವಲ್ ಮೈದಾನದವರೆಗೆ ಮೆರವಣಿಗೆ ಮಾಡಲಾಯಿತು.

ಈ ವೇಳೆ ತಹಸೀಲ್ದಾರ್ ಡಾ.ಅಶೋಕ್ ಕುಮಾರ್, ಪೌರಾಯುಕ್ತ ರವಿಕುಮಾರ್, ಬಿಜೆಪಿ ತಾಲೂಕು ಅಧ್ಯಕ್ಷ ನಾಗಣ್ಣ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ರಮೇಶ್‌ಕುಮಾರ್, ಸಂಘದ ಗೌರವಾಧ್ಯಕ್ಷ ಡಾ.ವೃಷಬೇಂದ್ರಸ್ವಾಮಿ, ಸೋಮಶೇಖರ್, ಬಸವರಾಜು, ಭಾಗ್ಯ ಕುಮಾರ್ ಇನ್ನಿತರರಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 5000 ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

> ಪ್ರಧಾನಿ ಮೋದಿಯವರು ಸಹ ಬಸವಣ್ಣನವರ ತತ್ವ ಅನುಸರಿಸಿ ಮುನ್ನಡೆಯುತ್ತಿದ್ದಾರೆ. ಅವರ ಆತ್ಮ ನಿರ್ಭರ ಭಾರತದ ಕಲ್ಪನೆಗೆ ಪ್ರೇರಣೆಯೇ ಬಸವಣ್ಣನವರು. ಬಸವಣ್ಣ ನಮ್ಮ ಕನ್ನಡ ನಾಡಿನ ಹೆಮ್ಮೆಯ ಸಂಕೇತ. ಬಸವಣ್ಣನವರ ಕಲ್ಪನೆಯ ಕಾಯಕ ಯೋಗಿಯಾಗಿ ಅವತಾರವೆತ್ತಿದವರು. ಈ ನೆಲದ ನಡೆದಾಡುವ ದೇವರಾಗಿದ್ದ ಸಿದ್ದಗಂಗಾ ಶ್ರೀಗಳಾದ ಡಾ.ಶಿವಕುಮಾರ ಮಹಾಸ್ವಾಮೀಜಿಗಳನ್ನು ಈ ಸಂದರ್ಭ ಭಕ್ತಿಯಿಂದ ಸ್ಮರಿಸುತ್ತೇನೆ.
> – ಬಿ.ವೈ.ವಿಜಯೇಂದ್ರ, ರಾಜ್ಯ ಬಿಜೆಪಿ ಉಪಾಧ್ಯಕ್ಷ.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ಪಿರಿಯಾಪಟ್ಟಣ, ಜು.14– ತಾಲೂಕಿನ ಎನ್.ಶೆಟ್ಟಹಳ್ಳಿ ಹಾಗೂ ಸಂಗರಶೆಟ್ಟಳ್ಳಿ ಕಾಲೋನಿಯಲ್ಲಿ ತಲಾ 24 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನ ಈ ಗ್ರಾಮಗಳಲ್ಲಿ ಅಭಿವೃದ್ಧಿ ಕುಂಠಿತವಾಗಿತ್ತು. ಇದನ್ನರಿತು ಕ್ರಿಯಾಯೋಜನೆ ತಯಾರಿಸಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮದ ಪ್ರತಿಯೊಂದು ರಸ್ತೆಗಳನ್ನು ಹಂತ ಹಂತವಾಗಿ ನಿರ್ಮಿಸಿ ಕೊಡಲಾಗುವುದು ಎಂದರು.

ಈ ಹಿಂದಿನ ಶಾಸಕರು ಸರ್ಕಾರದ ಅನುದಾನಗಳನ್ನು ಸಮರ್ಪಕವಾಗಿ ಬಳಸಿಕೊಂಡಿದ್ದರೆ ನಮ್ಮ ತಾಲೂಕನ್ನು ಮಾದರಿ ತಾಲೂಕಾಗಿ ಮಾಡಬಹುದಾಗಿತ್ತು. ಆದರೆ ಅವರು ಅಭಿವೃದ್ಧಿಗೆ ಗಮನ ಹರಿಸದಿರುವುದು ವಿಪರ್ಯಾಸ. ಹೀಗಾಗಿ ಕೆಲಸ ಮಾಡುವವರಿಗೆ ಜನರ ಸಹಕಾರ ಅಗತ್ಯ ಎಂದರು. ಈ ವೇಳೆ ತಾಪಂ ಇಓ ಕೃಷ್ಣ ಕುಮಾರ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ ಸೇರಿದಂತೆ ಸಾರ್ವಜನಿಕರಿದ್ದರು.

ಕೃಷಿ ಅಭಿಯಾನ ಪ್ರಚಾರ ರಥಯಾತ್ರೆಗೆ ಚಾಲನೆ



ತಿ.ನರಸೀಪುರ, ಜು.14– 'ಕೃಷಿ ಇಲಾಖೆ ನಡೆ ರೈತರ ಕಡೆ' ಘೋಷವಾಕ್ಯದಡಿ ಇಲಾಖೆ ಆಡಳಿತವನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಪ್ರಸಕ್ತ ಸಾಲಿನ ಕೃಷಿ ಅಭಿಯಾನ ಪ್ರಚಾರ ರಥಯಾತ್ರೆಗೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಚಾಲನೆ ನೀಡಿದರು.

ತಾಲೂಕಿನ ಹೆಳವರಹುಂಡಿ ಗ್ರಾಮದಲ್ಲಿ ರೈತರಿಗೆ ಮಾಹಿತಿ ನೀಡುವ ಪ್ರಚಾರ ರಥಯಾತ್ರೆ, ಭಿತ್ತಿಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ರೈತರು ತಮ್ಮ ಬೇಸಾಯ ಪದ್ಧತಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳಲು ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತರುತ್ತಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರತಾಪ್ ಸಿಂಹ ಹೇಳಿಕೆಗೆ ಕಿಡಿ: ಸಾಹಿತಿ ದೇವನೂರ ಮಹದೇವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಸಂಸದ ಪ್ರತಾಪ್ ಸಿಂಹ ಬಗ್ಗೆ ಕಿಡಿಕಾರಿದ ಯತೀಂದ್ರ, ಮಹದೇವರವರು ಯಾವುದೇ ಪಕ್ಷಕ್ಕೆ ಸೇರಿದವರಲ್ಲ. ಅವರು ಆರ್‌ಎಸ್‌ಎಸ್ ಬಗ್ಗೆ ಟೀಕೆ ಮಾಡಿದರೆ ಸಂಸದರು ಅವರನ್ನು ಪ್ರಶ್ನಿಸುತ್ತಾರೆ. ಇವರು ಆರ್‌ಎಸ್‌ಎಸ್‌ನಿಂದ ಆಯ್ಕೆಯಾಗಿದ್ದಾರೋ ಅಥವಾ ಜನರಿಂದ ಆಯ್ಕೆಯಾಗಿದ್ದಾರೋ ಎಂಬುದನ್ನು ಸಂಸದರು ಸ್ಪಷ್ಟಪಡಿಸಬೇಕಿದೆ ಎಂದರು

ಕೃಷಿ ಸಹಾಯಕ ನಿರ್ದೇಶಕಿ ಕೆ.ಎಸ್. ಸುಹಾಸಿನಿ ಮಾತನಾಡಿ, ಬೆಳೆ ಸಮೀಕ್ಷೆ ರಥವು ತಾಲೂಕಿನಾದ್ಯಂತ ಸಂಚಾರ ಮಾಡಲಿದ್ದು, ರೈತರು ಬೆಳೆ ದಾಖಲು, ರಸಗೊಬ್ಬರ ಬಳಕೆ ವಿಧಾನ, ವಿವಿಧ ಇಲಾಖೆಯಲ್ಲಿ ಕೃಷಿ ಕಾರ್ಯಕ್ಕೆ ಸಿಗುವ ಸಾಲ ಸೌಲಭ್ಯ ಸೇರಿದಂತೆ ಇತರೆ ಸೌಲಭ್ಯಗಳ ಮಾಹಿತಿ ಸಿಗುವುದು. ರೈತರು ಯೋಜನೆಯನ್ನು ಸದುಪಯೋಗ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಈ ವೇಳೆ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು, ರಮೇಶ್, ಮಹೇಶ್, ಅಮ್ಜದ್ ಖಾನ್, ಪುರಸಭಾ ಸದಸ್ಯ ಮೆಡಿಕಲ್ ನಾಗರಾಜು, ಜಯರಾಮು, ಹಾಲಪ್ಪ, ಮಹದೇವಸ್ವಾಮಿ, ಲಿಂಗರಾಜು, ರವಿ, ರೇವಣ್ಣ, ಸಹದೇವ್, ಗೋವಿಂದು, ಪುಟಸುಬ್ಬಯ್ಯ, ಕೃಷಿ ಅಧಿಕಾರಿಗಳಾದ ರಾಘವೇಂದ್ರ, ಕಾವ್ಯ, ವಿಜಯಲಕ್ಷ್ಮಿ, ಶಿವರಾಜು, ಶಿವಣ್ಣ, ವಿಶಾಲ್ ಇತರರಿದ್ದರು.

ಸಮರ್ಪಕ ಬಸ್ ಸೌಲಭ್ಯಕ್ಕೆ ಆಗ್ರಹಿಸಿ ಪ್ರತಿಭಟನೆ



> ನಮ್ಮ ಘಟಕದಿಂದ ಸಮರ್ಪಕ ಸಾರಿಗೆ ಸೇವೆ ಒದಗಿಸಲಾಗುತ್ತಿದೆ. ಆದರೂ ವಿದ್ಯಾರ್ಥಿಗಳು ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಲು ಮನವಿ ಮಾಡಿದ್ದಾರೆ. ಹೀಗಾಗಿ ನಾನೇ ಖುದ್ದಾಗಿ ಸರಗೂರಿಗೆ ಭೇಟಿ ನೀಡಿ ಯಾವ ಗ್ರಾಮಗಳಿಗೆ ಬಸ್ ಸೌಲಭ್ಯಗಳಿಲ್ಲವೊ ಆ ಗ್ರಾಮಗಳಿಗೆ ಬಸ್ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳುತ್ತೇನೆ.
> – ತ್ಯಾಗರಾಜು, ಹೆಚ್.ಡಿ.ಕೋಟೆ ಡಿಪೋ ಮ್ಯಾನೇಜರ್.

ಸರಗೂರು, ಜು.14– ಸಮರ್ಪಕ ಬಸ್ ಸೌಲಭ್ಯಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪಟ್ಟಣದ ಬಸ್ ನಿಲ್ದಾಣದ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಬಸ್ ನಿಲ್ದಾಣದ ಎದುರು ಜಮಾಯಿಸಿದ ವಿದ್ಯಾರ್ಥಿಗಳು, ಸಾರಿಗೆ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಅವರು, ತಾಲೂಕಿನ ಗ್ರಾಮೀಣ ಭಾಗಗಳಿಗೆ ಸಮರ್ಪಕ ಬಸ್ ಸೌಲಭ್ಯವಿಲ್ಲದೇ ಪ್ರಯಾಣಿಕರು ಸೇರಿದಂತೆ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಇದರಿಂದ ಖಾಸಗಿ ವಾಹನಗಳನ್ನು ಅವಲಂಬಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಬಸ್ ಇಲ್ಲದೇ ಸಮಯಕ್ಕೆ ಸರಿಯಾಗಿ ತರಗತಿಗೆ ತೆರಳಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಬೆಳಗ್ಗೆ, ಸಂಜೆ ಬಸ್‌ಗಾಗಿ ಕಾಯಬೇಕಾಗಿದೆ. ಅಲ್ಲದೇ ಬಸ್‌ಗಳು ಕಡಿಮೆ ಸಂಖ್ಯೆಯಲ್ಲಿ ಸಂಚರಿಸುವುದರಿಂದ ಬಸ್‌ನಲ್ಲಿ ಹೆಚ್ಚಿನ ಪ್ರಯಾಣಿಕರು ಪ್ರಯಾಣಿಸುತ್ತಾರೆ. ಹೀಗಾಗಿ ಪ್ರಯಾಣಿಕರು, ಶಾಲಾ ಕಾಲೇಜುಗಳ ಅನುಕೂಲಕ್ಕಾಗಿ ಬೆಳಗ್ಗೆ, ಸಂಜೆ ಹೆಚ್ಚುವರಿ ಬಸ್ ಸೌಲಭ್ಯ ಒದಗಿಸುವ ಮೂಲಕ ಅನುಕೂಲ ಮಾಡಿಕೊಡಬೇಕು ಎಂದು ಹಂಚೀಪುರ ಗ್ರಾಪಂ ಸದಸ್ಯರಾದ ಬಸವಣ್ಣ, ಚನ್ನಿಪುರ ಮಲ್ಲೇಶ್, ಸೇರಿದಂತೆ ವಿದ್ಯಾರ್ಥಿಗಳು, ಸಾರ್ವಜನಿಕರು ಒತ್ತಾಯಿಸಿದರು. ಸ್ಥಳಕ್ಕೆ ಸರಗೂರು ಠಾಣಾ ಎಎಸ್‌ಐ ಗೋವಿಂದ, ದಫೇದಾರ್ ಶ್ರೀಕಂಠಸ್ವಾಮಿ, ನಾಗನಾಯಕ, ಮಹಮದ್ ಇಮ್ರಾನ್ ಭೇಟಿ ನೀಡಿ ಸಮರ್ಪಕ ಬಸ್ ಕಲ್ಪಿಸಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈಜಲು ನದಿಗೆ ಹಾರಿದ ಯುವಕ ನಾಪತ್ತೆ



ನಂಜನಗೂಡು, ಜು.14– ತುಂಬಿ ಹರಿಯುತ್ತಿರುವ ಕಪಿಲಾ ನದಿಗೆ ಈಜಲು ಹಾರಿದ ಯುವಕನೋರ್ವ ನೀರಿನಲ್ಲಿ ನಾಪತ್ತೆಯಾದ ಘಟನೆ ನಗರದ ಹೆಜ್ಜಿಗೆ ಸೇತುವೆ ಬಳಿ ನಡೆದಿದೆ.

ನಗರದ ನೀಲಕಂಠನಗರದ ನಿವಾಸಿ ಅಬ್ದುಲ್ ರಹೀಂ ಪಾಷ(23) ನಾಪತ್ತೆಯಾದ ಯುವಕ. ಈತ ತನ್ನ ಇಬ್ಬರು ಸ್ನೇಹಿತರೊಂದಿಗೆ ಬುಧವಾರ ಈಜಲು ಹೆಜ್ಜಿಗೆ ಸೇತುವೆಯಿಂದ ಕಪಿಲಾ ನದಿಗೆ ಹಾರಿದ್ದಾರೆ. ಇಬ್ಬರು ಯುವಕರು ನದಿಯಿಂದ ಈಜಿ ದಡ ಸೇರಿದರೆ, ಅಬ್ದುಲ್ ರಹೀಂಪಾಷ ದಡ ಸೇರಿಲ್ಲ. ಈತ ನೀರಿನ ಸೆಳೆತಕ್ಕೆ ಕೊಚ್ಚಿಕೊಂಡು ಹೋಗಿರಬಹುದು ಎಂದು ರಕ್ಷಣಾ ತಂಡಗಳು ನದಿಯಲ್ಲಿ ಹುಡುಕಾಟ ನಡೆಸಿವೆ. ಆದರೆ ಯುವಕನ ತಂದೆ ಮುನಾವರ್ ಪಾಷಾ ನನ್ನ ಮಗನನ್ನು ಜೊತೆಗಿದ್ದವರೆ ಸಂಚು ರೂಪಿಸಿ ಕೊಲೆಗೈದಿದ್ದಾರೆ. ಆತ ಬಟ್ಟೆ ಹಾಗೂ ಚಪ್ಪಲಿ ಬಿಚ್ಚದೆ ನೀರಿಗೆ ಬಿದ್ದಿದ್ದಾನೆ. ಆದ್ದರಿಂದ ಜೊತೆಗಿದ್ದವರೇ ಕೊಲೆ ಗೈದಿರಬಹುದೆಂಬ ಅನುಮಾನ ಮೂಡಿದೆ ಎಂದು ಆರೋಪಿಸಿದ್ದಾರೆ. ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿಲ್ಲ.

ಬೈಕ್‌ನಲ್ಲಿದ್ದ 4 ಲಕ್ಷ ರೂ. ಕಳವು

ಪಿರಿಯಾಪಟ್ಟಣ, ಜು.14– ಸೌದೆ ವ್ಯಾಪಾರಿಯೊಬ್ಬರ ಬೈಕ್ ಕವರ್‌ನಲ್ಲಿದ್ದ 4 ಲಕ್ಷ ರೂ. ದೋಚಿರುವ ಘಟನೆ ಗುರುವಾರ ಮಧ್ಯಾಹ್ನ ಪಟ್ಟಣದ ತುಳಸಿ ಜ್ಯುವೆಲರ್ಸ್ ಎದುರು ನಡೆದಿದೆ.

ಪಟ್ಟಣದ ಸೌದೆ ವ್ಯಾಪಾರಿ ಪರಮೇಶ್ ಎಂಬುವರೇ ಹಣ ಕಳೆದುಕೊಂಡವರು. ಇವರು ಇಂದು ಮಧ್ಯಾಹ್ನ ಪಟ್ಟಣದ ಕೆ.ಆರ್.ಫೈನಾನ್ಸ್‌ನಲ್ಲಿ 4 ಲಕ್ಷ ರೂ. ಸಾಲ ಪಡೆದಿದ್ದು, ಹಣವನ್ನು ತಮ್ಮ ಫ್ಯಾಷನ್ ಪ್ರೊ ಬೈಕ್(ಕೆಎ.45, ಕೆ.4636)ನ ಪೆಟ್ರೋಲ್ ಟ್ಯಾಂಕ್ ಕವರ್‌ನಲ್ಲಿರಿಸಿ, ಪಟ್ಟಣದ ತುಳಸಿ ಜ್ಯುವೆಲರ್ಸ್ ಅಂಗಡಿಗೆ ತೆರಳಿ ಅಂಗಡಿ ಮಾಲೀಕನಿಗೆ ಕೊಡಬೇಕಾಗಿದ್ದ 50 ಸಾವಿರ ರೂ.ಗಳನ್ನು ಕೊಟ್ಟು ಬರುವಷ್ಟರಲ್ಲಿ ದುಷ್ಕರ್ಮಿಗಳು ಬೈಕ್‌ನಲ್ಲಿದ್ದ 4 ಲಕ್ಷ ರೂ. ಎಗರಿಸಿ ಪರಾರಿಯಾಗಿದ್ದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಿವೃತ್ತರಾದ ತಿ.ನರಸೀಪುರ ತಾಲೂಕಿನ ರೇಷ್ಮೆ ನಿರೀಕ್ಷಕ ಆಂಜನೇಯ ಅವರನ್ನು ಕೆಂಪಯ್ಯನ ಹುಂಡಿ ರೇಷ್ಮೆ ಬೆಳೆಗಾರರು ಅಭಿನಂದಿಸಿದರು. ಈ ವೇಳೆ ರೇಷ್ಮೆ ಸಹಾಯಕ ನಿರ್ದೇಶಕ ಕೃಷ್ಣ, ನಿವೃತ್ತ ಉಪ ನಿರ್ದೇಶಕ ಚಿಗರಿ, ಗ್ರಾಪಂ ಮಾಜಿ ಸದಸ್ಯ ಮಹೇಶ್, ಮಹದೇವಸ್ವಾಮಿ, ಚನ್ನೇಗೌಡ, ಸುರೇಶ, ರಾಜು, ಗವಿಗೌಡ, ಮಧು, ಶಂಕರ್, ರಘು, ದೀಪುಮತ್ತಿತರರಿದ್ದರು.

ಹುಲಿ ಪ್ರತ್ಯಕ್ಷ

ಹಂಪಾಪುರ, ಜು.14– ಇಲ್ಲಿನ ಪುರ, ಕಂಚಮಳ್ಳಿ, ಮಹದೇವನಗರ ಸುತ್ತಮುತ್ತಲ ಗ್ರಾಮಗಳಲ್ಲಿ ಬುಧವಾರ ಸಂಜೆ ಹುಲಿ ಪ್ರತ್ಯಕ್ಷವಾಗಿದೆ.

ಪುರ ಗ್ರಾಮದ ರೈತ ಮಹದೇವ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಜಾನುವಾರುಗಳೊಂದಿಗೆ ಮನೆಗೆ ತೆರಳುತ್ತಿದ್ದ ವೇಳೆ ಹುಲಿ ಪ್ರತ್ಯಕ್ಷವಾಗಿದ್ದು, ಅರಣ್ಯ ಇಲಾಖೆಗೆ ವಿಷಯ ಮುಟ್ಟಿಸಿದ್ದಾರೆ.

ಎಟಿ&ಎಸ್ ಕಾರ್ಮಿಕರ ಪ್ರತಿಭಟನೆ 500 ದಿನ ಪೂರೈಕೆ ಹಿನ್ನೆಲೆ ವಿವಿಧ ಸಂಘಟನೆಗಳಿಂದ

ಜನತಾ ನ್ಯಾಯಾಲಯ ಚಳವಳಿ



ನಂಜನಗೂಡು, ಜು.14– ಎಟಿ&ಎಸ್ ಕಾರ್ಖಾನೆ ಕಾರ್ಮಿಕರ ಪ್ರತಿಭಟನೆ 500 ದಿನ ಪೂರೈಸಿದ ಹಿನ್ನೆಲೆಯಲ್ಲಿ ಕಾರ್ಮಿಕರ ಚಳವಳಿ ಬೆಂಬಲಿಸಿ ರೈತ, ದಲಿತ, ಕಾರ್ಮಿಕ ಸಂಘಟನೆಗಳು ಜನತಾ ನ್ಯಾಯಾಲಯ ಚಳವಳಿ ನಡೆಸಿ ಕಾರ್ಖಾನೆ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದವು.

ಮುಖಂಡ ಉಗ್ರ ನರಸಿಂಹೇಗೌಡ ಮಾತನಾಡಿ, ಕಾರ್ಖಾನೆಯಲ್ಲಿ 12 ವರ್ಷಕ್ಕೂ ಹೆಚ್ಚು ಕಾಲ ಕೆಲಸ ಮಾಡಿದವರನ್ನು ಖಾಯಂಗೊಳಿಸಿ ವೇತನ ಹೆಚ್ಚಿಸುವಂತೆ 120 ಮಂದಿ ಕಾರ್ಮಿಕರು ನ್ಯಾಯಾಲಯದ ಮೊರೆ ಹೋಗಿದ್ದರು. ಇದನ್ನೇ ಗುರಿಯಾಗಿಸಿಕೊಂಡ ಕಾರ್ಖಾನೆ ಕ್ಷುಲ್ಲಕ ಕಾರಣ ನೀಡಿ 120 ಕಾರ್ಮಿಕರನ್ನು ವಜಾಗೊಳಿಸಿ ಟ್ರೈನಿ ಹೆಸರಿನಲ್ಲಿ ಮರು ನೇಮಕಾತಿ ಮಾಡಿಕೊಂಡಿತ್ತು. ಕೊರೊನಾ ಸಂದರ್ಭ ಗೈರು ಹಾಜರಾಗಿದ್ದನ್ನು ಗುರಿಯಾಗಿಸಿಕೊಂಡು 72 ಮಂದಿ ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ವಜಾಗೊಳಿಸಲಾಯಿತು. ಕಾರ್ಖಾನೆ ಆಡಳಿತ ಮಂಡಳಿ ನಿಲುವನ್ನು ಪ್ರಶ್ನಿಸಿ, ಮರು ನೇಮಕಾತಿ ಮಾಡಿಕೊಳ್ಳುವಂತೆ ಒತ್ತಾಯಿಸಿ ಕಳೆದ 500 ದಿನಗಳಿಂದಲೂ ಹೋರಾಟ ನಡೆಸುತ್ತಾ ಬಂದಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಜನಪ್ರತಿನಿಧಿಗಳು, ಕಾರ್ಮಿಕ ಇಲಾಖೆ ಅಧಿಕಾರಿಗಳ ಮಾತಿಗೂ ಬೆಲೆ ನೀಡದೆ ಕಾರ್ಖಾನೆ ಆಡಳಿತ ಮಂಡಳಿ ಅನ್ಯಾಯವೆಸಗುತ್ತಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಚಂದ್ರಶೇಖರ್ ಮೇಟಿ, ಜನಸಂಗ್ರಾಮ ಪರಿಷತ್ ನಗರ್ಲೆ ವಿಜಯಕುಮಾರ್, ದಸಂಸ ಸಂಚಾಲಕ ಕಾರ್ಯ ಬಸವಣ್ಣ, ಚುಂಚನಹಳ್ಳಿ ಮಲ್ಲೇಶ್, ಮಲ್ಲಹಳ್ಳಿ ನಾರಾಯಣ, ಮಂಜು, ಸುರೇಶ್, ಚೋರನಹಳ್ಳಿ ಶಿವಣ್ಣ, ಕೃಷ್ಣಮೂರ್ತಿ, ಮಹೇಶ್, ರವಿಚಂದ್ರ, ಅಂಬೇಡ್ಕರ್ ಸೇನೆ ಅಧ್ಯಕ್ಷ ನಾಗೇಂದ್ರ, ರೈತ ಮುಖಂಡರಾದ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಬಿಎಸ್ಪಿ ಪಕ್ಷ ಶ್ರೀಕಂಠ ಸೇರಿದಂತೆ ಕಾರ್ಮಿಕರಿದ್ದರು.

ಪ್ರತಿಭಟನಾ ಸ್ಥಳಕ್ಕೆ ಶಾಸಕ ಹರ್ಷವರ್ಧನ್ ಭೇಟಿ

ಕಾರ್ಮಿಕರ ಜನತಾ ನ್ಯಾಯಾಲಯ ಪ್ರತಿಭಟನಾ ಸ್ಥಳಕ್ಕೆ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಕಾರ್ಮಿಕರ ಹೋರಾಟದ ಬಗ್ಗೆ ಈ ಹಿಂದೆ ಕಾರ್ಮಿಕ ಸಚಿವರಾಗಿದ್ದ ಜಗದೀಶ್ ಶೆಟ್ಟರ್ ಗಮನಕ್ಕೆ ತರಲಾಗಿತ್ತು. ಅಲ್ಲದೆ ಕಳೆದ ಕೆಲ ದಿನಗಳ ಹಿಂದೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆಯಲ್ಲಿ ಕಾರ್ಮಿಕ ಇಲಾಖೆ ಅಧಿಕಾರಿಗಳನ್ನು ಕರೆಸಿ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸುವ ಪ್ರಯತ್ನ ನಡೆಸಲಾಗಿತ್ತು. ಆದರೆ ಕಾರ್ಖಾನೆ ಆಡಳಿತ ಮಂಡಳಿ ಪ್ರಕರಣ ನ್ಯಾಯಾಲಯದಲ್ಲಿರುವ ಕಾರಣ ನೀಡಿತ್ತು. ಮುಂದಿನ ವಾರದಲ್ಲಿ ಮತ್ತೊಮ್ಮೆ ಸಂಸದರ ಅಧ್ಯಕ್ಷತೆಯಲ್ಲಿ ಕಾರ್ಮಿಕರು, ಸಂಘಟನೆಗಳ ಮುಖಂಡರ ಜೊತೆಗೂಡಿ ಕಾರ್ಮಿಕ ಇಲಾಖೆ ಅಧಿಕಾರಿಗಳು ಹಾಗೂ ಕಾರ್ಖಾನೆ ಆಡಳಿತ ಮಂಡಳಿ ಅವರನ್ನು ಕರೆಸಿ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ಅಂತ್ಯಗೊಳಿಸಲಾಯಿತು.

ಮೈಸೂರು ಬೇಸಿಗೆ ರೇಸುಗಳು

9ನೇ ದಿನ, ಶುಕ್ರವಾರ 15–7–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.00 ಗಂಟೆಗೆ)

I. ಅರಿಸ್ಟೋಕ್ರಾಟ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.1.00ಕ್ಕೆ
1. ಲಕ್ಕಿಸನ್ 2. ಕಂಟ್ರೇಸ್ ಡಿಲೈಟ್ 3. ನ್ಯೂಸ್ ಮೇಕರ್

II. ಇನ್ ದಿ ಸ್ಪಾಟ್ ಲೈಟ್ ಪ್ಲೇಟ್–1100 ಮೀ. 3 ವರ್ಷ (ಟರ್ಮ್ಸ್). ಮ.1.30ಕ್ಕೆ
1. ಸ್ಮಾರ್ಟ್ ಕ್ಯಾಡಿಲಾಕ್ 2. ಮಿಲೋಸ್ 3. ರಾಜ್

III. ಕಾಂಚನ ಗಂಗಾ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಡೀನ್ಸ್‌ಗಾಲ್ 2. ಮಾರ್ಗನೈಟ್ 3. ಡಿಫೈರ್

IV. ಪಶ್ಚಿಮವಾಹಿನಿ ಪ್ಲೇಟ್ ಡಿ2–1200 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1. ವೈಲ್ಡ್ ಸ್ಪೆಲ್ 2. ಚೆರೂಕಿ ಮೂನ್ 3. ನಾವಲ್ ರೆಸ್‌ಲರ್

V. ವಾರಣಾಸಿ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಗ್ರೇಟ್ ಹೋಪ್ 2. ಕೊಯೊಟೆ ಗರ್ಲ್ 3. ದಿ ದುರ್ಗಾ

VI. ಕೋನಾರ್ಕ್ ಪ್ಲೇಟ್–1400 ಮೀ. ರೇಟೆಡ್ 60 ರಿಂದ 85 ಸಂ.3.30ಕ್ಕೆ
1. ಬ್ರೂನ್ ಹಿಲ್ಡ್ 2. ಆಲ್‌ಗ್ರೇಟ್ ಫ್ರೆಂಡ್ಸ್ 3. ರೈಸಿಂಗ್ ಸನ್

VII. ಮೈಸೂರ್ ಕೋಲ್ಟ್ಸ್ ಟ್ರೈಲ್ಸ್ ಸ್ಟೇಕ್ಸ್ 2022–1400 ಮೀ. 3 ವರ್ಷ ಟರ್ಮ್ಸ್). ಸಂ.4.00ಕ್ಕೆ
1. ಅಶ್ವಮಗಧೀರ 2. ಇಂಡಿಯನ್ ಪೇಟ್ರಿಯಟ್ 3. ಸ್ಪಿಲ್ ಐ ರೈಸ್

VIII. ಕಬಿನಿ ಮಿಲಿಯನ್ 2022–1600 ಮೀ. 4 ವರ್ಷ ಮತ್ತು ಮೇಲ್ಪಟ್ಟು. ಸಂ.4.30ಕ್ಕೆ
1. ಪ್ರೈಸ್‌ಲೆಸ್ ಗೋಲ್ಡ್ 2. ತೈಮೂರ್ 3. ಚಾಶಿನಿ

IX. ಪಶ್ಚಿಮವಾಹಿನಿ ಪ್ಲೇಟ್ ಡಿ1–1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ನೊಟೊರಿಟಿ 2. ಬ್ಲಾಕ್ ಕಾಫಿ 3. ರಿತಮಿಕ್

ದಿನದ ಅತ್ಯುತ್ತಮ	: ಅಶ್ವಮಗಧೀರ
ಡಬ್ಬಲ್	: ಡೀನ್ಸ್‌ಗಾಲ್, ಪ್ರೈಸ್‌ಲೆಸ್ ಗೋಲ್ಡ್
ಜಾಕ್‌ಪಾಟ್	: 5, 6, 7, 8 ಮತ್ತು 9
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
III ಟ್ರಿಬಲ್	: 7, 8 ಮತ್ತು 9
ಎಕ್ಸ್‌ಆಕ್ಸ್	: 8 ಮತ್ತು 9

ಟಿಪ್‌ಸ್ಟರ್ ಪಿಜಿಸಿ

ಪನ್ನೀರ್ ಸೆಲ್ವಂ ಪುತ್ರರು ಸೇರಿ 18 ನಾಯಕರು
ಎಐಎಡಿಎಂಕೆಯಿಂದ ಉಚ್ಚಾಟನೆ

ಚೆನ್ನೈ: ಓ ಪನ್ನೀರ್ ಸೆಲ್ವಂ (ಓಪಿಎಸ್) ಅವರನ್ನು ಪಕ್ಷದಿಂದ ಉಚ್ಚಾಟಿಸಿದ ಬೆನ್ನಲ್ಲೇ ಇ ಕೆ ಪಳನಿಸ್ವಾಮಿ ನೇತೃತ್ವದ ತಮಿಳುನಾಡಿನ ಪ್ರತಿಪಕ್ಷ ಎಐಎಡಿಎಂಕೆ, ಓಪಿಎಸ್ ಅವರ ಇಬ್ಬರು ಪುತ್ರರು ಸೇರಿದಂತೆ 18 ನಾಯಕರನ್ನು ಪಕ್ಷದಿಂದ ಉಚ್ಚಾಟಿಸಿದೆ. ಪಕ್ಷದ ಮೇಲೆ ಏಕ ವ್ಯಕ್ತಿ ನಾಯಕತ್ವ ಹಿಡಿತದ ಹಗ್ಗಜಗ್ಗಾಟದ ನಡುವೆಯೇ ಪನ್ನೀರ್‌ಸೆಲ್ವಂ ಅವರನ್ನು ಸೋಮವಾರ ಉಚ್ಚಾಟಿಸಲಾಗಿತ್ತು.

AIADMK

ಎಐಎಡಿಎಂಕೆ ಹಂಗಾಮಿ ಪ್ರಧಾನ ಕಾರ್ಯದರ್ಶಿ ಕೆ.ಪಳನಿಸ್ವಾಮಿ ಅವರು ಇಂದು ಉಚ್ಚಾಟಿತ ನಾಯಕ ಓ ಪನ್ನೀರ್ ಸೆಲ್ವಂ ಅವರ ಪುತ್ರರಾದ, ತೇಣಿ ಕ್ಷೇತ್ರದ ಎಐಎಡಿಎಂಕೆ ಸಂಸದ ರವೀಂದ್ರನಾಥ್ ಮತ್ತು ಜಯಪ್ರದೀಪ್ ಹಾಗೂ ಮಾಜಿ ಸಚಿವ ವೆಲ್ಲಮಂಡಿ ಎನ್.ನಟರಾಜನ್ ಸೇರಿದಂತೆ 18 ನಾಯಕರನ್ನು ಉಚ್ಚಾಟಿಸಲಾಗಿದೆ.

ಈ 18 ಮಂದಿ ಪಕ್ಷದ ಹಿತಾಸಕ್ತಿ, ತತ್ವಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದು, ಸಂಘಟನೆಗೆ ಕಳಂಕ ತಂದಿದ್ದಾರೆ. ಹೀಗಾಗಿ ಶಿಸ್ತು ಕ್ರಮದ ಭಾಗವಾಗಿ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ ಎಂದು ಪಕ್ಷದ ಪ್ರಕಟಣೆಯಲ್ಲಿ ಪಳನಿಸ್ವಾಮಿ ತಿಳಿಸಿದ್ದಾರೆ. ಕಳೆದ ಸೋಮವಾರ, ಪಕ್ಷದ ನಿರ್ಣಾಯಕ ಜನರಲ್ ಕೌನ್ಸಿಲ್ ಸಭೆಗೆ ಮದ್ರಾಸ್ ಹೈಕೋರ್ಟ್ ಅನುಮತಿ ನೀಡಿದ್ದರಿಂದ, ಸಭೆಯಲ್ಲಿ ಪಕ್ಷದ ನಾಯಕ ಎಡಪ್ಪಾಡಿ ಕೆ ಪಳನಿಸ್ವಾಮಿ(ಇಪಿಎಸ್) ಅವರನ್ನು ಎಐಎಡಿಎಂಕೆಯ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಓಪಿಎಸ್ ಸೇರಿದಂತೆ ಅವರ ಬೆಂಬಲಿಗರಾದ ಆರ್.ವೈತಿಲಿಂಗಂ ಮತ್ತು ಪಿ.ಎಚ್.ಮನೋಜ್ ಪಾಂಡಿಯನ್ ಅವರನ್ನೂ ಪಕ್ಷದಿಂದ ಉಚ್ಚಾಟಿಸುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

CHANGE OF NAME

I, Adarsh, S/o K. Ravindranath, residing at No. 255, 7th "B" Main Road, 1st Stage, Hebbal, Metagalli Post, Mysore-570 016, have changed my name from Adarsh to Adarsh R. Bharadwaj, on my own free will, in front of Notary C. Mangala on 13.7.2022. I declare that at all times hereafter in all records, deeds and writings and in all proceedings and transactions, I shall be called and sign by the name of Adarsh R. Bharadwaj.

Sd/- Adarsh R. Bharadwaj

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರಾದೆಯ ಮೇರೆಗೆ,

ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮೂಗನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಮಾದೇಗೌಡ ರವರ ಮಗ ಶ್ರೀ ಮಾದೇಗೌಡ ಉರುಫ್ ದೊಡ್ಡಹೈದೇಗೌಡ (ಆಧಾರ್ ಸಂಖ್ಯೆ: 5724 1266 9549) ರವರ ಹಾಗೂ ಮಾದೇಗೌಡ ಉರುಫ್ ದೊಡ್ಡಹೈದೇಗೌಡ ರವರ 1ನೇ ಮಗ ಶ್ರೀ ಮಲ್ಲಿಕಾರ್ಜುನ (ಆಧಾರ್ ಸಂಖ್ಯೆ: 7140 1534 5016) ಹಾಗೂ ಮಾದೇಗೌಡ ರವರ ಉರುಫ್ ದೊಡ್ಡಹೈದೇಗೌಡ ರವರ 2ನೇ ಮಗ ಶ್ರೀ ಮಂಜು ಎಂ. (ಆಧಾರ್ ಸಂಖ್ಯೆ 7779 0833 5451) ಮತ್ತು ಮಾದೇಗೌಡ ಉರುಫ್ ದೊಡ್ಡಹೈದೇಗೌಡ ರವರ 3ನೇ ಮಗ ಶ್ರೀ ಮಹೇಶ್ (ಆಧಾರ್ ಸಂಖ್ಯೆ 9996 1765 3850) ಹಾಗೂ ಮಲ್ಲಿಕಾರ್ಜುನ ರವರ ಮಗ ಸುಮಾರು 28 ವರ್ಷ ವಯಸ್ಸಿನ ಶ್ರೀ ಅವಿನಾಶ್ ಎಂ. (ಆಧಾರ್ ಸಂಖ್ಯೆ 4302 8619 1129) ಅವರುಗಳಿಗೂ ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ 5–7–2022 ರ ನೋಂದಾಯಿತ ಕ್ರಯದ ಕರಾರಿನ ಮೂಲಕ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದುಕೊಡಲು ಸಿದ್ಧರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅವಹಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ನೋಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

1. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 74/3 ರಲ್ಲಿ 0.26 ಗುಂಟೆ ವಿಸ್ತೀರ್ಣದ ಜಮೀನು ಎಂ.ಆರ್. ಸಂಖ್ಯೆ 2/1991–92 ರಂತೆ ಮಾದೇಗೌಡ ಉರುಫ್ ದೊಡ್ಡಹೈದೇಗೌಡ ರವರ ಹೆಸರಿನಲ್ಲಿರುವ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 35/1 ರಲ್ಲಿ ಮಾದೇಗೌಡರವರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 75 ರಲ್ಲಿ ಅರಮನೆ ಕಾವಲು ಜಮೀನು ; ಉತ್ತರಕ್ಕೆ: ಸರ್ವೆ ನಂ. 74/1 ರಲ್ಲಿ ದೊಡ್ಡೇಗೌಡ ರವರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 74/2, 74/4 ರಲ್ಲಿ ಮಹದೇವು & ಕುಳ್ಳೇಗೌಡ ರವರ ಜಮೀನು.
2. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 35/1 ರಲ್ಲಿ 0.17 ಗುಂಟೆ ವಿಸ್ತೀರ್ಣದ ಜಮೀನು ಎಂ.ಆರ್. ಸಂಖ್ಯೆ 4/2000–2001 ರಂತೆ ಮಾದೇಗೌಡ ರವರ ಹೆಸರಿನಲ್ಲಿರುವ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 36 ರಲ್ಲಿ ನೈರುತ್ಯ ರೈಲ್ವೆ ಬಡಾವಣೆ : ಪಶ್ಚಿಮಕ್ಕೆ: ಸರ್ವೆ ನಂ. 74/3 ಮತ್ತು 74/2 ರಲ್ಲಿ ಮಾದೇಗೌಡ ಮತ್ತು ಕುಳ್ಳೇಗೌಡ ರವರ ಜಮೀನು ; ಉತ್ತರಕ್ಕೆ: ಸರ್ವೆ ನಂ. 74/1 ರಲ್ಲಿ ದೊಡ್ಡೇಗೌಡ ರವರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 34/1, 34/2 ಹಾಗೂ 35/2 ರಲ್ಲಿ ನಾಗರಾಜು ಮಾಲತಿ ರವರ ಜಮೀನು.

ಕಕ್ಷಿದಾರರ ಪರ ವಕೀಲರು
ಸಹಿ/– ಶ್ರೀ ಪಾಲಾಕ್ಷ, ವಕೀಲರು
ನಂ. 645, ಮೊದಲನೇ ಮಹಡಿ, ಸೀತಾವಿಳಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
ದಿನಾಂಕ: 8.7.2022 ಮೊಬೈಲ್: 9448075718

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರಾದೆಯ ಮೇರೆಗೆ,

ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮೂಗನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಪಟೇಲ್ ಸತ್ತಿಗೇಗೌಡ ಅವರ 4ನೇ ಮಗ ಸುಮಾರು 68 ವರ್ಷ ವಯಸ್ಸು ಶ್ರೀ ದೊಡ್ಡೇಗೌಡ (ಆಧಾರ್ ಸಂಖ್ಯೆ: 9722 5513 0720) ಹಾಗೂ ದೊಡ್ಡೇಗೌಡ ರವರ 1ನೇ ಮಗ ಸುಮಾರು 41 ವರ್ಷ ವಯಸ್ಸು ಶ್ರೀ ಅಶ್ವಥ್ ಹಾಗೂ ದೊಡ್ಡೇಗೌಡ ರವರ 2ನೇ ಮಗ ಸುಮಾರು 31 ವರ್ಷ ವಯಸ್ಸಿನ ಶ್ರೀ ಮಾಲೇಗೌಡ ರವರಿಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ 4–7–2022 ರ ನೋಂದಾಯಿತ ಕ್ರಯದ ಕರಾರಿನ ಮೂಲಕ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು, ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದು ಕೊಡಲು ಸಿದ್ಧರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅವಹಾಲು ಹಾಗೂ ತಕರಾರನ್ನು, ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ನೋಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 74/1 ರಲ್ಲಿ 2 ಎಕರೆ 31 ಗುಂಟೆ ವಿಸ್ತೀರ್ಣದ ಜಮೀನು ಎಂ.ಆರ್. ಸಂಖ್ಯೆ 10/1988–89 ರಂತೆ ದೊಡ್ಡೇಗೌಡ ರವರ ಹೆಸರಿನಲ್ಲಿರುವ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 36 ರಲ್ಲಿ ನೈರುತ್ಯ ರೈಲ್ವೆ ಬಡಾವಣೆ ; ಪಶ್ಚಿಮಕ್ಕೆ: ಸರ್ವೆ ನಂ. 73 ರಲ್ಲಿ ಶಿವಣ್ಣ ಮತ್ತು ಚಿಕ್ಕಮ್ಮ ರವರ ಜಮೀನು ; ಉತ್ತರಕ್ಕೆ: ಸರ್ವೆ ನಂ. 71 ರಲ್ಲಿ ಮಹಾದೇವು ರವರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 74/3 ರಲ್ಲಿ ಮಾದೇಗೌಡ ರವರ ಜಮೀನು.

ಕಕ್ಷಿದಾರರ ಪರ ವಕೀಲರು
ಸಹಿ/– ಶ್ರೀ ಪಾಲಾಕ್ಷ, ವಕೀಲರು
ನಂ. 645, ಮೊದಲನೇ ಮಹಡಿ, ಸೀತಾವಿಳಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
ದಿನಾಂಕ: 8.7.2022 ಮೊಬೈಲ್: 9448075718

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರಾದೆಯ ಮೇರೆಗೆ,

ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮೂಗನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶಾಂತೇಗೌಡ ರವರ ಮಗ ಸುಮಾರು 53 ವರ್ಷ ವಯಸ್ಸಿನ ಶ್ರೀ ಕುಳ್ಳೇಗೌಡ (ಆಧಾರ್ ಸಂಖ್ಯೆ: 8982 0461 9406) ರವರಿಗೂ ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ 4–7–2022 ರ ನೋಂದಾಯಿತ ಕ್ರಯದ ಕರಾರಿನ ಮೂಲಕ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು, ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದುಕೊಡಲು ಸಿದ್ಧರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅವಹಾಲು ಹಾಗೂ ತಕರಾರನ್ನು, ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ನೋಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 74/2 ರಲ್ಲಿ 13.08 ಗುಂಟೆ ವಿಸ್ತೀರ್ಣದ ಜಮೀನು ಎಂ.ಆರ್. ಸಂಖ್ಯೆ 3/2013–14 ರಂತೆ ಕುಳ್ಳೇಗೌಡ ರವರ ಹೆಸರಿನಲ್ಲಿರುವ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 35/1 ಮತ್ತು 35/2 ರಲ್ಲಿ ನಾಗರಾಜು ಮತ್ತು ಮಾಲತಿ ರವರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 75 ರಲ್ಲಿ ಅರಮನೆ ಕಾವಲು ಜಮೀನು ; ಉತ್ತರಕ್ಕೆ: ಸರ್ವೆ ನಂ. 74/3 ರಲ್ಲಿ ಮಾದೇಗೌಡ ರವರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 75 ರಲ್ಲಿ ಅರಮನೆ ಕಾವಲು ಜಮೀನು.

ಕಕ್ಷಿದಾರರ ಪರ ವಕೀಲರು
ಸಹಿ/– ಶ್ರೀ ಪಾಲಾಕ್ಷ, ವಕೀಲರು
ನಂ. 645, ಮೊದಲನೇ ಮಹಡಿ, ಸೀತಾವಿಳಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
ದಿನಾಂಕ: 8.7.2022 ಮೊಬೈಲ್: 9448075718

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರಾದೆಯ ಮೇರೆಗೆ,

ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮೂಗನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶಾಂತೇಗೌಡ ರವರ ಮಗ ಸುಮಾರು ವರ್ಷ 54 ವಯಸ್ಸು ಶ್ರೀ ಮಹದೇವು (ಆಧಾರ್ ಸಂಖ್ಯೆ: 9118 6221 6020) ರವರಿಗೂ ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ 4–7–2022 ರ ನೋಂದಾಯಿತ ಕ್ರಯದ ಕರಾರಿನ ಮೂಲಕ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು, ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದುಕೊಡಲು ಸಿದ್ಧರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅವಹಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ನೋಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 74/4 ರಲ್ಲಿ 13.08 ಗುಂಟೆ ವಿಸ್ತೀರ್ಣದ ಜಮೀನು ಎಂ.ಆರ್. ಸಂಖ್ಯೆ 4/2013–14 ರಂತೆ ಮಹದೇವ ರವರ ಹೆಸರಿನಲ್ಲಿರುವ ಈ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 74/2 ರಲ್ಲಿ ಕುಳ್ಳೇಗೌಡ ರವರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 75 ರಲ್ಲಿ ಅರಮನೆ ಕಾವಲು ಜಮೀನು ; ಉತ್ತರಕ್ಕೆ: ಸರ್ವೆ ನಂ. 74/3 ರಲ್ಲಿ ಮಾದೇಗೌಡ ರವರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 75 ರಲ್ಲಿ ಅರಮನೆ ಕಾವಲು ಜಮೀನು.

ಕಕ್ಷಿದಾರರ ಪರ ವಕೀಲರು
ಸಹಿ/– ಶ್ರೀ ಪಾಲಾಕ್ಷ, ವಕೀಲರು
ನಂ. 645, ಮೊದಲನೇ ಮಹಡಿ, ಸೀತಾವಿಳಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
ದಿನಾಂಕ: 8.7.2022 ಮೊಬೈಲ್: 9448075718

ಜಿಲ್ಲಾ ಪಂಚಾಯತ್ ಕಾರ್ಯಾಲಯ

ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ – 571313

ಇ-ಮೇಲ್: ceochanagar@gmail.com ದೂರವಾಣಿ ಸಂಖ್ಯೆ: 08226-224013 ಫ್ಯಾಕ್ಸ್ ಸಂಖ್ಯೆ: 08226-224014

ಸಂಖ್ಯೆ:ಜಿ.ಪಂ.ಚಾ/ಅದಾ/E–ಟೆಂಡರ್/01/2022–23 ದಿನಾಂಕ: 08/07/2022

Providing Services of Data Entry Operators E-Procurement ಮೂಲಕ ಪಡೆಯುವ ಬಗ್ಗೆ

E-PROCUREMENT TENDER NOTIFICATION
(Website: www.eproc.karanataka.gov.in)

2022–23ನೇ ಸಾಲಿಗೆ ಅಕ್ಷರ ದಾಸೋಹ ಕಾರ್ಯಕ್ರಮ ಜಿಲ್ಲಾ ಪಂಚಾಯತ್ ಚಾಮರಾಜನಗರ ಜಿಲ್ಲೆಗೆ ಒಬ್ಬರು ಕಂಪ್ಯೂಟರ್ ಆಪರೇಟರ್ ಹಾಗೂ ತಾಲ್ಲೂಕುಗಳಿಗೆ ಅಗತ್ಯವಿರುವ ನಾಲ್ಕು ಕಂಪ್ಯೂಟರ್ ಆಪರೇಟರ್‌ಗಳು ಮತ್ತು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಗೆ ಒಬ್ಬರು ಕಂಪ್ಯೂಟರ್ ಆಪರೇಟರ್ ಮತ್ತು ಒಬ್ಬರು ಡಿ ಗ್ರೂಪ್ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಆಗಸ್ಟ್–2022 ರ ಮಾಹೆಯಿಂದ ಮಾರ್ಚ್ –2023 ರವರೆಗೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ 1999. ನಿಯಮಗಳು ಪ್ರಕಾರ ನೊಂದಾಯಿತ ಮತ್ತು ಪರವಾನಗಿಯುಳ್ಳ ಅರ್ಹ ಏಜೆನ್ಸಿದಾರರು / ಸಂಸ್ಥೆಗಳಿಂದ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ನಿರ್ಧರಿಸಲಾಗಿದೆ.

1)	ಟೆಂಡರ್ ಪ್ರಕಟಣೆ ದಿನಾಂಕ	ಸಂಖ್ಯೆ : ಜಿಪಂಚಾ/ಅದಾ/01/2022–23 ದಿನಾಂಕ : 08/07/2022
2)	ಟೆಂಡರ್ ಫಾರಂ ಅಪ್‌ಲೊಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ: 12/07/2022
3)	ಟೆಂಡರ್ ಫಾರಂ ಅಪ್‌ಲೊಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 26/07/2022 ಸಂಜೆ 4.00 ಗಂಟೆಗೆ
4)	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಕೊಠಡಿ ಸಂಖ್ಯೆ : 3, ಜಿಲ್ಲಾ ಪಂಚಾಯತ್, ಚಾಮರಾಜನಗರ ದಿನಾಂಕ: 27/07/2022
5)	ಹಣಕಾಸಿನ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಕೊಠಡಿ ಸಂಖ್ಯೆ: 3, ಜಿಲ್ಲಾ ಪಂಚಾಯತ್, ಚಾಮರಾಜನಗರ ದಿನಾಂಕ: 30/07/2022 ಮಧ್ಯಾಹ್ನ 3.00 ಗಂಟೆಗೆ
6)	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ.50,000/–
7)	ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಕಾರ್ಯಕ್ರಮ, ಜಿಲ್ಲಾ ಪಂಚಾಯತ್, ಚಾಮರಾಜನಗರ, ಮೊಬೈಲ್ ನಂಬರ್ – 9739383162

ವಾ.ಸಾ.ಸಂ.ಇ/ಹಿಸನಿ/ಚಾ.ನಗರ/195/2022–23